ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 78,516 | ನಿಫ್ಟಿ 24,378

ಮಹಿ ಅಭ್ಯಾಸ
ಮುಂಬೈನಲ್ಲಿ ಗುರುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಆಡಲಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರು ತಾಲೀಮು ನಡೆಸಿದರು

ಕದನ ವಿರಾಮ ವಿಸ್ತರಿಸಿದ ಟ್ರಂಪ್

ಇರಾನ್ ಬಂದರುಗಳ ಮೇಲಿನ ದಿಗ್ಬಂಧನ ಮುಂದುವರಿಕೆ: ಅಮೆರಿಕ
ಹೊರ್ಮುಜ್ ದಾಟಲು ಯತ್ನಿಸಿದ ಹಡಗುಗಳ ಮೇಲೆ ಇರಾನ್ ದಾಳಿ

ವಾಷಿಂಗ್ಟನ್/ ಇಸ್ಲಾಮಾಬಾದ್ (ಪಿಟಿಐ): ಇರಾನ್ ವಿರುದ್ಧದ ಎರಡು ವಾರಗಳ ಕದನ ವಿರಾಮ ಮುಕ್ತಾಯಗೊಳ್ಳುವ ಕೆಲವೇ ಗಂಟೆಗಳ ಮುನ್ನ, ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಅದನ್ನು ಇರಾನ್ ಒಪ್ಪಿಕೊಂಡಿದೆ.

ಈ ಮೂಲಕ ಏಳು ವಾರಗಳಿಂದ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು ಇರಾನ್‌ಗೆ ಒಮ್ಮತದ ಪ್ರಸ್ತಾವ ಮಂಡಿಸಲು ಅಮೆರಿಕ ಇನ್ನಷ್ಟು ಸಮಯಾವಕಾಶ ಕಲ್ಪಿಸಿದೆ. ಮಧ್ಯವರ್ತಿ ಪಾಕಿಸ್ತಾನದ ಕೋರಿಕೆಯ ಮೇರೆಗೆ ಕದನ ವಿರಾಮ ವಿಸ್ತರಿಸಲು ಒಪ್ಪಿಕೊಂಡಿದ್ದಾಗಿ ಟ್ರಂಪ್ ಹೇಳಿದ್ದಾರೆ. 'ಎರಡನೇ ಸುತ್ತಿನ ಶಾಂತಿ ಮಾತುಕತೆ ಶುಕ್ರವಾರ ಪ್ರಾರಂಭವಾಗಬಹುದು' ಎಂದೂ ಅವರು ಹೇಳಿದ್ದಾರೆ.

ಕದನ ವಿರಾಮ ವಿಸ್ತರಣೆಯ ಘೋಷಣೆ ಹೊರಬಿದ್ದ ಕೆಲ ಕ್ಷಣಗಳಲ್ಲಿಯೇ ಹೊರ್ಮುಜ್ ಜಲಸಂಧಿ ದಾಟಲು ಯತ್ನಿಸಿದ ಮೂರು ಹಡಗುಗಳನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದ್ದು, ಅವುಗಳಲ್ಲಿ ಎರಡನ್ನು ವಶಕ್ಕೆ ಪಡೆದಿದೆ. ಇದು ಕದನ ವಿರಾಮ ಮತ್ತು ಶಾಂತಿ ಮಾತುಕತೆ ಕುರಿತು ಅನಿಶ್ಚಿತತೆ ಮೂಡುವಂತೆ ಮಾಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ತನ್ನ ಪ್ರದೇಶದಲ್ಲಿ ಉಳಿದಿರುವ ಆಸ್ತಿಯ ರಕ್ಷಣೆಗಾಗಿ ಶತ್ರುಗಳ ವಿರುದ್ಧ ಕಲ್ಪನೆಗೂ ಮೀರಿದ ಹೊಡೆತಗಳನ್ನು ನೀಡುತ್ತೇವೆ' ಎಂದು ಐಆರ್‌ಜಿಸಿ ಬುಧವಾರ ಆಕ್ರೋಶ ವ್ಯಕ್ತಪಡಿಸಿದೆ. 12

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ಭಾರತದ ಭದ್ರತೆ ಮತ್ತು ಆರ್ಥಿಕ ಸ್ಥಿರತೆ ಮೇಲೆ ಬೀರುತ್ತಿರುವ ಪರಿಣಾಮವನ್ನು ಎದುರಿಸಲು ಸಂಘಟಿತ ಕಾರ್ಯತಂತ್ರ ಅಳವಡಿಸಿಕೊಂಡಿದ್ದೇವೆ
ರಾಜನಾಥ ಸಿಂಗ್, ರಕ್ಷಣಾ ಸಚಿವ

ಕದನ ವಿರಾಮ ವಿಸ್ತರಣೆಯ ಘೋಷಣೆಯು ಅಮೆರಿಕ ಮತ್ತು ಇರಾನ್ ನಡುವೆ ರಾಜತಾಂತ್ರಿಕ ಸಂಬಂಧ ಮತ್ತು ವಿಶ್ವಾಸ ವೃದ್ಧಿಗೆ ನೆರವಾಗಲಿದೆ
ಆಂಟೊನಿಯೊ ಗುಟೆರೆಸ್, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಹೊರ್ಮುಜ್ ಜಲಸಂಧಿ

ದಿನದ ಬೆಳವಣಿಗೆಗಳು

- ಇಸ್ರೇಲ್ ಮತ್ತು ಲೆಬನಾನ್ ನಡುವಿನ ಕದನ ವಿರಾಮ ವಿಸ್ತರಣೆಗೆ ಸಂಬಂಧಿಸಿದಂತೆ ಮಾತುಕತೆ ನಡೆಯುತ್ತಿದೆ ಎಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ತಿಳಿಸಿದ್ದಾರೆ
- ಇಸ್ರೇಲ್ ಪರವಾಗಿ ಗೂಢಚಾರಿಕೆಯಲ್ಲಿ ತೊಡಗಿದ್ದ ವ್ಯಕ್ತಿಗೆ ಇರಾನ್ ಬುಧವಾರ ಮರಣದಂಡನೆ ಜಾರಿಗೊಳಿಸಿದೆ
- ಹೊರ್ಮುಜ್ ಜಲಸಂಧಿಯಲ್ಲಿ ಸಮುದ್ರದೊಳಗಿನ ಕೇಬಲ್‌ಗಳು ದುರ್ಬಲವಾಗಿವೆ ಎಂದು ಇರಾನಿನ ಸುದ್ದಿ ಸಂಸ್ಥೆ ಹೇಳಿದೆ

ಭಾರತದತ್ತ ಸಾಗುತ್ತಿದ್ದ ಹಡಗಿನ ಮೇಲೂ ದಾಳಿ

ನವದೆಹಲಿ/ ದುಬೈ: ಇರಾನ್ ದಾಳಿ ನಡೆಸಿ ವಶಪಡಿಸಿಕೊಂಡಿರುವ ಹಡಗುಗಳಲ್ಲಿ ಒಂದು ಭಾರತದತ್ತ ಸಾಗುತ್ತಿತ್ತು ಎಂದು ಗೊತ್ತಾಗಿದೆ.

ಮೂರು ಹಡಗುಗಳು ಲೈಬೀರಿಯಾ ಧ್ವಜ ಹೊಂದಿದ್ದ ಎಪಾಮಿನೊಂಡಾಸ್, ಪನಾಮ ಧ್ವಜ ಹೊಂದಿದ್ದ ಎಂಎಸ್‌ಸಿ ಫ್ರಾನ್ಸೆಸ್ಕಾ, ಯುಫೋರಿಯಾ ಎಂದು ಬಿಬಿಸಿ ಮತ್ತು ಇರಾನ್ ಮಾಧ್ಯಮ ಗುರುತಿಸಿವೆ. ಇದರಲ್ಲಿ ಎಪಾಮಿನೊಂಡಾಸ್ ಗುಜರಾತಿನ ಮುಂದ್ರಾ ಬಂದರಿನತ್ತ ತೆರಳುತ್ತಿತ್ತು ಎಂದು ಮೂಲಗಳು ತಿಳಿಸಿವೆ.

ಕಂಟೇನರ್‌ಗಳಿದ್ದ ಈ ಹಡಗುಗಳ ಮೇಲೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ದಾಳಿ ಮಾಡಿ, ಹಾನಿಗೊಳಿಸಿದೆ. ಆದರೆ ಯಾವುದೇ ಸಿಬ್ಬಂದಿಗೆ ಗಾಯಗಳಾಗಿಲ್ಲ ಎಂದು 'ದಿ ಯುನೈಟೆಡ್ ಕಿಂಗ್‌ಡಮ್ ಮೇರಿಟೈಮ್ ಟ್ರೇಡ್ ಆರ್ಗನೈಸೇಷನ್' ಹೇಳಿದೆ.

ಖರ್ಗೆಗೆ ಚುನಾವಣಾ ಆಯೋಗ ನೋಟಿಸ್

ವಿವರ ಪುಟ 13

ಚಿನಕುರುಳಿ ಪ್ರಕಾಶ್ ಶೆಟ್ಟಿ

ಫಲಿತಾಂಶ ಇಂದು

ಎಸ್‌ಎಸ್‌ಎಲ್‌ಸಿ: ಹಿಂದಿಗೂ ಸಿಗಲಿದೆ ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಏ.23ರಂದು ಮಧ್ಯಾಹ್ನ 12ಕ್ಕೆ ಪ್ರಕಟವಾಗಲಿದೆ.

2025-26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಯ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡಬೇಕೆಂಬ ಹೈಕೋರ್ಟ್ ಆದೇಶ ಪಾಲಿಸಿ, ಕಳೆದ ವರ್ಷದಂತೆಯೇ 625 ಅಂಕಗಳನ್ನೂ ಪರಿಗಣಿಸಿ ಫಲಿತಾಂಶ ಪ್ರಕಟಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ಯಲ್ಲಿ ಬುಧವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ.

ಫಲಿತಾಂಶವನ್ನು https://karresults.nic.in ಜಾಲತಾಣ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕ ಪಡೆಯಬಹುದು. 6

ಮುಂದಿನ ವರ್ಷ 'ಗ್ರೇಡ್'

ಹೈಕೋರ್ಟ್ ಆದೇಶದಂತೆ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಅಂಕ ನೀಡಲು ನಿರ್ಧರಿಸಿರುವ ಶಾಲಾ ಶಿಕ್ಷಣ ಇಲಾಖೆ, 2026-27ನೇ ಶೈಕ್ಷಣಿಕ ಸಾಲಿನಿಂದ ಗ್ರೇಡ್ ನೀಡಲಿದೆ. 6

ಕರಾಳ ದಿನಕ್ಕೆ ವರ್ಷ

ಪಹಲ್ಗಾಮ್ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನ ಪ್ರವಾಸಿ ತಾಣದಲ್ಲಿ 'ಲಷ್ಕರ್ ಎ ತಯಬಾ' ಉಗ್ರ ಸಂಘಟನೆಯ ಮೂವರು ಭಯೋತ್ಪಾದಕರು ಪ್ರವಾಸಿಗರ ಮೇಲೆ ಗುಂಡಿನ ದಾಳಿ ನಡೆಸಿ, 26 ಮಂದಿ ಮೃತಪಟ್ಟ ಘಟನೆಗೆ ಒಂದು ವರ್ಷ ಕಳೆದಿದೆ. ದಾಳಿಯನ್ನು ನೆನೆದು, ಉಗ್ರರ ಕೃತ್ಯವನ್ನು ಖಂಡಿಸಿ ದೇಶದಾದ್ಯಂತ ಬುಧವಾರ ಪ್ರತಿಭಟನೆಗಳು, ಮೆರವಣಿಗೆಗಳು ನಡೆದವು.

ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ವಿವಿಧ ಪಕ್ಷಗಳ ನಾಯಕರು ಉಗ್ರರ ಕೃತ್ಯವನ್ನು ಖಂಡಿಸಿ, ಮೃತರನ್ನು ನೆನಪಿಸಿಕೊಂಡು ಪೋಸ್ಟ್ ಹಂಚಿಕೊಂಡಿದ್ದಾರೆ. ಮೃತ 26 ಮಂದಿಯಲ್ಲಿ ಕರ್ನಾಟಕದ ಇಬ್ಬರು ಇದ್ದರು. ಉಗ್ರರ ದಾಳಿಗೆ ಪ್ರತ್ಯುತ್ತರವಾಗಿ ಭಾರತವು 'ಸಿಂಧೂರ' ಮತ್ತು 'ಮಹಾದೇವ್' ಕಾರ್ಯಾಚರಣೆಗಳನ್ನು ನಡೆಸಿತು. ದಾಳಿಯ ಬಳಿಕ ಜಮ್ಮು ಮತ್ತು ಕಾಶ್ಮೀರದ ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದಿತ್ತು. ದಾಳಿ ನಡೆದ ಪ್ರದೇಶವು ಈಗಲೂ ಪ್ರವಾಸಿಗರಿಗೆ ಮುಕ್ತವಾಗಿಲ್ಲ. ಆದರೆ, ವರ್ಷದ ಬಳಿಕ ಇಲ್ಲಿ ಎಲ್ಲವೂ ಸಹಜಸ್ಥಿತಿಯತ್ತ ಮರಳುತ್ತಿದೆ. ಭದ್ರತೆಯನ್ನೂ ಹೆಚ್ಚಿಸಲಾಗಿದೆ.

ವಿವರ ಪುಟ 13

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಸಾಧಾರಣ ಮಳೆ ಸಾಧ್ಯತೆ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ

ಜಿಲ್ಲಾ ನ್ಯಾಯಾಲಗಳ ಸಂಕೀರ್ಣ ಆವರಣ ಕೋಲಾರ–563101
ದೂರವಾಣಿ ಸಂಖ್ಯೆ:08152–222402/222403, ಇ–ಮೇಲ್:
jd-kolar@karnatakaindustry.gov.in, jddickolar2022@gmail.com

ನಂ.ಕೋ/ಜಿಕೈಕೆ/ದ್ವಿದಸ/ವಾ.ಧ.ಪ.ಪ್ರ/03/2026–27

ದಿನಾಂಕ:22.04.2026

ದರಪಟ್ಟಿ ಪ್ರಕಟಣೆ

2026–27ನೇ ಸಾಲಿಗೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರರವರಿಗೆ ಮಾಸಿಕ ಬಾಡಿಗೆ ಆಧಾರದಲ್ಲಿ ಸರ್ಕಾರಿ ಆದೇಶ ಸಂಖ್ಯೆ FD 03 TFP 2023, ಬೆಂಗಳೂರು, ದಿನಾಂಕ:13.04.2023ರ ಅನ್ವಯ ವಾಹನ ಪಡೆಯುವ ಕುರಿತು ದರಪಟ್ಟಿಯನ್ನು ಆಹ್ವಾನಿಸಲಾಗಿದೆ. **ದಿನಾಂಕ: 28.04.2026 ರಂದು ಮಧ್ಯಾಹ್ನ 3.00ರ** ಒಳಗಾಗಿ ಈ ಕಛೇರಿಗೆ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ಅರ್ಹರು ಸಲ್ಲಿಸಲು ಕೋರಲಾಗಿದೆ ಹಾಗೂ **ಅದೇ ದಿನ ಮಧ್ಯಾಹ್ನ 3.30 ಘಂಟೆಗೆ ದರಪಟ್ಟಿಗಳನ್ನು ಸರಬರಾಜುದಾರರ ಸಮ್ಮುಖದಲ್ಲಿ ತೆರೆದು ಅಂತಿಮಗೊಳಿಸಲಾಗುವುದು.** ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟು ಅನುಮೋದಿಸುವ ಮತ್ತು ತಿರಸ್ಕರಿಸುವ ಹಕ್ಕು/ಅಧಿಕಾರವು ಇಲಾಖೆಯು ಕಾಯ್ದಿರಿಸಿಕೊಂಡಿದೆ. ವಾಹನದ ಮಾದರಿ ಹಾಗೂ ಪೂರಕ ಷರತ್ತುಗಳ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಭೇಟಿ ಮಾಡಿ ಮಾಹಿತಿ ಪಡೆಯತಕ್ಕದ್ದು.

ಸಹಿ/– ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ

ವಾಸಾಸಂಇ/ಕೋಲಾರ/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ:43/2026–27

ಆಯುಕ್ತರ ಫೋಟೊ ಬಳಸಿ ವಂಚನೆ ಯತ್ನ

ಬೆಂಗಳೂರು: ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅವರ ಭಾವಚಿತ್ರವನ್ನು ವಾಟ್ಸ್‌ಆ್ಯಪ್ ಡಿ.ಪಿಗೆ ಬಳಸಿ ವಂಚನೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸುನಿಲ್ ಕುಮಾರ್ ಅವರ ಸ್ನೇಹಿತ ಎಚ್.ಅಮರೇಶ್‌ಗೆ ಸಂದೇಶ ಕಳುಹಿಸಿ ಹಣ ಕೇಳಲಾಗಿತ್ತು' ಎಂದು ಪಾಲಿಕೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಂ.ಎಂ.ಅಕ್ಷತ್ ಅವರು ದೂರು ನೀಡಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 14/2026, ದಿನಾಂಕ: 17.04.2026

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. **ಟೆಂಡರು ಮುಕ್ತಾಯದ ಸಮಯ: 10:30 ಗಂಟೆ.**

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರ ಕೊನೆಯ ದಿನಾಂಕ
1	46261064	25 ಕೆವಿ, ಎಸಿ, 50 ಹರ್ಟ್ಜ್, ಸಿಂಗಲ್ ಫೇಸ್‌ಗಾಗಿ ಪೋರ್ಸ್‌ಲೈನ್ ಬ್ರಾಕೆಟ್ ಇನ್ಸುಲೇಟರ್‌ಗಳು	2189 ನಂ.	**04.05.2026**
2	45265007	4.5 ಕಿವ್ಯಾ ಅಂಡರ್ ಸ್ಲಂಗ್ ಕಾನ್‌ಸ್ಟೆಂಟ್ ವೋಲ್ಟೇಜ್ ರೆಗ್ಯುಲೇಟರ್	265 ನಂ.	**16.05.2026**
3	38261614	ನಾನ್ ಆಸ್ಬೆಸ್ಟಸ್ ಕೆ ಟೈಪ್ ಬ್ರೇಕ್ ಬ್ಲಾಕ್	17296 ನಂ.	**18.05.2026**
4	45261288ಬಿ	9 ಮಾಡ್ಯೂಲ್‌ಗಳ, ತಲಾ 12 ವೋಲ್ಟ್‌ಗಳನ್ನೊಳಗೊಂಡಿರುವ 110 ವೋಲ್ಟ್, 70 ಎಹೆಚ್‌ನ ವಿಆರ್‌ಎಲ್‌ಎ ಬ್ಯಾಟರಿ ಸೆಟ್	719 ಸೆಟ್‌ಗಳು	**25.05.2026**
5	38251579	ಅಡಾಪ್ಟರ್ ನಾರೋ ಜಾವ್ ಕ್ಲಾಸ್ ಇ 61x1	14068 ನಂ.	**29.05.2026**
6	33261390	ಏರ್ ಸ್ಪ್ರಿಂಗ್ ಅಸೆಂಬ್ಲಿಯ (160 ಕೆಎನ್ ಸಾಮರ್ಥ್ಯವುಳ್ಳ) ಒಂದು ಕೋಚ್ ಸೆಟ್	94 ಸೆಟ್‌ಗಳು	**11.06.2026**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/49/AAF/PRB/SWR/2026-27 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಪತ್ನಿ ಆತ್ಮಹತ್ಯೆ: ಪತಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿಯ ಆನ್‌ಲೈನ್ ಬೆಟ್ಟಿಂಗ್, ಮದ್ಯಪಾನದ ಚಟದಿಂದ ಬೇಸತ್ತು ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕನಗಾ(28) ಆತ್ಮಹತ್ಯೆ ಮಾಡಿಕೊಂಡವರು. ಕನಗಾ ಅವರ ಸಹೋದರಿ ನೀಡಿದ ದೂರಿನ ಮೇರೆಗೆ ಪತಿ ಶಂಕರ್ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದ ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಎ.ನಾರಾಯಣಪುರದ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಕನಗಾ ಅವರು ಪತಿಯ ಜತೆಗೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು. ದಂಪತಿಯ ನಡುವೆ ಜಗಳವಾಗಿತ್ತು. ಇದರಿಂದ ಬೇಸತ್ತು ಕನಗಾ, ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.

'2023ರಲ್ಲಿ ತಮಿಳುನಾಡಿನ ಶಂಕರ್ ಜತೆಗೆ ಕನಗಾ ಮದುವೆಯಾಗಿತ್ತು. ದಂಪತಿಗೆ ಎರಡು ವರ್ಷದ ಗಂಡು ಮಗುವಿದೆ. ಮೊದಲ ಎರಡು ವರ್ಷ ತಮಿಳುನಾಡಿನ ಪತಿಯ ಮನೆಯಲ್ಲಿ ಕನಗಾ ವಾಸವಿದ್ದರು. ಶಂಕರ್ ಅವರು ಆನ್‌ಲೈನ್ ಬೆಟ್ಟಿಂಗ್, ಮದ್ಯ ಸೇವಿಸಲು ಸಾಲ ಮಾಡಿಕೊಂಡಿದ್ದರು. ಸಾಲ ತೀರಿಸಲು ಸಾಧ್ಯವಾಗದೇ ಪತ್ನಿಯೊಂದಿಗೆ ನಿತ್ಯ ಗಲಾಟೆ ಮಾಡುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಗಲಾಟೆ ವಿಷಯವು ಕನಗಾ ಕುಟುಂಬದವರಿಗೆ ಗೊತ್ತಾಗಿತ್ತು. ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಎ.ನಾರಾಯಣಪುರದಲ್ಲಿ ಬಾಡಿಗೆ ಮನೆ ಮಾಡಿಕೊಟ್ಟಿದ್ದರು. ಕೆಲವು ದಿನ ಕಳೆದ ಮೇಲೆ ಶಂಕರ್ ಸಹ ಬೆಂಗಳೂರಿಗೆ ಬಂದಿದ್ದರು. ಮನೆಯಲ್ಲಿ ಗಲಾಟೆ ನಡೆದು, ಬೇಸತ್ತು ಕನಗಾ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಕರವೇ ಅಧ್ಯಕ್ಷರಿಗೆ ಬೆದರಿಕೆ: ಎಫ್‌ಐಆರ್

ಬೆಂಗಳೂರು: ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆ ಹಾಕಿದ್ದ ಆರೋಪದ ಅಡಿ ಮೂವರ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಹೇಶ್ ವಿಕ್ರಂ ಹೆಗ್ಡೆ, ಕೆ.ಬಿ. ಮುರಳೀಧರ್ ಹಾಗೂ ಸುಭಾಷ್ ಮಾಳಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕರವೇ ಬೆಂಗಳೂರು ಘಟಕದ ಉಪಾಧ್ಯಕ್ಷ ಪಿ.ಎನ್.ಕಾರ್ತಿಕ್ ನೀಡಿದ ದೂರಿನ ಮೇಲೆ ಈ ಹಿಂದೆ ಎನ್‌ಸಿಆರ್ ದಾಖಲು ಮಾಡಿಕೊಳ್ಳಲಾಗಿತ್ತು. ಇದೀಗ ನ್ಯಾಯಾಲಯದ ಸೂಚನೆ ಮೇರೆಗೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಸಾಮಾಜಿಕ ಜಾಲತಾಣ ವೀಕ್ಷಣೆ ಮಾಡುತ್ತಿರುವಾಗ ಆರೋಪಿಗಳು ನಾರಾಯಣಗೌಡ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿರುವುದು ಕಂಡುಬಂದಿತ್ತು ಎಂದು ಕಾರ್ತಿಕ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–514/2025–26/328/2026–27 ದಿನಾಂಕ: 22.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ವ್ಯವಸಾಯ ವಲಯದಲ್ಲಿದ್ದು ವಸತಿಗೆ ಭೂ ಉಪಯೋಗ ಆಗಿರುತ್ತದೆ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಕೆ.ಜೆ.ವಿಕ್ರಮ್ ನಂ. 398, 11ನೇ ಮುಖ್ಯರಸ್ತೆ, 3ನೇ ಹಂತ, ಕೋರಮಂಗಲ, ಬೆಂಗಳೂರು–560034	ಆನೇಕಲ್	ಜಿಗಣಿ	ಹುಲಿಮಂಗಲ	347/3	1–00	ವಸತಿ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನ ಸುತ್ತಮುತ್ತ ವಾಣಿಜ್ಯ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರೆ ವಾಣಿಜ್ಯ ಉದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನನ್ನು **'ವಸತಿ ವಲಯ'** ದಿಂದ **'ವಾಣಿಜ್ಯ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24 x 7). @BDAOfficialGoK

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ & ಜಾಹೀರಾತು ಮತ್ತು ವಿವಿಧ ಗುತ್ತಿಗೆಗಳಿಗಾಗಿ ಇ–ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ–ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ:

1. **ಕೇಟರಿಂಗ್ & ಎಂಪಿಎಸ್ ಸ್ಟಾಲ್‌ಗಳು:** 28.04.2026, 28.04.2026, 22.05.2026, 29.05.2026
2. **ಪಾರ್ಕಿಂಗ್ & ಪಾವತಿ ಮತ್ತು ಬಳಕೆ:** 24.04.2026, 28.04.2026, 05.05.2026, 20.05.2026, 21.05.2026, 27.05.2026, 28.05.2026
3. **ಪಾರ್ಸೆಲ್‌ಗಳು:** 24.04.2026, 07.05.2026, 08.05.2026, 14.05.2026, 15.05.2026
5. **ಜಾಹೀರಾತು, ಎಟಿಎಂ & ವಿವಿಧ:** 24.04.2026, 28.04.2026, 11.05.2026, 12.05.2026, 13.05.2026, 14.05.2026, 15.05.2026, 18.05.2026, 19.05.2026, 25.05.2026, 26.05.2026

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು

PUB/50/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಕಂದಾಯ ಭವನ, 3ನೇ ಮಹಡಿ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ – 562159
ದೂ.: 72591 98192, ಇ–ಮೇಲ್: gbbscpa@gmail.com

ಸಂಖ್ಯೆ: GBDA/CLU/03/2026-27 ದಿನಾಂಕ: 18.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವ್ಯವಸಾಯ'** ವಲಯದಿಂದ **'ವಸತಿ'** ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಜಮೀನಿಗೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಆಯುಕ್ತರು, ಗ್ರೇಟರ್ ಬೆಂಗಳೂರ ಅಭಿವೃದ್ಧಿ ಪ್ರಾಧಿಕಾರ, ರಾಮನಗರ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾಯೋಜನೆ ಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	**ಗಿರೀಶ್ ಡಿ ಬಿನ್ ಪುರಷೋತ್ತಮ್ ನಾಯ್ಡು,** ನಂ. 52, 5ನೇ ಕ್ರಾಸ್, ಅಶ್ವ ಟಿ.ವಿ.ಎಸ್. ಮೋಟರ್ಸ್‌ನ ಹತ್ತಿರ, ಗುರುರಾಜ ಬಡಾವಣೆ, 3ನೇ ಸ್ಟೇಜ್, ಬೆಂಗಳೂರು ದಕ್ಷಿಣ, ಬೆಂಗಳೂರು–560085	ಬೆಂಗಳೂರು ದಕ್ಷಿಣ ತಾಲ್ಲೂಕು	ಉತ್ತರಹಳ್ಳಿ – 3	ನಾಗನಾಯಕನ ಹಳ್ಳಿ	40/2	01–00	'ವ್ಯವಸಾಯ'	'ವಸತಿ'
					ಒಟ್ಟು	**01–00**		

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು / ಬರುತ್ತಿದ್ದು, ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಸತಿ'** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–,
ನಗರ ಯೋಜಕ ಸದಸ್ಯರು,
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ರಾಮನಗರ

ವಾಸಾಸಂಇ/ವಾಪ್ರ/ಎಲ್‌ಸಿ/289/2026–27

PUBLIC NOTICE

The General Public is hereby notified that, my client has negotiated to purchase the **SCHEDULE PROPERTY** from its Owner's by Mr. S Ramagopal, aged about 76 years, S/o Late Sreenivasa Murthy K N, residing at No.285, 10th main Rd, 3rd Block, Jayanagar, Bengaluru -11, Aadhar no. 4144 1609 2900, PAN No.AAPPR7898J, Mr. Venugopal S, aged about 73 years, S/o Late Sreenivasa Murthy K N, residing at No. 285, 10th main Road, 3rd Block, Jayanagar, Bengaluru -11, Aadhar No. 5253 1429 5207, PAN No. AAGPV3541B, and **Ms. KALLUR,** aged about 72 years, daughter of Late Mr.K.N. Sreenivasa Murthy, residing at 5106 Calle Real #B, Santa Barbara, CA 93111 US Passport No. 592900560, PAN No. OGWPK2790D My client's vendor, during the negotiation have stated to my clients that they are exclusive Title Holders, Absolute owners of the SCHEDULE PROPERTY, which is under their possession and enjoyment, so also they are lawfully empowered and entitled to deal with the SCHEDULE PROPERTY including Sale, on the same my client's have agreed to purchase the SCHEDULE PROPERTY. The General Public are hereby notified not to enter into any negotiations with my client's vendor, or any persons acting on their behalf with respect to the SCHEDULE PROPERTY, or their GPA holder for sale or for any such transaction, which shall amount to transfer of title, interest, and possession, or any such transaction of what so ever nature, either through registered or unregistered document, any such person or persons, or organization, or registered bodies, since my client's have negotiated to purchase the same. Any such person proceeding any further shall be doing at their costs and risk, and such transaction shall not bind my client's in any manner, under law. Any 3rd parties or individuals,or any such persons,or legal entity or authorities, do having any such right or interest, over the SCHEDULE PROPERTY, are also requested and called upon, to contact the undersigned counsel with proper documents and proof, to that effect, **within 7 days** from the date of this Notice, failure, any such claim made subsequently, will not bind my client's, and my client's will proceed for the Sale Deed transaction.

SCHEDULE

All that piece and parcel of premises bearing No. 285, having new EPID No. 1278446700, situated at 10th Main Road, 3rd Block, Jayanagar, Bengaluru, with site measuring east to west 60 feet and north to south 40 feet totally measuring 2400 Square feet along with the standing building in the premises, bounded on;North by:Site bearing No. 286 South by: Site Bearing No.284 East by: 10th Main Road West by:Site Bearing No. 272

Shivaraj P N, ADVOCATE,Address: R/at No.130, 4th Cross Defence Layout, Vidhyaranyapura Bengaluru - 560 097 Phone No.: 8867644680Email: advshivaraj95@gmail.com

POST-OFFER ADVERTISEMENT IN ACCORDANCE WITH REGULATION 18(12) OF THE SECURITIES AND EXCHANGE BOARD OF INDIA (SUBSTANTIAL ACQUISITION OF SHARES AND TAKEOVERS) REGULATIONS, 2011, AS AMENDED, FOR THE ATTENTION OF THE PUBLIC SHAREHOLDERS OF

ADC INDIA COMMUNICATIONS LIMITED

Registered Office: No. 10C, 2nd Phase, 1st Main, Peenya Industrial Area, Bengaluru, Karnataka, India, 560058
Corporate Identification Number (CIN): L32209KA1988PLC009313
Tel: +91-8028396102 and 28396291; **Website:** www.adckcl.com

Open offer for acquisition of up to 11,96,000 (eleven lakhs ninety six thousand) fully paid-up equity shares of face value of INR 10 (Indian Rupees Ten) each (the "Equity Shares") of ADC India Communications Limited (the "Target Company"), representing 26.00% (twenty-six per cent) of the Voting Share Capital, from the Public Shareholders of the Target Company, by Amphenol Corporation (the "Acquirer") for the purpose of the Open Offer pursuant to and in compliance with the requirements of the Securities and Exchange Board of India (Substantial Acquisition of Shares and Takeovers) Regulations, 2011, as amended (the "SEBI (SAST) Regulations") (the "Open Offer")

This post-offer advertisement ("**Post-Offer Advertisement**") is being issued by Kotak Mahindra Capital Company Limited, the manager to the Open Offer ("**Manager**" or "**Manager to the Open Offer**"), for and on behalf of the Acquirer, in connection with the Open Offer to the Public Shareholders of the Target Company, in accordance with regulation 18(12) of the SEBI (SAST) Regulations.

This Post-Offer Advertisement should be read in continuation of, and in conjunction with the:

(a) public announcement dated August 6, 2025 ("**Public Announcement**" or "**PA**");

(b) detailed public statement dated January 14, 2026 which was published in the following Newspapers: Financial Express (English - all editions), Jansatta (Hindi - all editions), Navshakti (Marathi – Mumbai edition), and Prajavani (Kannada – Bengaluru edition) on January 15, 2026 and in the Ahmedabad edition of Financial Express on January, 16, 2026 since the Ahmedabad edition was not issued on January 15, 2026 on account of a regional holiday ("**Detailed Public Statement**" or "**DPS**");

(c) the letter of offer dated March 19, 2026 ("**Letter of Offer**" or "**LoF**"); and

(d) pre-offer advertisement cum corrigendum to the PA and the DPS dated March 31, 2026 which was published on April 1, 2026 in the following Newspapers: Financial Express (English – all editions), Jansatta (Hindi – all editions), Navshakti (Marathi – Mumbai edition) and Prajavani (Kannada – Bengaluru edition) ("**Pre-Offer Advertisement cum Corrigendum**").

This Post-Offer Advertisement is being published in all such Newspapers in which the Detailed Public Statement was published. Capitalized terms used but not defined in this Post-Offer Advertisement shall have the same meaning assigned to such terms in the Letter of Offer.

The Public Shareholders of the Target Company are requested to kindly note the following information with respect to the Open Offer:

1.	**Name of the Target Company**	ADC India Communications Limited
2.	**Name of the Acquirer(s) and PAC**	**Acquirer:** Amphenol Corporation **PAC:** None
3.	**Name of the Manager to the Offer**	Kotak Mahindra Capital Company Limited
4.	**Name of the Registrar to the Offer**	KFin Technologies Limited
5.	**Open Offer Details**	
	(a) Date of Opening of the Open Offer	April 2, 2026 (Thursday)
	(b) Date of Closure of the Open Offer	April 17, 2026 (Friday)
6.	**Date of payment of Consideration**	April 22, 2026 (Wednesday)

7. **Details of Acquisition:**

Sl.No	Particulars	Proposed in the Offer Document		Actuals	
7.1	Offer Price (per Equity Share)[1]	INR 1,233.59		INR 1,233.59	
7.2	Aggregate number of shares tendered	11,96,000[2]		14	
7.3	Aggregate number of shares accepted	11,96,000[2]		14	
7.4	Size of the Offer (Number of shares multiplied by offer price per share)	INR 147,53,73,640		INR 17,270.26	
7.5	Shareholding of the Acquirer before Agreements/ Public Announcement (No. & %)	Nil (0.00%)		Nil (0.00%)	
7.6	Shares Acquired by way of Agreements				
	• Number	Nil[3]		Nil[3]	
	• % of the Voting Share Capital	0.00%		0.00%	
7.7	Shares Acquired by way of Open Offer				
	• Number	11,96,000[2]		14	
	• % of the Voting Share Capital	26.00%[2]		0.00%	
7.8	Shares acquired after Detailed Public Statement • Number of shares acquired • Price of the shares acquired • % of the shares acquired	Nil (0.00%)		Nil (0.00%)	
7.9	Post offer shareholding of Acquirer (Number of Equity Shares and % of Voting Share Capital)	11,96,000[2] (26.00%)		14 (0.00%)	
7.10	Pre & Post offer shareholding of the Public	**Pre-offer[4]**	**Post-offer**	**Pre-offer[4]**	**Post-offer**
	• Number	12,86,963	90,963[1][2]	12,86,963	12,86,949
	• % of the Voting Share Capital	27.98%	1.98%[1][2]	27.98%	27.98%

Notes:

(1) *Price of INR 1,233.59 per Equity Share includes a price of INR 1,179.92 per Equity Share and an enhancement of INR 53.67 per Equity Share computed at the rate of 10.00% (ten per cent) per annum for the period between the date of entering into the Purchase Agreement i.e., August 3, 2025, and January 16, 2026, pursuant to Regulation 8(12) of SEBI (SAST) Regulations.*

(2) *Assuming full acceptance under the Open Offer.*

(3) *The Acquirer has not directly acquired any shares of the Target Company pursuant to the Underlying Transaction. Pursuant to the Purchase Agreement, the Acquirer has, inter alia, acquired 100% of the equity interests of CST, which is the indirect holding company of the Target Company. This has resulted in the indirect acquisition of 33,13,037 Equity Shares in the Target Company, constituting 72.02% of the Voting Share Capital of the Target Company.*

(4) *The pre Open Offer shareholding of the public is based on the shareholding as of March 16, 2026 i.e., Identified Date, as disclosed in the LoF.*

8. The Acquirer and its directors accept full responsibility for the information contained in this Post-Offer Advertisement (other than such information as has been obtained from public sources) or provided by or relating to and confirmed by the Target Company and also for the obligations under SEBI (SAST) Regulations.

9. A copy of this Post-Offer Advertisement is expected to be available on the websites of SEBI (www.sebi.gov.in), BSE (www.bseindia.com) and at the registered office of the Target Company.

kotak Investment Banking	**Kotak Mahindra Capital Company Limited** **Address:** 27BKC, 1st Floor, Plot No. C-27, 'G' Block, Bandra Kurla Complex, Bandra (East), Mumbai 400 051 **Contact Person:** Mr. Ganesh Rane **Tel. No.:** +91 22 4336 0758 **Fax No.:** +91 22 6713 2447 **Email:** adcindia.openoffer@kotak.com **SEBI Registration Number:** INM000008704 **Validity Period:** Permanent Registration
KFINTECH	**KFin Technologies Limited** **Address:** Selenium, Tower B, Plot No- 31 and 32, Financial District, Nanakramguda, Serilingampally, Hyderabad, Rangareddy 500 032, Telangana, India **Contact Person:** Mr. M. Murali Krishna **Tel. No.:** +91 40 6716 2222/18003094001 **Fax No.:** + 91 40 6716 1563 **Email:** adcindia.openoffer@kfintech.com **Investor Grievance E-mail:** einward.ris@kfintech.com **SEBI Registration Number:** INR000000221 **Validity Period:** Permanent Registration **CIN:** L72400MH2017PLC444072

Issued by the Manager to the Open Offer

For and on behalf of Amphenol Corporation (Acquirer)

Sd/-

Place : Wallingford, Connecticut
Date : April 22, 2026

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

BRIGHT WAY SCHOOL
No.105, 12th Main, Opp.BHCS Layout, Gowdanapalya, Bangalore-61
WALK-IN-INTERVIEW
Saturday: 25.04.2026 Time: 10.30 a.m - 1.30 p.m
Subject: English, Hindi - B.A, M.A / B.Ed
Physics, Mathematics - B.Sc, M.Sc / B.Ed
Dance - Senior Grade, Physical Education- B.PEd, M.PEd.
BRIGHT WAY PRE-UNIVERSITY COLLEGE
Principal: - M.Sc, M.A, M.Com / B.Ed
(Experience: 10 - 15 years)
(Resumes can be sent early to our E-mail)
Email: brightways.school@yahoo.in
Contact: 080 - 2639 6720, Mob: 92412 04762

Part-Time Jobs

WANTED HOUSEWIVES and Retired people for part time job opportunity in MNC company. Contact:- 8217042937.

BUILDERS ESSENTIAL

Water Proofing

'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING. MACBOND. 9448572697

PERSONAL

Lost

DOCUMENT LOST
I, Anirudha Srinivasa Bhat R/o # 20, 9th Cross, Ashoknagar, BSK I, Bangalore-50 have lost Original Sale deed dt. 29.03.1995 executed by M.Papaiah rep. by his GPA Holder K.N.Puttanka in favour of R.Gowramma - Doc.No.3898/94- 95, Book No.I, Vol.No. 1924, page No.41–46, dt.31.05.1995 and original GPA dt.07.11.1989 executed by M.Papaiah appointing K.N. Puttanka as his lawful Attorney, pertaining to Site No 27, Municipal No 19/27, situated at Sunkenahally, Bangalore; while in Transit. Finders Please call **Mob: 97400 66110** or nearby Police Station.

Change of Name

I, SHAILAJA R V D/o Rayadurga Vasanthamurthy residing at 2, Sankarshana, 3rd B cross, Gururaja layout, Doddanekkundi, Bangalore-560037, had Shailaja Jagannath as my name in passport and I declare both to be same. I will be henceforth known as Shailaja R V as sworn under notary in vide affidavit number IN-KA37152276739997Y

CONNECT

JOB
To Place your Classified Ads Contact:
9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಬೈಕ್ ಟ್ಯಾಕ್ಸಿ: 'ಸುಪ್ರೀಂ'ಗೆ ಮೇಲ್ಮನವಿ

ನಿಷೇಧದ ಆದೇಶವನ್ನು ತೆರವುಗೊಳಿಸಿದ್ದ ಹೈಕೋರ್ಟ್ ವಿಭಾಗೀಯ ಪೀಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಆಧಾರಿತ ಬೈಕ್ ಟ್ಯಾಕ್ಸಿಗಳ ಸಂಚಾರ ನಿಷೇಧವನ್ನು ತೆರವುಗೊಳಿಸಿರುವ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ವಿಶೇಷ ಮೇಲ್ಮನವಿ ಸಲ್ಲಿಸಿದೆ.

ಏಕಸದಸ್ಯ ನ್ಯಾಯಪೀಠವು 'ಮೋಟಾರು ವಾಹನಗಳ ಕಾಯ್ದೆ-1988ರ ಅನ್ವಯ ಮಾರ್ಗಸೂಚಿ ಮತ್ತು ನಿಯಮಗಳನ್ನು ರೂಪಿಸುವವರೆಗೆ ಬೈಕ್ ಟ್ಯಾಕ್ಸಿಗಳು ಕಾರ್ಯಾಚರಣೆ ನಡೆಸುವಂತಿಲ್ಲ' ಎಂದು ಬೈಕ್ ಟ್ಯಾಕ್ಸಿ ಸಂಚಾರವನ್ನು ನಿಷೇಧಿಸಿ ವರ್ಷದ ಹಿಂದೆ ಆದೇಶ ನೀಡಿತ್ತು.

ಜೂನ್‌ನಲ್ಲಿ ಟ್ಯಾಕ್ಸಿಗಳನ್ನು ನಿರ್ಬಂಧಿಸಲು ಸಾರಿಗೆ ಇಲಾಖೆ ಕಾರ್ಯಾಚರಣೆ ನಡೆಸಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ 'ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೆಟ್ ಲಿಮಿಟೆಡ್', 'ರೋಪ್ಪನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್' ಮತ್ತು 'ಎಎನ್‌ಐ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್' ಕಂಪನಿಗಳು ರಿಟ್ ಅರ್ಜಿ ಸಲ್ಲಿಸಿದ್ದವು.

ವಿಚಾರಣೆ ನಡೆಸಿದ್ದ ವಿಭಾಗೀಯ ನ್ಯಾಯಪೀಠವು 'ಅರ್ಹ ಮೋಟಾರ್ ಸೈಕಲ್‌ಗಳನ್ನು, ಬೈಕ್ ಟ್ಯಾಕ್ಸಿಗಳನ್ನಾಗಿ ಬಳಸಬಹುದು' ಎಂದು ಈ ವರ್ಷ ಜನವರಿಯಲ್ಲಿ ಆದೇಶ ನೀಡಿತ್ತು.

> **ಬೈಕ್ ಟ್ಯಾಕ್ಸಿ ಕುರಿತಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ.**
> **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

'ಬೈಕ್ ಟ್ಯಾಕ್ಸಿ ಸೇವೆಗಳಿಗೆ ಬಳಸುವ ಮೋಟಾರ್ ಸೈಕಲ್‌ಗಳು, ಮೋಟಾರು ವಾಹನ ಕಾಯ್ದೆ-1988ರ ಅಡಿಯಲ್ಲಿ ಸಾರಿಗೆ ವಾಹನಗಳ ವ್ಯಾಖ್ಯಾನಕ್ಕೆ ಒಳಪಡುತ್ತವೆ. ಕಾನೂನಿನ ಪ್ರಕಾರ ಅರ್ಜಿಗಳನ್ನು ಸಲ್ಲಿಸಿದ ನಂತರ ಅರ್ಹ ಮೋಟಾರ್ ಸೈಕಲ್‌ಗಳಿಗೆ 1988ರ ಮೋಟಾರು ವಾಹನ ಕಾಯ್ದೆಯ ಕಲಂ 74ರ ಅಡಿಯಲ್ಲಿ ಒಪ್ಪಂದದ ಸಾಗಣೆ ಪರವಾನಗಿ ನೀಡಬೇಕಾಗುತ್ತದೆ' ಎಂದು ತಿಳಿಸಿತ್ತು. ವೈಯಕ್ತಿಕ ಬಳಕೆಯ ಮೋಟಾರ್ ಸೈಕಲ್‌ಗಳನ್ನು ವಾಣಿಜ್ಯ ಸಂಚಾರಕ್ಕೆ ಬಳಸುತ್ತಿರುವುದರಿಂದ ತೆರಿಗೆ ಕಟ್ಟಿ ವಾಣಿಜ್ಯ ಸಂಚಾರ ಪರವಾನಗಿ ಪಡೆದಿರುವ ಆಟೊ, ಟ್ಯಾಕ್ಸಿ, ಕ್ಯಾಬ್‌ಗಳಿಗೆ ತೊಂದರೆಯಾಗುತ್ತದೆ. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಬೇಕು ಎಂದು ವಿವಿಧ ಸಾರಿಗೆ ಸಂಘಟನೆಗಳು ಒತ್ತಾಯಿಸಿದ್ದವು.

ಇದೀಗ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಸಾರಿಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಸಮಗ್ರ ನೀತಿಯೇ ಉತ್ತಮ': 'ಬೈಕ್ ಟ್ಯಾಕ್ಸಿ ನಿಷೇಧಕ್ಕೆ ಚಿಂತನೆ ನಡೆಸುವ ಬದಲು ಈ ಕುರಿತು ಅಧಿಕೃತ ನೀತಿಯನ್ನು ರಾಜ್ಯ ಸರ್ಕಾರ ಜಾರಿಗೆ ತರಬೇಕು' ಎಂದು ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಆದಿ ನಾರಾಯಣ್ ಹೇಳಿದರು.

ಧಾರ್ಮಿಕ ಚಟುವಟಿಕೆ ಸಂವಿಧಾನದ ಭಾಗ: ಹೈಕೋರ್ಟ್

ಬೆಂಗಳೂರು: 'ಭಾರತೀಯ ನಾಗರಿಕತೆಯ ಶ್ರೇಷ್ಠತೆ ತನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಹಾಸುಹೊಕ್ಕಾಗಿದೆ. ಇಂತಹ ಚಟುವಟಿಕೆಗಳನ್ನು ಚಿವುಟಿ ಹಾಕುವುದು ಎಂದರೆ ದೇಶದಿಂದ ಆತ್ಮವನ್ನೇ ತೆಗೆದು ಹಾಕಿದಂತೆ ಮತ್ತು ಜಾತ್ಯತೀತ ನಡವಳಿಕೆ ಎಂದರೆ ಧಾರ್ಮಿಕ ಚಟುವಟಿಕೆಗಳನ್ನು ಹೊರಗಿಡುವುದಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಸ್ಯಾಂಕಿ ಕೆರೆ ಉದ್ಯಾನದ ಯೋಗ ಸಭಾಂಗಣದಲ್ಲಿ ಶಂಕರ ಜಯಂತಿ ಆಚರಣೆಗೆ ಅನುಮತಿ ನಿರಾಕರಿಸಿದ್ದ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆದೇಶವನ್ನು ರದ್ದುಗೊಳಿಸಿದೆ.

ಶಂಕರ ಜಯಂತಿ ಆಚರಣೆಗೆ ಅನುಮತಿ ನಿರಾಕರಿಸಿದ್ದ ಪಾಲಿಕೆ ಕ್ರಮವನ್ನು ಪ್ರಶ್ನಿಸಿ, 'ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್' ಕಾರ್ಯದರ್ಶಿ ಕೌಶಿಕ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಧಾರ್ಮಿಕ ಆಚರಣೆಯ ಜಯಂತಿ ನಿಷೇಧಿಸುವುದು ಸರ್ಕಾರದ ನೀತಿಯಲ್ಲ, ಶಂಕರ ಜಯಂತಿಗೆ ಅನುಮತಿ ನಿರಾಕರಿಸಿ ಪಾಲಿಕೆ ನೀಡಿರುವ ಹಿಂಬರಹಕ್ಕೆ ಯಾವುದೇ ಆಧಾರವಿಲ್ಲ. ಪಾಲಿಕೆಯ ಆದೇಶಕ್ಕೆ ಸಕಾರಣವಿಲ್ಲ ಹಾಗೂ ಏಕಪಕ್ಷೀಯವಾಗಿದೆ' ಎಂದು ಕಾರಣ ನೀಡಿ ರದ್ದುಗೊಳಿಸಿದೆ.

'ಭಾರತೀಯ ನಾಗರಿಕತೆಯ ಮುದ್ರೆಗಳಂತಿರುವ ಗುರುಕುಲ, ರಾಮಾಯಣ, ಭಗವದ್ಗೀತೆ, ಗೌತಮ ಬುದ್ಧ, ಮಹಾವೀರರಂಥವರೆಲ್ಲಾ ಭಾರತದ ಸಂವಿಧಾನ ಒಳಗೊಂಡಿದೆ. ಹಾಗಾಗಿ, ಧರ್ಮದೊಂದಿಗೆ ಅಂತರ್ಗತವಾಗಿ ಬೆಸೆದುಕೊಂಡಿರುವ ಭಾರತೀಯ ಸಂಸ್ಕೃತಿಯ ಆಚರಣೆಗಳನ್ನು ಎಂದಿಗೂ ಕಾನೂನು ಬಾಹಿರ ಅಥವಾ ಸಂವಿಧಾನಬಾಹಿರ ಎಂದು ಪರಿಗಣಿಸಲಾಗದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಶಂಕರಾಚಾರ್ಯರು ಭಾರತದ ಅತ್ಯಂತ ಗೌರವಾನ್ವಿತ ಆಚಾರ್ಯರಲ್ಲಿ ಒಬ್ಬರು ಮತ್ತು ಅವರ ಪ್ರಚಾರ ಮಾಡಿದ ಅದ್ವೈತ ತತ್ವಶಾಸ್ತ್ರ ದೇಶದ ಪ್ರಮುಖ ತಾತ್ವಿಕ ಸಂಪ್ರದಾಯಗಳಲ್ಲಿ ಒಂದಾಗಿದೆ. ಹೀಗಾಗಿ, ಈ ಸಂದರ್ಭದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಎರಡೂ ರೀತಿಯಲ್ಲಿ ಶಂಕರ ಜಯಂತಿಯನ್ನು ಪರಿಗಣಿಸಬೇಕಾಗಿದೆ' ಎಂದು ಹೇಳಿದೆ.

ಪ್ರಕರಣ: ಸ್ಯಾಂಕಿ ಕೆರೆಯ ಆವರಣದ ಯೋಗ ಸಭಾಂಗಣದಲ್ಲಿ ಏಪ್ರಿಲ್ 21ರಂದು ಶಂಕರ ಜಯಂತಿ ಆಚರಿಸಲು ಅನುಮತಿ ಕೋರಿ 'ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್' ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬೆಂಗಳೂರು ಪಶ್ಚಿಮ ಮಹಾನಗರ ಪಾಲಿಕೆಗೆ ಮನವಿ ಮಾಡಿತ್ತು. ಆದರೆ, 'ಸಭಾಂಗಣದಲ್ಲಿ ಧಾರ್ಮಿಕ ಚಟುವಟಿಕೆ ನಡೆಸಲು ಅನುಮತಿ ನೀಡಲಾಗದು' ಎಂದು ಪಾಲಿಕೆ ಹಿಂಬರಹ ನೀಡಿತ್ತು.

ಮುಖ್ಯಮಂತ್ರಿಗೆ ಬಲಗೈ ಸಮುದಾಯಗಳ ಒಕ್ಕೂಟ ಮನವಿ

'ದತ್ತಾಂಶರಹಿತ ಒಳಮೀಸಲಾತಿ ಸಲ್ಲ'

ಬಲಗೈ ಸಮುದಾಯಗಳ ಒಕ್ಕೂಟವು ಸಿದ್ದರಾಮೇಶ್ವರ ಸ್ವಾಮೀಜಿ, ಬಸವನಾಗಿದೇವ ಸ್ವಾಮೀಜಿ, ಜ್ಞಾನ ಪ್ರಕಾಶ್ ಸ್ವಾಮೀಜಿ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯ ಸಮೀಕ್ಷೆ ನಡೆಸಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಆಯೋಗ ಸಲ್ಲಿಸಿರುವ ವರದಿಯಲ್ಲಿರುವ ದತ್ತಾಂಶವು ಹೈಕೋರ್ಟ್‌ನಲ್ಲಿ ಅಮಾನ್ಯವಾಗಿದೆ. ಹೀಗಾಗಿ, ಅದನ್ನು ಆಧರಿಸಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಹಿಂದಿನ ಶೇ 15 ಮೀಸಲಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವುದು ನ್ಯಾಯಾಂಗ ಉಲ್ಲಂಘನೆಯಾಗಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಮನವಿ ಸಲ್ಲಿಸಿದೆ.

ಒಳಮೀಸಲಾತಿ ಕಲ್ಪಿಸುವ ಕುರಿತು ಚರ್ಚಿಸಲು ಶುಕ್ರವಾರ (ಏ. 24) ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ.

ಈ ಮಧ್ಯೆ, ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿದ ಒಕ್ಕೂಟದ ಅಧ್ಯಕ್ಷರೂ ಆಗಿರುವ ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ, ಚಿತ್ರದುರ್ಗದ ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ, ಮುಡುಕುತೊರೆ ಗುರುಲಿಂಗದಟ್ಟ ಮಠದ ಸಿದ್ದರಾಮೇಶ್ವರ ಸ್ವಾಮೀಜಿ ಮತ್ತಿತರರು, 'ಮಾನ್ಯತೆಯೇ ಇಲ್ಲದ ದತ್ತಾಂಶ ಆಧರಿಸಿ ಒಳ ಮೀಸಲಾತಿ ಹಂಚಿಕೆ ಮಾಡಬಾರದು' ಎಂದು ಪಟ್ಟು ಹಿಡಿದಿದ್ದಾರೆ.

'ಮಾನ್ಯತೆ ಹೊಂದಿರುವ ದತ್ತಾಂಶ ಇಲ್ಲದ ಕಾರಣ ಸಮುದಾಯದ ಬಳಿಕ ಪರಿಶಿಷ್ಟ ಜಾತಿಯ ಶೇ 15 ಮೀಸಲಾತಿಯಲ್ಲಿ ಒಳಮೀಸಲಾತಿ ಅಸಾಧ್ಯ. ಒಳ ಮೀಸಲಾತಿಗೆ ಅನ್ವಯಿಸುವ ಸೂತ್ರವು ವಿಧಾನಮಂಡಲದ ಉಭಯ ಸದನಗಳಲ್ಲಿ ಅಂಗೀಕಾರವಾಗಬೇಕು. ಅದಕ್ಕೂ ಮುನ್ನ ಒಳ ಮೀಸಲಾತಿ ಹಂಚಿಕೆ ಮಾಡಬಾರದು' ಎಂದು ಆಗ್ರಹಿಸಲಾಗಿದೆ.

'ನಾಗಮೋಹನ್‌ದಾಸ್ ಆಯೋಗದ ವರದಿಯಲ್ಲಿರುವ ದತ್ತಾಂಶವು ಅವೈಜ್ಞಾನಿಕ ಮತ್ತು ಅಪೂರ್ಣವಾಗಿದೆ. ಅದನ್ನು ಆಧರಿಸಿ ಒಳ ಮೀಸಲಾತಿ ಕಲ್ಪಿಸುವುದು ಸುಪ್ರೀಂ ಕೋರ್ಟ್ ಈಗಾಗಲೇ ನೀಡಿರುವ ತೀರ್ಪಿಗೆ ವಿರುದ್ಧವಾಗುತ್ತದೆ. ಆಯೋಗವು ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎನ್ನುವುದು ಜಾತಿಗಳಲ್ಲ ಎಂದು ತನ್ನ ವರದಿಯಲ್ಲಿ ಹೇಳಿಕೊಂಡಿದ್ದರೂ, ಆ ಜಾತಿಗಳಿಗೆ ಶೇ 1ರಷ್ಟು ಮೀಸಲಾತಿ ನೀಡಿ ಶಿಫಾರಸು ಮಾಡಿರುವುದು ಸರ್ಕಾರದ ಪತ್ರಗಳ ಉಲ್ಲಂಘನೆಯಾಗಿದೆ' ಎಂದೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

'ಆಯೋಗವು ತನ್ನ ಅಧಿಕಾರ ವ್ಯಾಪ್ತಿ ಮೀರಿ ಶಿಫಾರಸುಗಳನ್ನು ಮಾಡಿದೆ. ಅಲ್ಲದೆ, ಆಡಳಿತ ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆ ನೀಡಿದ್ದ ಟಿಪ್ಪಣಿಯನ್ನೇ ಬದಲಿಸಿ ಈ ಹಿಂದಿನ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಹಂಚಿಕೆ ಮಾಡಲಾಗಿತ್ತು. ವೈಜ್ಞಾನಿಕ ಆಧಾರ ಇಲ್ಲದೆ 16 ಬಲಗೈ ಸಂಬಂಧಿತ ಜಾತಿಗಳನ್ನು ಬಂಜಾರ, ಭೋವಿ ಮತ್ತು ಇತರ ಜಾತಿಗಳ ಗುಂಪಿಗೆ ಸೇರಿಸಲಾಗಿದೆ. ಈ ಎಲ್ಲ ಕಾರಣಗಳಿಗೆ ನಾಗಮೋಹನ್‌ದಾಸ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು ಮತ್ತು ಸಚಿವ ಸಂಪುಟ ಸಭೆಯು ಈ ಹಿಂದೆ ತೆಗೆದುಕೊಂಡಿದ್ದ ನಿರ್ಣಯವನ್ನು ಮರುಪರಿಶೀಲಿಸಿ, ಅದನ್ನು ಕೈಬಿಡಬೇಕು' ಎಂದೂ ಮನವಿಯಲ್ಲಿ ಆಗ್ರಹಿಸಲಾಗಿದೆ.

ಅಪಘಾತ: 11 ಸಾವು

ಮಿರ್ಜಾಪುರ:ಉತ್ತರಪ್ರದೇಶದ ದ್ರಮಾಂದ್‌ಗಂಜ್‌ನಲ್ಲಿ ಸಂಭವಿಸಿದ ಸರಣಿ ಅಪಘಾತದಲ್ಲಿ 11 ಮಂದಿ ಸಾವಿಗೀಡಾ ಗಿದ್ದಾರೆ. 2 ಲಾರಿಗಳ ನಡುವೆ ಕಾರು ಸಿಲುಕಿ ಅಪಘಾತ ಸಂಭವಿಸಿದೆ.

ಪಾದಚಾರಿಗಳಿಗೆ ನೀರಿನ ಸಿಂಚನ

ಬೆಂಗಳೂರು: ನಗರದಲ್ಲಿ ಬಿಸಿಲಿನ ಪ್ರಮಾಣ ಹೆಚ್ಚಾಗಿದ್ದು, ಪ್ರಮುಖ ಸಂಚಾರ ಸಿಗ್ನಲ್ ಬಳಿ ನಾಗರಿಕರಿಗಾಗಿ ನೀರ ಸಿಂಚನ (ಮಿಸ್ಟ್ ಸ್ಪ್ರೇ) ವ್ಯವಸ್ಥೆಯನ್ನು ಅಳವಡಿಸುವಂತೆ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ (ಎಫ್‌ಇಸಿಸಿ) ವಿಭಾಗದ ವಿಶೇಷ ಆಯುಕ್ತೆ ಸುಷ್ಮಾ ಗೋಡಬೋಲೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪ್ರಮುಖ ರಸ್ತೆಗಳು ಹಾಗೂ ಸಂಚಾರ ಸಿಗ್ನಲ್‌ಗಳಲ್ಲಿ ದೀರ್ಘ ಕಾಲ ಕಾಯುವ ಸ್ಥಳಗಳಲ್ಲಿ ಪಾದಚಾರಿಗಳು, ವಾಹನ ಸವಾರರಿಗೆ ತಾಪದ ಪರಿಣಾಮ ಕಡಿಮೆಗೊಳಿಸಲು ನೀರ ಸಿಂಚನ ಅಳವಡಿಸುವ ಬಗ್ಗೆ ಯೋಜನೆ ರೂಪಿಸಿ, ಕೂಡಲೇ ಕ್ರಮ ಕೈಗೊಳ್ಳಲು ಅಧಿಕಾರಿಗಳ ಸಭೆಯಲ್ಲಿ ನಿರ್ದೇಶನ ನೀಡಿದರು. ಮಳೆ ಹಾಗೂ ಪ್ರವಾಹದಂತಹ ತುರ್ತು ಸಂದರ್ಭಗಳಲ್ಲಿ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ಅವಶ್ಯವಾಗಿದ್ದು, ನಗರ ಪಾಲಿಕೆಗಳ ಮಟ್ಟದಲ್ಲಿ 'ಮಾಕ್ ಡ್ರಿಲ್' ನಡೆಸಬೇಕು ಎಂದರು. ಕರ್ನಾಟಕ ರಾಜ್ಯನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) 'ವರುಣಮಿತ್ರ' ಅಂತರ್ಜಾಲ ತಾಣದ (http://varunamitra.karnataka.gov.in) ಮೂಲಕ ನಗರ ವ್ಯಾಪ್ತಿಯಲ್ಲಿ ಪ್ರವಾಹವನ್ನು ತಡೆಗಟ್ಟಲು ವಲಯವಾರು ನಕ್ಷೆಗಳು, ಮಳೆ ಮುನ್ಸೂಚನೆ ಹಾಗೂ ಪ್ರವಾಹ ಮುನ್ಸೂಚನೆ ಕುರಿತು ಮಾಹಿತಿ ಯನ್ನು ಪಡೆಯಬಹುದು ಎಂದು ಹೇಳಿದರು. ತುರ್ತು ಪರಿಸ್ಥಿತಿಗಳಲ್ಲಿ ವೈದ್ಯಕೀಯ ನೆರವು ಒದಗಿಸಲು ಪ್ರದೇಶವಾರು ಆಸ್ಪತ್ರೆಗಳ ಮ್ಯಾಪಿಂಗ್ ನಡೆಸಿ ವರದಿ ಸಲ್ಲಿಸಲು ಸೂಚಿಸಿದರು.

ಬೆನ್ನಿಗಾನಹಳ್ಳಿ ಡಿನೋಟಿಫಿಕೇಷನ್ ಡಿ.ಕೆ. ಶಿವಕುಮಾರ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆನ್ನಿಗಾನಹಳ್ಳಿ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಇತರರಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಈ ಪ್ರಕರಣದ ಮರು ವಿಚಾರಣೆ ನಡೆಸಬೇಕು ಎಂದು ಕೋರಿ ಸಮಾಜ ಪರಿವರ್ತನ ಟ್ರಸ್ಟ್ ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ವಿಜಯ್ ಬಿಷ್ಣೋಯ್ ಪೀಠವು, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಪ್ರತಿವಾದಿಗಳಿಗೆ ನಿರ್ದೇಶನ ನೀಡಿದೆ.

ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ದೇವದತ್ ಕಾಮತ್ ಅವರು ಸಮಾಜ ಪರಿವರ್ತನ ಟ್ರಸ್ಟ್‌ನ ಅರ್ಜಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಅರ್ಜಿದಾರರು ಪ್ರಾಥಮಿಕ ಮಾಹಿತಿದಾರರು ಅಲ್ಲ. ಅವರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ. ಅರ್ಜಿಯನ್ನು ಮಾನ್ಯ ಮಾಡಬಾರದು' ಎಂದು ಕೋರಿದರು.

ಈ ಪ್ರಾಥಮಿಕ ಆಕ್ಷೇಪಣೆಯನ್ನು ಮುಂದಿನ ವಿಚಾರಣೆ ಸಂದರ್ಭದಲ್ಲಿ ಪರಿಗಣಿಸಲಾಗುವುದು ಎಂದು ಪೀಠ ಭರವಸೆ ನೀಡಿತು.

ಬೆನ್ನಿಗಾನಹಳ್ಳಿಯ 4 ಎಕರೆ 20 ಗುಂಟೆ ಜಮೀನನ್ನು ಡಿನೋಟಿಫಿಕೇಷನ್ ಮಾಡಲಾಗಿತ್ತು. ಈ ಜಾಗವನ್ನು ಶ್ರೀನಿವಾಸ್ ಎಂಬವರಿಂದ ಶಿವಕುಮಾರ್ ಖರೀದಿಸಿದ್ದರು. ಈ ಪ್ರಕರಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಲೋಕಾಯುಕ್ತಕ್ಕೆ ದೂರು ಸಲ್ಲಿಕೆಯಾಗಿತ್ತು.

ಪ್ರಕರಣದಲ್ಲಿ ಶಿವಕುಮಾರ್ ಅವರನ್ನು ಕರ್ನಾಟಕ ಹೈಕೋರ್ಟ್ 2015ರಲ್ಲಿ ದೋಷಮುಕ್ತಗೊಳಿಸಿತ್ತು. ಬಳಿಕ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಕೆಯಾಗಿತ್ತು.

ಈ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಬೇಕು ಎಂದು ಸಮಾಜ ಪರಿವರ್ತನ ಟ್ರಸ್ಟ್ ಅರ್ಜಿ ಸಲ್ಲಿಸಿತ್ತು.

ಗೋದಾಮಿಗೆ ಬೆಂಕಿ

ನೆಲಮಂಗಲ: ತಾಲ್ಲೂಕಿನ ಶಾಂತಿನಗರದಲ್ಲಿರುವ ಪ್ಲೈವುಡ್ ಗೋದಾಮಿಗೆ ಬುಧವಾರ ಮಧ್ಯಾಹ್ನ ಬೆಂಕಿ ತಗುಲಿದ್ದು, ಸಂಗ್ರಹಿಸಿಟ್ಟಿದ ಅಪಾರ ಪ್ರಮಾಣದ ಪ್ಲೈವುಡ್‌ಗಳು ಬೆಂಕಿಗೆ ಆಹುತಿಯಾಗಿವೆ.

ಅಗ್ನಿಶಾಮಕ ದಳದ ಎರಡು ವಾಹನಗಳು ಸ್ಥಳಕ್ಕೆ ಬಂದಿದ್ದು, ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ.

ಸುಮಾರು 5 ಗುಂಟೆ ಜಮೀನಿನಲ್ಲಿರುವ ಗೋದಾಮು ಹಲವು ತಿಂಗಳಿಂದ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಹಾಗಾಗಿ ಯಾವುದೇ ಸಿಬ್ಬಂದಿ ಇರಲಿಲ್ಲ. ಪ್ರಾಣಹಾನಿ ಸಂಭವಿಸಿಲ್ಲ. ಯಾರೊ ಕಿಡಿಗೇಡಿಗಳು ಬೆಂಕಿ ಹಚ್ಚಿರಬಹುದು ಅಥವಾ ಬಿಸಿಲಿನ ತಾಪಕ್ಕೆ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಅಂದಾಜಿಸಲಾಗಿದೆ.

ಔಷಧ ಖರೀದಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಬಿಎ ವ್ಯಾಪ್ತಿಯಲ್ಲಿ ನಮ್ಮ ಕ್ಲಿನಿಕ್ ಮತ್ತು ಆರೋಗ್ಯ ಕೇಂದ್ರಗಳಿಗೆ ಔಷಧಗಳನ್ನು ಖರೀದಿಸಲು ಅಗತ್ಯ ಅನುಮೋದನೆ ದೊರೆತಿದೆ' ಎಂದು ಜಿಬಿಎ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ತಿಳಿಸಿದ್ದಾರೆ.

'ಔಷಧಕ್ಕಾಗಿ ಕಾದಿವೆ ಪ್ರಾಥಮಿಕ ಆರೋಗ್ಯ ಕೇಂದ್ರ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಬುಧವಾರ ವಿಶೇಷ ವರದಿ ಪ್ರಕಟವಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಿರುವ ಜಿಬಿಎ ಮುಖ್ಯ ಆರೋಗ್ಯಾಧಿಕಾರಿ, 'ಸಾರ್ವಜನಿಕ ಆರೋಗ್ಯ ಮತ್ತು 'ಕ್ರಿಟಿಕಲ್' ವಿಭಾಗದಡಿ ಹೆಚ್ಚಿನ ಅನುದಾನ ಲಭ್ಯವಿದ್ದು, ಔಷಧ ಪೂರೈಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ನಾಗರಿಕರಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ಅಗತ್ಯವಿರುವ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದಿದ್ದಾರೆ.

ವರದಿ ಪರಿಣಾಮ

'ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆವರಣವನ್ನು ಸ್ವಚ್ಛವಾಗಿಡಲು ಮತ್ತು ವೈದ್ಯಕೀಯ ತ್ಯಾಜ್ಯವನ್ನು ವ್ಯವಸ್ಥಿತವಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟ ಪಾಲಿಕೆಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿವೆ. ಸ್ವಚ್ಛತೆ ನಮ್ಮ ಮೊದಲ ಆದ್ಯತೆ' ಎಂದಿದ್ದಾರೆ.

'ಸರಬರಾಜು ಮಾಡುವ ಒಟ್ಟು ಔಷಧಗಳಲ್ಲಿ ಬಳಕೆಯ ಅವಧಿ ಮುಗಿದಿರುವ ಯಾವುದೇ ಔಷಧ ನಮ್ಮಲ್ಲಿ ಪತ್ತೆಯಾಗಿಲ್ಲ' ಎಂದು ಹೇಳಿದ್ದಾರೆ.

'ಔಷಧಿ ಖರೀದಿಗೂ ಗತಿಯಿಲ್ಲ'

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಖಜಾನೆ ಖಾಲಿ ಯಾಗಿದ್ದು, ಸರ್ಕಾರಕ್ಕೆ ಔಷಧ ಖರೀದಿಗೂ ಗತಿಯಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬಡ ರೋಗಿಗಳ ಕುಟುಂಬ ದವರು ಹೊರಗೆ ಔಷಧ ಖರೀದಿಸಬೇಕಾದ ಸ್ಥಿತಿಯಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಈ ಬಗ್ಗೆ 'ಎಕ್ಸ್' ಮಾಡಿರುವ ಅವರು, 'ರಾಜ್ಯ ಸರ್ಕಾರ ತಕ್ಷಣ ಎಚ್ಚೆತ್ತು ಕೊಂಡು ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ ಗಳಲ್ಲಿ ಔಷಧಗಳ ಲಭ್ಯತೆ ಖಚಿತ ಪಡಿಸಬೇಕು. ಇಲ್ಲದಿದ್ದರೆ ಈ ಅನ್ಯಾಯದ ವಿರುದ್ಧ ಜನರ ಧ್ವನಿ ಇನ್ನಷ್ಟು ತೀವ್ರವಾಗಲಿದೆ' ಎಂದಿದ್ದಾರೆ.

ನಿಧನ ವಾರ್ತೆ

ಸಿ.ಎ. ಕೃಷ್ಣಮೂರ್ತಿ

ಬೆಂಗಳೂರು: 'ಪ್ರಜಾವಾಣಿ' ಸಂಪಾದಕೀಯ ವಿಭಾಗದಲ್ಲಿ ಕಚೇರಿ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದ ಸಿ.ಎ. ಕೃಷ್ಣಮೂರ್ತಿ (71) ಅನಾರೋಗ್ಯದಿಂದ ಇತ್ತೀಚೆಗೆ ನಿಧನರಾದರು. ಗಿರಿನಗರ ನಿವಾಸಿಯಾಗಿದ್ದ ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರಿದ್ದಾರೆ. ಚಾಮರಾಜಪೇಟೆ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಜೆಇಇ: ನಾರಾಯಣ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ಜೆಇಇ (ಮೇನ್) 2026ನೇ ಸಾಲಿನ ಪರೀಕ್ಷೆಯಲ್ಲಿ ನಾರಾಯಣ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ನರೇಂದ್ರ ಬಾಬು

ಮಲ್ಲಾವರಪು ಆಸ್ನಾ

ಸಂಸ್ಥೆಯ ಏಳು ವಿದ್ಯಾರ್ಥಿಗಳು ಶೇಕಡ 100 ಪರ್ಸೆಂಟೈಲ್ ಪಡೆದಿದ್ದಾರೆ. ಇದರಲ್ಲಿ ಆಂಧ್ರಪ್ರದೇಶದ ನರೇಂದ್ರ ಬಾಬು ಗರಿ ಮಹಿತ್ ಅವರು ಶೇ 100 ಪರ್ಸೆಂಟೈಲ್ ಪಡೆದಿದ್ದು, ತೆಲಂಗಾಣದ ಮಲ್ಲಾವರಪು ಆಸ್ನಾ ಅವರು ಅಖಿಲ ಭಾರತೀಯ ವಿದ್ಯಾರ್ಥಿನಿಯರ ವಿಭಾಗದಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿದ್ದಾರೆ.

ದೆಹಲಿ ಎನ್‌ಸಿಟಿಯ ಶ್ರೇಯಸ್ ಮಿಶ್ರಾ, ಮಹಾರಾಷ್ಟ್ರದ ಮಾಧವ್ ವಿ., ತಮಿಳುನಾಡಿನ ಥಮ್ಮಿನ ಗಿರೀಶ್, ತೆಲಂಗಾಣದ ಸಾಯಿ ರಿತ್ವಿಕ್ ರೆಡ್ಡಿ ವಲ್ಲಾ, ವಿವಾನ ಶರದ್ ಮಹೇಶ್ವರಿ, ಡಿ. ಭವಿತೇಶ್ ರೆಡ್ಡಿ ಅವರು ಶೇ 100 ಪರ್ಸೆಂಟೈಲ್ ಪಡೆದುಕೊಂಡಿದ್ದಾರೆ.

ಇನ್‌ಸ್ಟಿಟ್ಯೂಷನ್ಸ್‌ನ ನಿರ್ದೇಶಕರಾದ ಪಿ. ಸಿಂಧೂರ ಅವರು ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದು, ಅವರ ಕಠಿಣ ಪರಿಶ್ರಮದ ಬಗ್ಗೆ ನಮಗೆ ತುಂಬಾ ಹೆಮ್ಮೆ ಇದೆ ಎಂದು ಹೇಳಿದ್ದಾರೆ.

ಸಾಂಸ್ಕೃತಿಕ ಮುನ್ನೋಟ

'ಪರಿಸರದ ಕಥೆಗಳು' ನಾಟಕದ ದೃಶ್ಯ

'ವೀಕೆಂಡ್' ನಾಟಕೋತ್ಸವ

ಬೆಂಗಳೂರು: ನಗರದ ವಿವಿಧ ರಂಗ ತಂಡಗಳು ಬಸವೇಶ್ವರನಗರದ ಕೆ.ಇ.ಎ. ಪ್ರಭಾತ್ ರಂಗಮಂದಿರದಲ್ಲಿ 'ವೀಕೆಂಡ್' ನಾಟಕೋತ್ಸವ ಹಮ್ಮಿಕೊಂಡಿದ್ದು, ಇದೇ 25ರಂದು ಸಂಜೆ 6.30ಕ್ಕೆ ದಾಟು ಥಿಯೇಟರ್ ವತಿಯಿಂದ 'ಪರಿಸರದ ಕಥೆಗಳು' ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧಾರಿತ ನಾಟಕ ಇದಾಗಿದ್ದು, ಮನು ಆರ್. ಅವರು ನಿರ್ದೇಶಿಸಿದ್ದಾರೆ. 26ರಂದು ಸಂಜೆ 6.30ಕ್ಕೆ ಅಂತರಂಗ ಬಹಿರಂಗ ತಂಡದಿಂದ 'ಮಿಸ್ಟರ್. ರಾವ್ ಆ್ಯಂಡ್ ಅಸೋಸಿಯೇಟ್ಸ್' ನಾಟಕ ಪ್ರದರ್ಶನ ಕಾಣಲಿದೆ. ಭೀಷ್ಮ ರಾಮಯ್ಯ ಅವರು ರಚಿಸಿರುವ ಈ ನಾಟಕವನ್ನು ಬಾಷ್ ರಾಘವೇಂದ್ರ ನಿರ್ದೇಶಿಸಿದ್ದಾರೆ. ಈ ಎರಡು ನಾಟಕಗಳ ಟಿಕೆಟ್‌ಗಳು ಬುಕ್‌ಮೈಶೊದಲ್ಲಿ ಲಭ್ಯ.

ಕಾವ್ಯ ವಾಚನ, ಗೀತ ಗಾಯನ

ಬೆಂಗಳೂರು: ಪಂಚಾಮೃತ ಸುಗಮ ಸಂಗೀತ ಅಕಾಡೆಮಿಯು ಇದೇ 25ರಂದು ಬೆಳಿಗ್ಗೆ 10.30ಕ್ಕೆ ಮಲ್ಲೇಶ್ವರದಲ್ಲಿರುವ ವೇದಮಾತ ಭವನದಲ್ಲಿರುವ ಲೀಲಾದ್ರಿ ಸಿಂಗರ್ಸ್ ಅಕಾಡೆಮಿಯಲ್ಲಿ 'ಆಚಾರ್ಯತ್ರಯರು–ಕನ್ನಡ ಕವಿಗಳು ಕಂಡಂತೆ' ಕಾರ್ಯಕ್ರಮದಡಿ ಕಾವ್ಯ ವಾಚನ ಮತ್ತು ಗೀತ ಗಾಯನ ಹಮ್ಮಿಕೊಂಡಿದೆ.

ಜಿ.ಎಸ್. ನಾರಾಯಣ ಅವರಿಂದ ಗಮಕ ವಾಚನ ನಡೆಯಲಿದೆ. ದಿವಾಕರ್ ಕಶ್ಯಪ್, ಗಾಯತ್ರಿ ಕೇಶವ, ನರಸಿಂಹ ಹರೀಶ್, ಪ್ರತಿಭಾ ನಂದನ್, ಅಪರ್ಣ ಪ್ರಸನ್ನ ಹಾಗೂ ಪಂಚಾಮೃತ ಸುಗಮ ಸಂಗೀತ ಅಕಾಡೆಮಿ ವಿದ್ಯಾರ್ಥಿಗಳಿಂದ ಗೀತ ಗಾಯನ ನಡೆಯಲಿದೆ. ಹರ್ಷ ಶಲವಾಡಿ (ಹಾರ್ಮೋನಿಯಂ), ಗಿರೀಶ್ ಶಲವಾಡಿ (ತಬಲಾ), ಎಸ್. ಶ್ಯಾಮದತ್ತ (ರವಿ) ಅವರು ವಾದ್ಯ ಸಹಕಾರ ನೀಡಲಿದ್ದಾರೆ.

'ಕಲಾ ಸ್ಪಂದನ' ಸಂಗೀತ–ನೃತ್ಯ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಹಾಗೂ ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಜಂಟಿಯಾಗಿ ಇದೇ 25ರಂದು ಸಂಜೆ 6 ಗಂಟೆಗೆ ಜಯನಗರ 4ನೇ ಬ್ಲಾಕ್‌ನಲ್ಲಿರುವ ಸನಾತನ ಕಲಾಕ್ಷೇತ್ರದಲ್ಲಿ 'ಕಲಾ ಸ್ಪಂದನ' ಶಾಸ್ತ್ರೀಯ ಸಂಗೀತ–ನೃತ್ಯ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಕಾರ್ಯಕ್ರಮದಲ್ಲಿ ಪ್ರಕ್ಷಿಲಾ ಜೈನ್ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. ಹಿಂದೂಸ್ತಾನಿ ಗಾಯನದಲ್ಲಿ ವರ್ಣಿಕ ಸಂದೀಪ್, ರಿತೀಷ್ ಜೆ.ಆರ್. ಪಾಲ್ಗೊಳ್ಳಲಿದ್ದಾರೆ. ಋತುಪರ್ಣಾ ದೇಸಾಯಿ ಅವರಿಂದ ತಬಲಾ, ಸೃಷ್ಟಿ ದೇಸಾಯಿ ಅವರಿಂದ ಪಿಟೀಲು ಹಾಗೂ ನಾಗೇಂದ್ರ ರಾಣಾಪೂರ್ ಅವರಿಂದ ಹಾರ್ಮೋನಿಯಂ ವಾದನ ನಡೆಯಲಿದೆ.

ಶಾಸ್ತ್ರೀಯ ನೃತ್ಯ ಪ್ರದರ್ಶನ

ಬೆಂಗಳೂರು: ನಟೇಶ ನೃತ್ಯಾಲಯವು ಇದೇ 25ರಂದು ಬೆಳಿಗ್ಗೆ 10 ಗಂಟೆಯಿಂದ ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ 'ರಸ, ಭಾವ ಮತ್ತು ಕಲೆ' ಶೀರ್ಷಿಕೆಯಡಿ ಶಾಸ್ತ್ರೀಯ ನೃತ್ಯ ಪ್ರದರ್ಶನ ಹಮ್ಮಿಕೊಂಡಿದೆ.

ಶ್ರೀಹರಿ ಮತ್ತು ಶಿಷ್ಯರಿಂದ ಕಥಕ್, ನಯನಾ ಶ್ರೀನಿವಾಸಮೂರ್ತಿ ಅವರಿಂದ ಭರತನಾಟ್ಯ, ದೇವೇಶ್ ನಾಯರ್ ಅವರಿಂದ ಕೂಚಿಪುಡಿ, ನೀನಾ ಪ್ರಸಾದ್ ಅವರಿಂದ ಮೋಹಿನಿಯಾಟ್ಟಂ, ಪಿ. ಪ್ರವೀಣ್ ಕುಮಾರ್ ಅವರಿಂದ ಭರತನಾಟ್ಯ, ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್ ವತಿಯಿಂದ 'ಗೋವರ್ಧನ ಲೀಲೆ' ನೃತ್ಯ ರೂಪಕ ಹಮ್ಮಿಕೊಳ್ಳಲಾಗಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಮರ್ಮಾಂಗದ ಶಸ್ತ್ರಚಿಕಿತ್ಸೆ ಬಳಿಕ ಸಾವು: ವೈದ್ಯರ ನಿರ್ಲಕ್ಷ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ರೋಗಿಯೊಬ್ಬರು ವೈದ್ಯರ ನಿರ್ಲಕ್ಷ್ಯದಿಂದಲೇ ಮೃತಪಟ್ಟಿದ್ದಾರೆ' ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಇದರ ಬೆನ್ನಲ್ಲಿಯೇ ಆಸ್ಪತ್ರೆಯು ಪ್ರಕರಣದ ತನಿಖೆಗೆ ಸಮಿತಿ ರಚಿಸಿದೆ.

ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಶಾ ನವಾಜ್ (45) ಎಂಬುವರು ಮೃತರಾಗಿದ್ದಾರೆ. ಮರ್ಮಾಂಗದಲ್ಲಿ ಗಡ್ಡೆ ಬೆಳೆದ ಕಾರಣ ಫೆ.19ರಂದು ವಿಕ್ಟೋರಿಯಾ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ದಾಖಲಾಗಿದ್ದರು. ತಪಾಸಣೆ ನಡೆಸಿದ ವೈದ್ಯರು, ಸೋಂಕು ನಿವಾರಣೆಗೆ ಶಸ್ತ್ರಚಿಕಿತ್ಸೆ ನಡೆಸಿದ್ದರು.

'ಶಸ್ತ್ರಚಿಕಿತ್ಸೆ ಬಳಿಕ ವೈದ್ಯರು ಪ್ಲಾಸ್ಟಿಕ್ ಸರ್ಜರಿ ವಿಭಾಗಕ್ಕೆ ಹೋಗುವಂತೆ ಸೂಚಿಸಿದ್ದರು. ಅಲ್ಲಿ ಗಾಯ ವಾಸಿಯಾಗಲಿಲ್ಲ. ಇದಕ್ಕೆ ಚಿಕಿತ್ಸೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದ ವೈದ್ಯರು, ಮನೆಯಲ್ಲಿಯೇ ಶುಶ್ರೂಷೆ ಮಾಡಿಕೊಳ್ಳುವಂತೆ ಸೂಚಿಸಿ ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದರು. ಶಸ್ತ್ರ ಚಿಕಿತ್ಸೆ ಹಾಗೂ ಪ್ಲಾಸ್ಟಿಕ್ ಸರ್ಜರಿ ವಿಭಾಗದ ನಡುವೆ ಸಮನ್ವಯದ ಕೊರತೆಯಿಂದ, ರೋಗಿಗೆ ಮರ್ಮಾಂಗದಲ್ಲಿ ರಕ್ತಸ್ರಾವ ಆಗುತ್ತಿದ್ದರೂ ಹೊಲಿಗೆ ಹಾಕದೆ, ಬ್ಯಾಂಡೇಜ್ ಮಾಡದೆ ಕಳುಹಿಸಿದರು' ಎಂದು ಮೃತರ ಪತ್ನಿ ದೂರಿದ್ದಾರೆ.

'ಆಸ್ಪತ್ರೆಗೆ ದಾಖಲಾಗುವ ವೇಳೆ ಅವರ ವೃಷಣ ಕೋಶದಲ್ಲಿ ಗ್ಯಾಂಗ್ರೀನ್ ಆಗಿತ್ತು. ಅದಕ್ಕೆ ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸೆಯನ್ನು ನೀಡಬೇಕಿತ್ತು. ಆದರೆ, ಗಾಯ ಒಣಗದ ಕಾರಣ ಅವರು ಚಿಕಿತ್ಸೆಗೆ ಅರ್ಹರಿರಲಿಲ್ಲ. ಹಾಗಾಗಿ ಮಾರ್ಚ್ 3ರಂದು ಬಿಡುಗಡೆ ಮಾಡಲಾಯಿತು' ಎಂದು ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

'ರೋಗಿಗೆ ಮನೆಯಲ್ಲಿಯೇ ಡ್ರೆಸಿಂಗ್ ಮಾಡಿಸಿಕೊಳ್ಳುವಂತೆ ಸಲಹೆ ಸಹ ನೀಡಲಾಗಿತ್ತು. ನಂತರದ ದಿನಗಳಲ್ಲಿ ಆರೋಗ್ಯ ಸ್ಥಿತಿ ಗಂಭೀರವಾಗಿ, ಮಾರ್ಚ್ 15ರಂದು ಮನೆಯಲ್ಲಿ ನಿಧನ ಹೊಂದಿದ್ದಾರೆ. ಒಂದು ತಿಂಗಳ ನಂತರ ಮೃತ ರೋಗಿಯ ಪತ್ನಿ ಪತಿಯ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ದೂರಿದ್ದಾರೆ. ತಜ್ಞರ ಸಮಿತಿ ರಚಿಸಲಾಗಿದೆ. ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ದೀಪಕ್ ಹೇಳಿದ್ದಾರೆ

ಪತ್ನಿ ಕೊಲೆ, ಪತಿ ಆತ್ಮಹತ್ಯೆ

ಬೆಂಗಳೂರು: ಕೌಟುಂಬಿಕ ವಿಚಾರವಾಗಿ ಪತ್ನಿಯನ್ನು ಕೊಲೆ ಮಾಡಿ ಬಳಿಕ ಪತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಆರ್.ಟಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಗಂಗೇನಹಳ್ಳಿ ನಿವಾಸಿ ಡೇವಿಡ್ (35) ಆತ್ಮಹತ್ಯೆ ಮಾಡಿಕೊಂಡಿದ್ದು, ಅದಕ್ಕೂ ಮೊದಲು ಸುಮಿತ್ರಾ(30) ಅವರನ್ನು ಕೊಲೆ ಮಾಡಿರುವ ಸಾಧ್ಯತೆಯಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಕೊಲೆ ಪ್ರಕರಣ ಮತ್ತು ಅಸ್ವಾಭಾವಿಕ ಸಾವು ಪ್ರಕರಣ(ಯುಡಿಆರ್) ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಈ ಘಟನೆ ಯಾವಾಗ ನಡೆದಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ಬುಧವಾರ ಮಧ್ಯಾಹ್ನ ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದಾಗ ಪ್ರಕರಣ ಗೊತ್ತಾಯಿತು ಎಂದು ಪೊಲೀಸರು ಮಾಹಿತಿ ನೀಡಿದರು. ದಂಪತಿಯು ಆರ್.ಟಿ ನಗರದ ಸಮೀಪದ ಗಂಗೇನಹಳ್ಳಿ ಬಳಿಯಿರುವ ಮನೆಯೊಂದರಲ್ಲಿ ವಾಸವಾಗಿದ್ದರು. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಕೃತ್ಯ ನಡೆದಿರುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಆರ್.ಟಿ ನಗರ ಠಾಣೆ ಪೊಲೀಸರು ಹಾಗೂ ಸೊಕೊ ತಂಡ ಭೇಟಿ ನೀಡಿ ಪರಿಶೀಲಿಸಿದೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ.

ತಮಿಳುನಾಡು ವಿಧಾನಸಭೆ ಚುನಾವಣೆ • ಬಸ್ ನಿಲ್ದಾಣದಲ್ಲಿ ಜನಜಂಗುಳಿ

ಮತ ಹಾಕಲು ಗಡಿ ದಾಟಿದ ಮತದಾರರು

ಪ್ರಜಾವಾಣಿ ವಾರ್ತೆ

ಚಂದಾಪುರ(ಆನೇಕಲ್): ತಮಿಳುನಾಡು ವಿಧಾನಸಭೆಗೆ ಗುರುವಾರ (ಏ.23) ಚುನಾವಣೆ ನಡೆಯಲಿದ್ದು, ಬೆಂಗಳೂರು ನಗರ ಜಿಲ್ಲೆಯ ವಿವಿಧೆಡೆ ವಾಸವಿರುವ ತಮಿಳುನಾಡು ಮತದಾರರು ಬುಧವಾರ ಸ್ವಗ್ರಾಮಗಳಿಗೆ ತೆರಳಿದರು. ಇದರಿಂದ ತಾಲ್ಲೂಕಿನ ವಿವಿಧೆಡೆ ಭಾರಿ ಸಂಚಾರ ದಟ್ಟಣೆ ಕಂಡುಬಂತು. ಹೊಸೂರು ಮಾರ್ಗದಲ್ಲಿ ಬುಧವಾರ ತಡರಾತ್ರಿ ವರೆಗೂ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಪ್ರತಿ ಬಸ್ ನಿಲ್ದಾಣದಲ್ಲಿಯೂ ನೂರಾರು ಜನರು, ತಮಿಳುನಾಡು ಬಸ್‌ಗಳಿಗಾಗಿ ಕಾಯುತ್ತಿದ್ದ ದೃಶ್ಯ ಕಂಡು ಬಂತು. ಬೆಂಗಳೂರು ಮತ್ತು ಆನೇಕಲ್ ಭಾಗದಿಂದ ತಮಿಳುನಾಡಿಗೆ ತೆರಳುವ ಬಹುತೇಕ ಎಲ್ಲಾ ಬಸ್‌ಗಳೂ ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದವು. ಕೆಲವರು ಸ್ವಂತ ವಾಹನಗಳಲ್ಲಿ ತೆರಳಿದರು.

ರೂಪೇನ ಅಗ್ರಹಾರದಿಂದ ಆರಂಭವಾದ ರಸ್ತೆ ದಟ್ಟಣೆ ಎಲೆಕ್ಟ್ರಾನಿಕ್ ಸಿಟಿ, ಹೆಬ್ಬಗೋಡಿ, ಚಂದಾಪುರ, ಅತ್ತಿಬೆಲೆಯ ವರೆಗೂ ಕಂಡುಬಂತು. ಬಸ್ ನಿಲ್ದಾಣಗಳಲ್ಲಿ ನೂರಾರು ಜನ ಕುಟುಂಬ ಸಮೇತ ಬಸ್‌ಗಾಗಿ ಕಾಯುತ್ತಿದ್ದರು. ಬುಧವಾರ ತಡರಾತ್ರಿಯವರೆಗೂ ಜನ ತಂಡೋಪತಂಡವಾಗಿ ತಮಿಳುನಾಡಿಗೆ ತೆರಳಿದರು. ಮೂರ್ನಾಲ್ಕು ತಾಸು ರಸ್ತೆಯಲ್ಲಿ ವಾಹನಗಳು ನಿಂತಲ್ಲೇ ನಿಂತಿದ್ದವು. ಬೆಂಗಳೂರಿನ ಮಿಷನ್ ರಸ್ತೆಯಲ್ಲಿ ಬಸ್‌ಗಾಗಿ ತಡರಾತ್ರಿಯವರೆಗೂ ನೂರಾರು ಮಂದಿ ಕಾಯುತ್ತಿದ್ದರು.

ತಮಿಳುನಾಡಿನಲ್ಲಿ ನಡೆಯಲಿರುವ ಚುನಾವಣೆಗೆ ಮತ ಚಲಾಯಿಸಲು ತೆರಳಲು ಬುಧವಾರ ರಾತ್ರಿ ಬೆಂಗಳೂರಿನ ಮಿಷನ್ ರಸ್ತೆಯಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಜನರು ಪ್ರಜಾವಾಣಿ ಚಿತ್ರ: ಎಂ. ಎಸ್ ಮಂಜುನಾಥ್

ಆನೇಕಲ್ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಕಾಮಗಾರಿ ನಡೆಯುತ್ತಿರುವ ಕಾರಣ ಮಧ್ಯಾಹ್ನದಿಂದಲೇ ದಟ್ಟಣೆ ಉಂಟಾಗಿತ್ತು. ಚಂದಾಪುರ ವೃತ್ತದಲ್ಲಿ ವಾಹನಗಳ ಸಂಚಾರ ದುಸ್ತರವಾಗಿತ್ತು.

ನಗರದಲ್ಲಿ ಇಂದು

ನಿಮಿಷಾಂಬಾದೇವಿ ಜಯಂತಿ: ಬೆಳಿಗ್ಗೆ 7.30ಕ್ಕೆ ನಿಮಿಷಾಂಬಾದೇವಿಗೆ ಅಭಿಷೇಕ, ಪುಷ್ಪಾಲಂಕಾರ, 8.30ಕ್ಕೆ ಗಂಗಾ ಪೂಜೆ, ಗಣಪತಿ ಪೂಜೆ, ಕಳಶಾರಾಧನೆ, ಮಹಾಗಣಪತಿ ಹೋಮ, ನವಗ್ರಹ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸಹಸ್ರನಾಮ ಪಾರಾಯಣ, ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾ ದೇವಿ ದೇವಸ್ಥಾನ, ಒಟಿಸಿ ರಸ್ತೆ.

ಎಸ್‌ಐಆರ್ ವಿರೋಧಿ ಪ್ರತಿರೋಧ ಸಮಾವೇಶ: ಭಾಗವಹಿಸುವವರು: ಜಿ.ಸಿ. ಚಂದ್ರಶೇಖರ್, ನಸೀರ್ ಅಹಮದ್, ಬಿ.ಆರ್. ಪಾಟೀಲ, ಚಾಮರಸ ಮಾಲಿ ಪಾಟೀಲ, ತಾಹೀರ್ ಹುಸೇನ್, ಅಫ್ಸರ್ ಕೊಡ್ಲಿಪೇಟೆ, ಕೆ. ಪ್ರಕಾಶ್, ಪಿ. ಅಮ್ಜದ್, ಕ್ಲಿಫ್ಟನ್ ರೊಜಾರಿಯೋ, ಡಿ.ಎಚ್. ಪೂಜಾರ್, ವಿ.ಎನ್. ರಾಜಶೇಖರ್, ಮನ್ಸೂರ್ ಅಲಿ ಖಾನ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

ಎಂಟನೇ ರಾಜ್ಯಮಟ್ಟದ ಅಂತರ ಕಾಲೇಜು ಜಾನಪದ ಮೇಳ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಶಿವರಾಜ ಎಸ್. ತಂಗಡಗಿ, ಅತಿಥಿಗಳು: ಟಿ. ತಿಮ್ಮೇ ಗೌಡ, ಬಿ. ರಮೇಶ್, ಡಿ. ಮುನಿರಾಜು, ವಿನಯ ಕಣಿವೆ, ಆಯೋಜನೆ: ಜಾಗತಿಕ ಜಾನಪದ ಹಬ್ಬ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

'ಸ್ಥಳನಾಮಗಳ ವರ್ಗೀಕರಣ' ದತ್ತಿ ಉಪನ್ಯಾಸ: ಡಿ.ಕೆ. ನಟರಾಜ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ವಿಶ್ವ ಪುಸ್ತಕ ಹಾಗೂ ಕೃತಿಸ್ವಾಮ್ಯ ದಿನಾಚರಣೆ, ವಾರ್ಷಿಕ ಪ್ರಶಸ್ತಿ ಪ್ರದಾನ: ಐ.ಎಂ. ವಿಠ್ಠಲಮೂರ್ತಿ, ಅತಿಥಿ: ಶಾಂತಲಾ ಧರ್ಮರಾಜ್, ಅಧ್ಯಕ್ಷತೆ: ಡಾ. ವಸುಂಧರಾ ಭೂಪತಿ, ಪ್ರಶಸ್ತಿ ಸ್ವೀಕರಿಸುವವರು: ಕೆ. ವೆಂಕಟೇಶ್, ಯಮುನಾ ಗಾಂವ್ಕರ್, ಆಯೋಜನೆ: ಕರ್ನಾಟಕ ಪ್ರಕಾಶಕರ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ದಾಸ ವೈಭವ: ಗಾಯನ: ಮಾನಸ ಎಸ್. ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

ವಿಶ್ವ ಪುಸ್ತಕದ ದಿನದ ಅಂಗವಾಗಿ 'ವ್ಯಕ್ತಿ ಮತ್ತು ಪುಸ್ತಕಗಳು' ಉಪನ್ಯಾಸ: ಸುಚೇಂದ್ರ ಪ್ರಸಾದ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿಯ ದಕ್ಷಿಣ ಪ್ರಾದೇಶಿಕ ಕಚೇರಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5



ಕ. ಸುಚೇಂದ್ರ ಪ್ರಸಾದ

'ಬಂಗಾರದ ಮನುಷ್ಯ' ಡಾ. ರಾಜ್‌ಕುಮಾರ್ ಗಾನ ಜೀವನ ಯಾನ: ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಅತಿಥಿ: ಪ್ರಕಾಶ್‌ರಾಜ್, ನುಡಿ ನಮನ: ಜಯಮಾಲಾ, 'ಮುಖ್ಯಮಂತ್ರಿ' ಚಂದ್ರು, ಎಂ.ಕೆ. ಸುಂದರ್‌ರಾಜ್, ಟಿ.ಎಸ್. ನಾಗಾಭರಣ, ಗಿರಿಜಾ ಲೋಕೇಶ್, ಆಯೋಜನೆ: ಸಂಗೀತ ಸಂಭ್ರಮ, ಸುರಾಘವಿ ಫೌಂಡೇಷನ್, ಬಾಬು ಸ್ಕೂಲ್ ಆಫ್ ರಿಧಮ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6

ರಾಜ್ಯಮಟ್ಟದ ಕನ್ನಡ ರಂಗ ಸ್ಪರ್ಧೆ–2026: 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ಪ್ರಸ್ತುತಿ: ರಂಗತಂತ್ರ, ಆಯೋಜನೆ: ರಂಗಾಸ್ಥೆ, ಸ್ಥಳ: ಯುವಪಥ, ಜಯನಗರ ನಾಲ್ಕನೇ ಹಂತ, ಸಂಜೆ 7

ದಾಸರ ಪದಗಳ ಗಾಯನ: ಸುರಭಿ, ಪ್ರೇಕ್ಷಾ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, 6ನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕಸ ಸಂಗ್ರಹ ವ್ಯತ್ಯಯಕ್ಕಿಲ್ಲ ದಂಡ

ತ್ಯಾಜ್ಯ ವಿಂಗಡಿಸದಿದ್ದರೆ ನಿವಾಸಿಗಳಿಗೆ ದಂಡ

• ನಿತ್ಯವೂ ವಿಲೇವಾರಿಯಾಗದ ಹಸಿ ಕಸ

• ಆರ್.ಮಂಜುನಾಥ್

ಕೆ.ಆರ್. ಮಾರುಕಟ್ಟೆ ಬಸ್ ನಿಲ್ದಾಣದ ಬಳಿಯ ರಸ್ತೆಯಲ್ಲಿ ನಿತ್ಯವೂ ಕಸ ರಾಶಿ ಇರುತ್ತದೆ ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: 'ಮನೆಯ ಕಸವನ್ನು ವಿಂಗಡಿಸಿಟ್ಟಿರುತ್ತೇವೆ, ಪಾಲಿಕೆಯವರು ಹೇಳಿದ ನಿಯಮವನ್ನೇ ಪಾಲಿಸಿರುತ್ತೇವೆ. ಆದರೆ ಕಸ ಸಂಗ್ರಹಿಸುವವರು ಬರುವುದಿಲ್ಲ. ಇಂತಹ ಲೋಪಕ್ಕೆ ನಗರ ಪಾಲಿಕೆಗಳು ದಂಡ ವಿಧಿಸುವುದಿಲ್ಲವೇ...'

ನಗರದ ಹಲವು ಬಡಾವಣೆಗಳ ನಾಗರಿಕರ ಪ್ರಶ್ನೆ ಇದು.

'ಹಸಿ, ಒಣ, ನೈರ್ಮಲ್ಯ ಹಾಗೂ ವಿಶೇಷ ಕಾಳಜಿಯ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಇಡಿ; ಸರಿಯಾದ ಡಸ್ಟ್‌ಬಿನ್ ಬಳಸಿರಿ, ಮುಚ್ಚಿ ಇಡಿ; ಅಧಿಕೃತ ಸಂಗ್ರಹಕರಿಗೆ ಮಾತ್ರ ತ್ಯಾಜ್ಯ ಹಸ್ತಾಂತರಿಸಿ; ಸಾಧ್ಯವಾದರೆ ಹಸಿ ತ್ಯಾಜ್ಯವನ್ನು ಮನೆಯಲ್ಲೇ/ ಸಮುದಾಯದಲ್ಲಿ ಕಾಂಪೋಸ್ಟ್ ಮಾಡಿ; ಕಡಿಮೆ ಬಳಕೆ- ಮರು ಬಳಕೆ, ಮರು ಸಂಸ್ಕರಣೆ ಅನುಸರಿಸಿ... ಈ ನಿಯಮಗಳನ್ನು ಉಲ್ಲಂಘನೆ ಮಾಡಿದಲ್ಲಿ ದಂಡ ವಿಧಿಸಲಾಗುತ್ತದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹಾಗೂ ಐದೂ ನಗರ ಪಾಲಿಕೆಗಳು ಪ್ರಚಾರ ಮಾಡುತ್ತಲೇ ಇವೆ. ಆದರೆ, ಅವರ ನಿಯಮಗಳೆಲ್ಲವನ್ನೂ ಪಾಲಿಸಿದರೂ ಮೂರ್ನಾಲ್ಕು ದಿನ ತ್ಯಾಜ್ಯ ಸಂಗ್ರಹಿಸುವುದೇ ಇಲ್ಲ. ಅವರಿಗೆ ಯಾವ ದಂಡ ವಿಧಿಸುತ್ತಿದ್ದೀರಿ ಹೇಳಿ' ಎಂದು ಯಶವಂತಪುರ, ರಾಜರಾಜೇಶ್ವರಿನಗರ, ಜಯನಗರ, ಪದ್ಮನಾಭನಗರ, ಬಿಟಿಎಂ ಲೇಔಟ್, ಯಲಹಂಕ, ಬ್ಯಾಟರಾಯನಪುರದ ಹಲವು ನಾಗರಿಕರು ಪ್ರಶ್ನಿಸುತ್ತಾರೆ.

'ಕಸ ಬಿಸಾಡಿದವರು, ವಿಂಗಡಿಸಿದವರಿಗೆ ದಂಡ ವಿಧಿಸಿ, ಫೋಟೊ ತೆಗೆಸಿಕೊಳ್ಳುವ ಮಾರ್ಷಲ್‌ಗಳು ಹಾಗೂ ಅಧಿಕಾರಿಗಳು, ಮನೆಮನೆಯಿಂದ ಕಸ ಸಂಗ್ರಹಿಸದವರ ಮೇಲೆ ಏಕೆ ಕ್ರಮ ಕೈಗೊಳ್ಳುವುದಿಲ್ಲ' ಎಂಬುದು ಹಲವರ ಪ್ರಶ್ನೆಯಾಗಿದೆ. ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಈ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲಿಲ್ಲ.

'ತ್ಯಾಜ್ಯ ವಿಂಗಡಿಸದಿದ್ದರೆ ಕೊಂಡೊಯ್ಯುವುದಿಲ್ಲ ಎನ್ನುತ್ತಾರೆ. ಎಲ್ಲ ರೀತಿಯ ವಿಂಗಡಣೆ ಮಾಡಿದರೂ, ಹಸಿ ಕಸವನ್ನು ನಿತ್ಯವೂ ಸಂಗ್ರಹಿಸುತ್ತಿಲ್ಲ. ಈ ಬಗ್ಗೆ ಸಹಾಯವಾಣಿಗೆ ದೂರು ನೀಡಿದರೆ, ಅಂದು ಅಥವಾ ಮುಂದಿನ ದಿನ ಸಂಗ್ರಹವಾಗುತ್ತದೆ. ಮತ್ತೆ ಅದೇ ಸ್ಥಿತಿ. ಅಲ್ಲದೆ, 'ನಮ್ಮ ಮೇಲೆ ದೂರು ನೀಡಿದ್ದೀರಾ' ಎಂದು ಕಸ ಸಂಗ್ರಹಿಸುವವರು ದಬಾಯಿಸುತ್ತಾರೆ. ಅವರಿಗೆ ಮಾತು ಕೊಡಲು ಸಾಧ್ಯವಿಲ್ಲ' ಎಂದು ಜಯನಗರದ ನಿವಾಸಿ ವಿದ್ಯಾ ಹೇಳಿದರು.

'ಮೊದಲು ಕಸದ ಸೆಸ್ ಎಂದು ಆಸ್ತಿ ತೆರಿಗೆಯಲ್ಲೇ ಪಡೆಯುತ್ತಿದ್ದರು. ಕಳೆದ ವರ್ಷದಿಂದ ಕಸದ ಸೇವಾ ತೆರಿಗೆ ಎಂದು ಸಾವಿರಾರು ರೂಪಾಯಿಯನ್ನು ಆಸ್ತಿ ತೆರಿಗೆಗೇ ಸೇರಿಸಿದ್ದಾರೆ. ಅಷ್ಟು ಕೊಟ್ಟರೆ ನಮ್ಮ ಬಡಾವಣೆ ಸ್ವಚ್ಛವಾಗುತ್ತದೆ ಎಂದು ನಂಬಿದ್ದೆವು, ಅದೂ ಇಲ್ಲ. ಹಿಂದಿಗಿಂತ ಕಸದ ಸಮಸ್ಯೆ ಹೆಚ್ಚಾಗುತ್ತಲೇ ಇದೆ. ಅಲ್ಲದೆ, ಕಸ ಸಂಗ್ರಹಿಸುವವರಿಗೆ ಹಣ ಕೊಡದಿದ್ದರೆ ಅವರು ಮನೆ ಬಳಿ ಆಟೊ ನಿಲ್ಲಿಸುವುದೇ ಇಲ್ಲ. ಬಾಯಿಗೆ ಬಂದಹಾಗೆ ಮಾತನಾಡುತ್ತಾರೆ. ಅಧಿಕಾರಿಗಳಿಗೆ ಹೇಳಿದರೆ ಅವರೂ ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ಈ ವ್ಯವಸ್ಥೆಯನ್ನು ಅಧಿಕಾರಿಗಳೇ ಸರಿಪಡಿಸದಿದ್ದರೆ ಹೇಗೆ? ಎಂದು ವಿಜಯನಗರದ ಗೌರಮ್ಮ ಪ್ರಶ್ನಿಸಿದರು.

'ರಸ್ತೆಗಳಲ್ಲಿ ಕಸ ಎಸೆಯುವುದು ಸಾಮಾನ್ಯವಾಗಿಬಿಟ್ಟಿದೆ. ಕೆಲಸಕ್ಕೆ ಹೋಗುವವರಿಗೆ ಅನುಕೂಲ ವಾಗುವಂತೆ ಬೆಳಿಗ್ಗೆ ಹಾಗೂ ರಾತ್ರಿ ವೇಳೆಯಲ್ಲಿ ಕಸ ಸಂಗ್ರಹಿಸಲಾಗುತ್ತದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದರು. ಆದರೆ, ಅಂತಹ ವ್ಯವಸ್ಥೆ ಎಲ್ಲೂ ಕಾಣುತ್ತಿಲ್ಲ. ಬೆಳಿಗ್ಗೆ ಸಮಯದಲ್ಲೇ ಕಸ ಸಂಗ್ರಹಿಸುವುದಿಲ್ಲ, ಇನ್ನು ಸಂಜೆಯಾದ ಮೇಲೆ ಅವರು ಮನೆಮನೆಗೆ ಬರುತ್ತಾರೆಯೇ? ಅಧಿಕಾರಿಗಳು ನಿಯಮ ಮಾಡುವ ಮುನ್ನ ಯೋಚಿಸಬೇಕು' ಎಂದು ರಾಜರಾಜೇಶ್ವರಿನಗರದ ಉಮಾ ಹೇಳಿದರು.

ಒಣತ್ಯಾಜ್ಯ ಸಂಗ್ರಹಿಸುತ್ತಿಲ್ಲ

ಹೊಸಕೆರೆಹಳ್ಳಿ, ಪದ್ಮನಾಭನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಒಣ ತ್ಯಾಜ್ಯ ಸಂಗ್ರಹಿಸುತ್ತಿಲ್ಲ. ದಿನಬಿಟ್ಟು ದಿನ ಹಸಿ ಕಸವನ್ನು ಸಂಗ್ರಹಿಸುತ್ತಿದ್ದಾರೆ. ಆದರೆ, ಒಣ ತ್ಯಾಜ್ಯ ಸಂಗ್ರಹಿಸಲು ಯಾರೂ ಬರುತ್ತಿಲ್ಲ. ಹೀಗಾಗಿ, ರಸ್ತೆಗಳಲ್ಲಿ ಒಣ ತ್ಯಾಜ್ಯ ಸುರಿಯಲಾಗುತ್ತಿದೆ ಎಂದು ನಿವಾಸಿಗಳು ದೂರಿದರು.

ವಿಜಯನಗರದ ಕ್ಲಬ್ ಸುತ್ತಮುತ್ತಲಿನ ವಸತಿ ಪ್ರದೇಶಗಳಲ್ಲಿರುವ ಖಾಲಿ ನಿವೇಶನಗಳಲ್ಲಿ ಸೋಫಾ, ಹಾಸಿಗೆ ಸೇರಿದಂತೆ ಹಲವು ರೀತಿಯ ತ್ಯಾಜ್ಯವನ್ನು ಸುರಿಯಲಾಗುತ್ತಿದೆ. ಹಲವು ತಿಂಗಳಿಂದ ಇದೇ ರೀತಿ ತ್ಯಾಜ್ಯ ಬಿದ್ದಿದ್ದರೂ ನಗರ ಪಾಲಿಕೆಯವರು ಕ್ರಮ ಕೈಗೊಳ್ಳುತ್ತಿಲ್ಲ. ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ ಎಂದು ಸ್ಥಳೀಯ ನಿವಾಸಿ ಸುನಿಲ್ ಹೇಳಿದರು.

ಟೆಲಿಕಾಂ ಬಡಾವಣೆಯ ನಾಗರಿಕರ ಸೌಲಭ್ಯದ ನಿವೇಶನಗಳಲ್ಲಿ ಕಸವನ್ನು ಸುರಿದು ಅಲ್ಲೇ ವಿಂಗಡಿಸಲಾಗುತ್ತದೆ. ಅಲ್ಲದೆ, ಲಾರಿ, ಆಟೊ ಸೇರಿದಂತೆ ಹತ್ತಾರು ವಾಹನಗಳು ನಿಂತಿರುತ್ತವೆ. ಇಲ್ಲಿ ಓಡಾಡಲು ಸಾಧ್ಯವಾಗದಂತಹ ಪರಿಸ್ಥಿತಿ ಇದೆ ಎಂದು ಚಂದ್ರಶೇಖರ್ ದೂರಿದರು.

ನೋಡಿ, ಇಲ್ಲಿದೆ ಕಸ!

ಕನಕಪುರ ರಸ್ತೆಯ ವಾರ್ಡ್ ಸಂಖ್ಯೆ 196ರ ಸುಪ್ರೀಂ ಗಾರ್ಮೆಂಟ್ಸ್ ರಸ್ತೆಯುದ್ದಕ್ಕೂ ಕಸ ಬಿದ್ದಿದ್ದು, ಅದನ್ನು ಬೀದಿ ನಾಯಿಗಳು ರಸ್ತೆಗೆ ಎಳೆದು ಹಾಕಿವೆ

ಬನಶಂಕರಿ ಮೊದಲನೇ ಹಂತದ ಅಂಚೆ ಕಚೇರಿ ಮುಂಭಾಗದ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ

ನಿಮ್ಮ ಬಡಾವಣೆಯಲ್ಲಿ ಕಸ ವಿಲೇವಾರಿಯಾಗುತ್ತಿಲ್ಲವೇ? ರಸ್ತೆಗಳಲ್ಲಿ ತ್ಯಾಜ್ಯ ಸುರಿಯಲಾಗುತ್ತಿದೆಯೇ? ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ಮಾಹಿತಿಯನ್ನು ನಿಮ್ಮ ಹೆಸರು, ವಿಳಾಸದೊಂದಿಗೆ 'ಪ್ರಜಾವಾಣಿ'ಗೆ ಕಳುಹಿಸಿ.
9606038256

ಮಾರತ್‌ಹಳ್ಳಿಯ ಮುನ್ನೇಕೊಳಾಲು ಮಂಜುನಾಥ ಬಡಾವಣೆಗೆ ಸಂಪರ್ಕಿಸುವ ಮುಖ್ಯರಸ್ತೆಯಲ್ಲಿ ಕಸದ ರಾಶಿ

ಆರ್‌.ಟಿ. ನಗರದ ಸುಲ್ತಾನಪಾಳ್ಯದಿಂದ ಭುವನೇಶ್ವರಿನಗರಕ್ಕೆ ಸಂಪರ್ಕಿಸುವ ಮುಖ್ಯರಸ್ತೆಯಲ್ಲಿ ಬಿದ್ದಿರುವ ಕಸ

ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ: ಪರಮೇಶ್ವರ

ಬೆಂಗಳೂರು: 'ನಿಯಮ ಉಲ್ಲಂಘಿಸುವ ಹೋಮ್ ಸ್ಟೇಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಈಗಾಗಲೇ ಹೋಮ್ ಸ್ಟೇಗಳಿಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಹೊರಡಿಸಲಾಗಿದೆ. ಅದರ ಪ್ರಕಾರ ಹೋಮ್ ಸ್ಟೇ ಮಾಲೀಕರು ನಡೆದುಕೊಳ್ಳಬೇಕು. ಅದನ್ನು ಮೀರಿ ಘಟನೆಗಳು ನಡೆದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಕೊಡಗಿನ ಹೋಮ್ ಸ್ಟೇಯಲ್ಲಿ ವಿದೇಶಿ ಮಹಿಳೆ ಮೇಲೆ ಅತ್ಯಾಚಾರ ನಡೆದ ಘಟನೆ ಗೊತ್ತಾದ ತಕ್ಷಣ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ' ಎಂದರು.

'ಇಂತಹ ಘಟನೆ ರಾಜ್ಯಕ್ಕೆ ಅಥವಾ ಸಮಾಜಕ್ಕೆ ಉತ್ತಮ ಸಂದೇಶ ಕೊಡುವುದಿಲ್ಲ. ಹೊರ ದೇಶದಿಂದ ಬಂದವರ ಮೇಲೆ ಈ ರೀತಿ ಆದಾಗ ನಮ್ಮ ಸಮಾಜ, ದೇಶದ ಕುರಿತು ಯಾವ ರೀತಿಯ ಸಂದೇಶ ಹೋಗುತ್ತದೆ. ಇಂತಹ ವಿಚಾರದಲ್ಲಿ ಕಠಿಣವಾದ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

₹7 ಕೋಟಿ ಮೌಲ್ಯದ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಭಾರಿ ಪ್ರಮಾಣದ ಹೈಡ್ರೋಪೋನಿಕ್ ಗಾಂಜಾ ಹಾಗೂ ಪುರಾತನ ವಿಗ್ರಹ ಜಪ್ತಿ ಮಾಡಿದ್ದಾರೆ.

ಒಟ್ಟು ಮೂರು ಪ್ರತ್ಯೇಕ ಪ್ರಕರಣಗಳಲ್ಲಿ 20.45 ಕೆ.ಜಿ ತೂಕದ ಗಾಂಜಾ ವಶಪಡಿಸಿಕೊಂಡು, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಮಂಗಳವಾರ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕನ ಚೆಕ್-ಇನ್ ಬ್ಯಾಗ್‌ನಲ್ಲಿ ಅಡಗಿಸಿದ್ದ 3.29 ಕೆ.ಜಿ ಗಾಂಜಾ ಪತ್ತೆಯಾಗಿದೆ. ಇದರ ಮೌಲ್ಯ ಸುಮಾರು ₹1.15 ಕೋಟಿ ಎಂದು ಅಂದಾಜಿಸಲಾಗಿದೆ. ಇನ್ನೊಂದು ಪ್ರಕರಣದಲ್ಲಿ 11.11 ಕೆ.ಜಿ ಗಾಂಜಾ ವಶಪಡಿಸಿಕೊಂಡಿದ್ದು, ಅದರ ಮೌಲ್ಯ ₹3.89 ಕೋಟಿ ಎಂದು ತಿಳಿದು ಬಂದಿದೆ.

ಇದಕ್ಕೂ ಮುನ್ನ ಸೋಮವಾರ ನಡೆದ ಕಾರ್ಯಾಚರಣೆಯಲ್ಲಿ 6.05 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದ್ದು, ಇದರ ಮೌಲ್ಯ ₹2.11 ಕೋಟಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಎಲ್ಲಾ ಪ್ರಕರಣಗಳಲ್ಲಿ ಬಂಧಿತ ಆರೋಪಿಗಳ ವಿರುದ್ಧ ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ನೇಪಾಳದ ಪುರಾತನ ವಿಗ್ರಹ ವಶ

ಆಸ್ಟ್ರೀಯಾದ ವಿಯೆನ್ನಾದಿಂದ ಆಮದು ಮಾಡಿಕೊಳ್ಳಲಾದ ಸರಕುಗಳಲ್ಲಿ ಮುಚ್ಚಿಟ್ಟು ಕಳ್ಳಸಾಗಾಟ ಮಾಡಲಾಗುತ್ತಿದ್ದ ನೇಪಾಳದ ಪುರಾತನ ಪದ್ಮಪಾಣಿ ಶಿಲಾ ವಿಗ್ರಹವನ್ನು ಏರ್ ಕಾರ್ಗೋ ಕಮಿಷನರೇಟ್ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

ನೇಪಾಳದ 'ಗ್ರೇ ಸ್ಟೋನ್ ಸ್ಟೀಲ್ ಆಫ್ ಪದ್ಮಪಾಣಿ' ವಿಗ್ರಹ 9ನೇ ಶತಮಾನಕ್ಕೆ ಸೇರಿದ್ದು ಸದ್ಯ ಕಸ್ಟಮ್ಸ್ ವಶದಲ್ಲಿದೆ.

ಕೇಂದ್ರ ಸಂಸ್ಕೃತಿ ಸಚಿವಾಲಯ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ ಪುರಾತನ ಪದ್ಮಪಾಣಿ ವಿಗ್ರಹ

ಪತ್ನಿ ಪರಾರಿ: ದೂರು ನೀಡಿದ ಪತಿ

ಬೆಂಗಳೂರು: 'ಕಸ ಎಸೆದು ಬರುವುದಾಗಿ ಹೇಳಿ ಪ್ರಿಯಕರನೊಂದಿಗೆ ಪತ್ನಿ ಪರಾರಿ ಆಗಿದ್ದಾಳೆ' ಎಂದು ಆರೋಪಿಸಿ, ಪತಿಯೊಬ್ಬರು ಬಾಗಲಗುಂಟೆ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾರೆ.

ಚಿಕ್ಕಮಗಳೂರಿನ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಪತಿ ಖಾಸಗಿ ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರೆ, ಪತ್ನಿ ಗೃಹಿಣಿ.

ರಾತ್ರಿ ಕಸ ಎಸೆದು ಬರುವುದಾಗಿ ಹೇಳಿ ಹೋಗಿದ್ದ ಪತ್ನಿ, ಮನೆಗೆ ಬಾರದ ಕಾರಣ ಪತಿ ಎಲ್ಲೆಡೆ ಶೋಧ ನಡೆಸಿದ್ದಾರೆ. ಮೊಬೈಲ್‌ಗೆ ಕರೆ ಮಾಡಿದಾಗ ಸ್ವಿಚ್ಡ್‌ಆಫ್ ಬಂದಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪ್ರಭು ಎಂಬಾತನ ಮೇಲೆ ಅನುಮಾನವಿದೆ ಎಂಬುದಾಗಿ ಪತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಗೃಹ ಸಚಿವ ಪರಮೇಶ್ವರ ವಿರುದ್ಧ ಬೆಟ್ಟಿಂಗ್ ಆರೋಪ

'ಅಪರಾಧ ಪ್ರಕರಣ ದಾಖಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತುಮಕೂರಿನಲ್ಲಿ ನಡೆದಿದ್ದ ಕಬಡ್ಡಿ ಪಂದ್ಯದಲ್ಲಿ ಅತಿಥಿಯಾಗಿ ಭಾಗವಹಿಸಿ ಅನಧಿಕೃತ ಬೆಟ್ಟಿಂಗ್ ಕಟ್ಟಿ; ಸಣ್ಣ ಸಂಘಟಿತ ಅಪರಾಧ ಕೃತ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಗೃಹಸಚಿವ ಜಿ.ಪರಮೇಶ್ವರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ' ಎಂದು ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿದೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹಂದ್ರಾಳು ಗ್ರಾಮದ ಎಚ್.ಆರ್.ನಾಗಭೂಷಣ್ ಸಲ್ಲಿಸಿರುವ ಖಾಸಗಿ ದೂರಿನ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಈ ಕುರಿತಂತೆ ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಪೊಲೀಸ್ ಠಾಣಾಧಿಕಾರಿಗೆ ಆದೇಶಿಸಿದ್ದು, ಎಫ್‌ಐಆರ್ ಸಿದ್ಧಪಡಿಸಿ ಕಳುಹಿಸುವಂತೆ ನಿರ್ದೇಶಿಸಿದ್ದಾರೆ.

'ಸಚಿವ ಪರಮೇಶ್ವರ 2025ರ ಅಕ್ಟೋಬರ್ 19ರಂದು ತುಮಕೂರು ನಗರದಲ್ಲಿ ನಡೆದಿದ್ದ ಕಬಡ್ಡಿ ಪಂದ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ತಂಡದ ವಿರುದ್ಧ ₹500 ಬೆಟ್ಟಿಂಗ್ ಕಟ್ಟುವ ಮೂಲಕ ಅಪರಾಧ ಕೃತ್ಯಗಳನ್ನು ಎಸಗಲು ಸಾರ್ವಜನಿಕವಾಗಿ ಪ್ರಚೋದನೆ ನೀಡಿದ್ದಾರೆ. ಜಿಲ್ಲೆಯಲ್ಲಿ ಪದೇ ಪದೇ ಅಪರಾಧಿಕ ಕೃತ್ಯಗಳನ್ನು ಎಸಗುತ್ತಿದ್ದಾರೆ. ಅಂತೆಯೇ, ಈ ಬೆಟ್ಟಿಂಗ್‌ನಲ್ಲಿ ಭಾಗಿಯಾಗಿರುವ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ವಿರುದ್ಧವೂ ಕರ್ನಾಟಕ ಪೊಲೀಸ್ ಹಾಗೂ ಬಿಎನ್‌ಎಸ್ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಬೇಕು' ಎಂದು ಕೋರಿ ಖಾಸಗಿ ದೂರು ಸಲ್ಲಿಸಿದ್ದರು.

ಈ ಮೊದಲು ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರು ಕೊಡಿಗೇನಹಳ್ಳಿ ಠಾಣೆಗೆ ದೂರು ನೀಡಿದ್ದರು. 'ದೂರು ಆಧಾರರಹಿತ. ಇದರಲ್ಲಿ ಸಾಕ್ಷ್ಯದ ಕೊರತೆ ಇದೆ' ಎಂಬ ಕಾರಣ ನೀಡಿ ಎಫ್‌ಐಆರ್ ದಾಖಲಿಸಲು ಪೊಲೀಸರು ನಿರಾಕರಿಸಿದ್ದರು. ಈ ಸಂಬಂಧ ದೂರುದಾರರು ಮಧುಗಿರಿ ಡಿವೈಎಸ್‌ಪಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಸಲ್ಲಿಸಿದ್ದರೂ ಪ್ರಯೋಜನವಾಗಿರಲಿಲ್ಲ.

'ಕೋರ್ಟ್ ಏಕಾಏಕಿ ಆದೇಶ'

ಬೆಂಗಳೂರು: 'ಬೆಟ್ಟಿಂಗ್‌ನಲ್ಲಿ ಭಾಗವಹಿಸಿದ ಆರೋಪದ ಕಾರಣಕ್ಕೆ ಎಫ್‌ಐಆರ್ ದಾಖಲಿಸುವಂತೆ ಕೋರ್ಟ್ ಏಕಾಏಕಿ ಆದೇಶ ನೀಡಿದೆ. ಕಾನೂನನ್ನು ಗೌರವಿಸುತ್ತೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಬಡ್ಡಿ ಆಟ ನಡೆಯುವಾಗ ಹಳ್ಳಿ ಜನರು ಬೆಟ್ಟಿಂಗ್ ಬಗ್ಗೆ ಮಾತನಾಡುವಂತೆ ನಾನೂ ಮಾತನಾಡಿದ್ದೆ. ಕಾನೂನಿನ ದೃಷ್ಟಿಯಿಂದ ಅದು ತಪ್ಪು. ಆದರೆ, ನಾನು ಯಾವ ರೀತಿ ಹೇಳಿದ್ದೇನೆ ಎಂಬುದು ಮುಖ್ಯ' ಎಂದರು.

'ಬೆಟ್ಟಿಂಗ್ ಉತ್ತೇಜಿಸಿ ಎಂದು ಹೇಳಿದ್ದರೆ ತಪ್ಪು. ನಾನು ಜವಾಬ್ದಾರಿ ಸ್ಥಾನದಲ್ಲಿರುವವನು. ನಾನು ಬೆಟ್ಟಿಂಗ್‌ಗೆ ಉತ್ತೇಜನ ನೀಡುತ್ತೇನೆಂದರೆ ಸುಳ್ಳು. ನಾನು ಹೇಳಿದ ಮಾತನ್ನು ಅರ್ಥೈಸಿಕೊಳ್ಳುವುದರಲ್ಲಿದೆ. ಕಾನೂನು ರಕ್ಷಣೆ ಮಾಡುವ ಇಲಾಖೆಯ ಮುಖ್ಯಸ್ಥನಾಗಿ ನಾನು ಕಾನೂನಿಗೆ ಗೌರವ ಕೊಡಬೇಕಲ್ಲವೇ? ಕಾನೂನು ಯಾವ ಕ್ರಮ ಕೈಗೊಳ್ಳುತ್ತದೊ ಕೈಗೊಳ್ಳಲಿ. ಅದನ್ನು ನಾನು ಕಾನೂನಿಗೆ ಬಿಟ್ಟಿದ್ದೇನೆ' ಎಂದರು,

'ನನಗೆ ಕೋರ್ಟ್ ನೋಟಿಸ್ ಕೊಟ್ಟಿರಲಿಲ್ಲ. ನೋಟಿಸ್ ಕೊಟ್ಟಿದ್ದರೆ ಅರ್ಥೈಸುತ್ತಿದ್ದೆ. ಈ ವಿಚಾರದಲ್ಲಿ ನನ್ನನ್ನು ಯಾರಾದರೂ ಗುರಿ ಮಾಡಿದ್ದಾರೆಯೇ ಎನ್ನುವುದೂ ಗೊತ್ತಿಲ್ಲ' ಎಂದರು.

ಸಿ.ಎಂ, ಹೈಕಮಾಂಡ್‌ಗೆ ಬಿಟ್ಟಿದ್ದು: 'ಸಂಪುಟ ಪುನರ್ ರಚನೆ ಹೈಕಮಾಂಡ್‌ಗೆ ಬಿಟ್ಟಿದ್ದು. ಈ ವಿಷಯ ನಾವು ಮಾತನಾಡುವುದು ಅಪ್ರಸ್ತುತ. ಅವರು ಏನು ನಿರ್ಧಾರ ಮಾಡುತ್ತಾರೋ ಮಾಡಲಿ. ಅದರಂತೆ ನಾವು ನಡೆದುಕೊಳ್ಳುತ್ತೇವೆ' ಎಂದರು.

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ

ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ–122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ/ಸಿ–ಪೇಸ್/ಎಸ್‌ಟಿಕೆ–2/248(2)/2026–27/111

ದಿ:15.04.2026

ಉಲ್ಲೇಖ:

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕರ್ನಾಟಕ ರಾಜ್ಯದಲ್ಲಿರುವ ಕೆಳಕಂಡ (94) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AC2614505	U74900KA2019FTC121126	ವೇದಕನ್ನೆಕ್ಟ್ ಪ್ರೈವೇಟ್ ಲಿಮಿಟೆಡ್
2	AC2672820	U47912KA2023PTC171630	ರಿಫರ್ಬ್ ಆನ್‌ಲೈನ್ ಪ್ರೈವೇಟ್ ಲಿಮಿಟೆಡ್
3	AC2756714	U17299KA2022PTC161901	ಎ ಬಿ ಆರ್ ಗಾರ್ಮೆಂಟ್ಸ್ ಪ್ರೈವೇಟ್ ಲಿಮಿಟೆಡ್
4	AC2801821	U72100KA1996PTC020376	ಲಿಯೊನಾರ್ಡೊ ಆಟೊಮೇಶನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
5	AC2843506	U46411KA2023PTC179706	ಸ್ಪಿನ್‌ಫ್ಲೂಯೆನ್ಸ್ ಅಪಾರೆಲ್ಸ್ ಅಂಡ್ ಟೆಕ್ಸ್‌ಟೈಲ್ಸ್ ಪ್ರೈವೇಟ್ ಲಿಮಿಟೆಡ್
6	AC2792265	U74999KA2019PTC128638	ಕೆಜಿಕೆಎಸ್‌ಎವಿ & ಅಸೋಸಿಯೇಟ್ಸ್ ಕನ್ಸಲ್ಟನ್ಸಿ ಪ್ರೈವೇಟ್ ಲಿಮಿಟೆಡ್
7	AC2822037	U74999KA2018PTC109960	ಅಡ್ವೊಲ್ವಿಸ್ ಪ್ರೈವೇಟ್ ಲಿಮಿಟೆಡ್
8	AC2816853	U45400KA2020PTC139722	ಬಿಇಇ ಹೋಮ್ಸ್ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್
9	AC2843846	U29269KA2020PTC131451	ಆರ್‌ಇಸಿ.ಫ್ಲೋ ಕಂಟ್ರೋಲ್ಸ್ ಪ್ರೈವೇಟ್ ಲಿಮಿಟೆಡ್
10	AC2930785	U15209KA2024PTC192199	ಲೇಟ್ ನೈನ್ಸ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
11	AC2483663	U72900KA2018PTC109391	ಆಗ್‌ಟ್ರಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
12	AC2569413	U72900KA2019PTC128452	ಬೃಹಸ್ಪತಿಂ ಸೊಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
13	AC2517566	U31501KA2010PTC053414	ಸಿಸ್ಕಾನ್ ಮೀಟರಿಂಗ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
14	AC2362018	U72900KA2017PTC100984	ಬೀಕ್ರಿಪ್ಟ್ ಐಒ ಪ್ರೈವೇಟ್ ಲಿಮಿಟೆಡ್
15	AC2930762	U72900KA1995PTC017851	ಆರೆಂಜ್ ಸಿಟಿ ಎಜುಕೇಶನ್ & ಟ್ರೈನಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
16	AC2796940	U74992KA1983PTC005289	ಯೂನಿವರ್ಸಲ್ ಬಿಜನೆಸ್ ಕಾನ್ಸೆಪ್ಟ್ ಪ್ರೈವೇಟ್ ಲಿಮಿಟೆಡ್
17	AC2519805	U52290KA2024OPC183758	ಬಿಜಯಂ ಲಾಜಿಸ್ಟಿಕ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
18	AC2515123	U40108KA2008PTC046787	ಜೆ ಎಚ್ ಪಿ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್
19	AC2448073	U74999KA2021OPC154972	ಸ್ಮೈಲ್ಸ್ ಅಂಡ್ ಪೋಸಸ್ ಫೋಟೊಗ್ರಾಫಿ (ಒಪಿಸಿ) ಪ್ರೈವೇಟ್ ಲಿಮಿಟೆಡ್
20	AC2523672	U74110KA2020PTC142085	ಎಕ್ಸ್‌ಚೀಯರ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್
21	AC2606771	U65910KA1994PTC015103	ಆಸ್ವತಿ ಹೋಲ್ಡಿಂಗ್ಸ್ ಅಂಡ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್
22	AC2459457	U67190KA2022PTC156979	ಸಿಎನ್ ಫೈನಾನ್ಷಿಯಲ್ ಅಡ್ವಾಯಿಸರಿ ಪ್ರೈವೇಟ್ ಲಿಮಿಟೆಡ್
23	AC2614086	U74999KA2020PTC138638	ಲಿಪ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
24	AC2771523	U74999KA2017PTC104900	ಟಮ್ಮಿಫಿಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
25	AC2612103	U80903KA2021PTC146616	ನೊಆಫಿಷಿಯಲ್ ಸ್ಕೂಲ್ಸ್ ಪ್ರೈವೇಟ್ ಲಿಮಿಟೆಡ್
26	AC2627519	U24290KA2021PTC189692	ನ್ಯೂಟ್ರಾನ್ ಬಯಾಲಾಜಿಕಲ್ ಪ್ರೈವೇಟ್ ಲಿಮಿಟೆಡ್
27	AC2684339	U72900KA2021FTC144575	ಉಕಮಾ ಪ್ರೈವೇಟ್ ಲಿಮಿಟೆಡ್
28	AC2645615	U41001KA2023PTC176015	ರೋಹನ್ ರೆಸಿಡೆನ್ಷಿಯಲ್ ಅಂಡ್ ಹೋಮ್ಸ್ ಪ್ರೈವೇಟ್ ಲಿಮಿಟೆಡ್
29	AC2632675	U35999KA2001PTC029472	ತ್ರಿಭುವನ್ ಆಟೋಮೊಬೈಲ್ಸ್ ಪ್ರೈವೇಟ್ ಲಿಮಿಟೆಡ್
30	AC2921414	U80301KA2022PTC163935	ಬ್ರೈಟ್‌ಫ್ಲೈಟ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
31	AC2638482	U63040KA2021FTC146485	ಬಿಡ್‌ವಿಂಗ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
32	AC2672823	U56290KA2025PTC207633	ಕ್ರೆವೊರಾ ಇಂಡಿಯಾ ಪ್ರೈವೇಟ್ ಲಿಮಿಟೆಡ್
33	AC2675590	U74900KA2016PTC085775	ನೊಟೆಲ್ ಮೀಡಿಯಾ ಇಂಡಿಯಾ ಪ್ರೈವೇಟ್ ಲಿಮಿಟೆಡ್
34	AC2656078	U72200KA2012PTC063411	ಎಂವಿಕರ್ಷ ಮೊಬೈಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
35	AC2865481	U74999KA2019PTC120080	ಟಾಪ್‌ಆಗ್ರೊ ರೈತ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್
36	AC2683517	U70200KA2023OPC177079	ಸ್ಟಾಟ್‌ಅಡ್ವಾಯರ್ಸ್ ಪಾರ್ಟ್ನರ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
37	AC2711538	U72900KA2019PTC120415	ಸೈನೆಕ್ಸಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
38	AC2690159	U72900KA2011PTC061822	ಇನ್ನೊವೇಟ್ ಸರ್ಚ್ ಪ್ರೈವೇಟ್ ಲಿಮಿಟೆಡ್
39	AC2715768	U62020KA2024PTC183007	ಎಚ್‌ರಿಧಂ ಟೆಕ್ ಪ್ರೈವೇಟ್ ಲಿಮಿಟೆಡ್
40	AC2732458	U62091KA2023PTC173513	ಇನ್ಸ್‌ಬೆನ್ನೆ ಈಸ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
41	AC2730381	U51909KA2019FTC120187	ರೊಹ್ಲೆಡರ್ಸ್ ಪ್ರೈವೇಟ್ ಲಿಮಿಟೆಡ್
42	AC2730538	U74999KA2021PTC147924	ಆರ್ಕೈವ್ ಡಿಜಿಟಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
43	AC2883362	U72100KA2016OPC094145	ಫೊಂಟೊ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಒಪಿಸಿ)
44	AC2729076	U74140KA2020PTC135383	ಖುಶೀಂ ಟೆಕ್ ಅಂಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
45	AC2741002	U72900KA2021PTC146315	365 ಡಿಜಿಟಲ್ ಆಡ್ಸ್ ಪ್ರೈವೇಟ್ ಲಿಮಿಟೆಡ್
46	AC2879515	U70200KA2025FTC208743	ಎಸುಹಾಯಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
47	AC2873118	U96092KA2023PTC178156	ಪಾವ್‌ಟೆಲ್ ಅಂಡ್ ಸ್ವಾವ್ ಪ್ರೈವೇಟ್ ಲಿಮಿಟೆಡ್
48	AC2823723	U74999KA2019PTC121189	ಇಲೆವೇಶನ್ಸ್ ಇನ್ಫೋಲೈನ್ ಸೋರ್ಸಿಂಗ್ ಪ್ರೈವೇಟ್ ಲಿಮಿಟೆಡ್
49	AC2763417	U36999KA2017PTC108869	ಸ್ಥಿರ ಇಕೊ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್
50	AC2744397	U62091KA2023PTC173108	ವಿಚಾರ್ವ್ ಟೆಕ್ನಾಲಜಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
51	AC2770899	U70200KA2024OPC191366	ಮಾರ್ಷ್ ಗ್ರೇ ಸರ್ವೀಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
52	AC2755855	U72200KA2022PTC167408	ತ್ರಿಕಾಲಜ್ಞ ಎಜುಕೇಶನ್ ಪ್ರೈವೇಟ್ ಲಿಮಿಟೆಡ್
53	AC2712142	U52601KA2022PTC159518	ಎಸ್‌ವಿ ಫ್ಯೂಚರ್ ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್
54	AC2784387	U46901KA2025PTC199258	ರೊಸೆಲೆಕ್ಟ್ ಪ್ರೈವೇಟ್ ಲಿಮಿಟೆಡ್
55	AC2784765	U62013KA2025OPC205021	ಕಾರ್ಸುಗಾನ್ ವೆಂಚರ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
56	AC2790981	U74999KA2016PTC097162	ಪಿಎಚ್‌ಐ ಮೋಶನ್ ಪಿಕ್ಚರ್ಸ್ ಪ್ರೈವೇಟ್ ಲಿಮಿಟೆಡ್
57	AC2783515	U72900KA2020PTC142606	ಪಿಕ್ಸೆಲ್‌ಬೈಟ್ ಸ್ಟುಡಿಯೊ ಪ್ರೈವೇಟ್ ಲಿಮಿಟೆಡ್
58	AC2880922	U70109KA2022PTC163796	ಆರ್‌ಒಐ ಪ್ರಾಜೆಕ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
59	AC2784773	U85500KA2024PTC185432	ಟ್ರೋಪ್ಸ್ ಅಂಡ್ ಪೈಪೊಟ್ಸ್ ಲರ್ನಿಂಗ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್
60	AC2787966	U31909KA2001PTC028777	ಕೆಇ–ಮಟೀರಿಯಲ್ ಹ್ಯಾಂಡ್ಲಿಂಗ್ ಪ್ರೈವೇಟ್ ಲಿಮಿಟೆಡ್
61	AC2810391	U62011KA2025PTC203305	ಗೋಲ್‌ಕ್ರಾಫ್ಟ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್
62	AC2805900	U27203KA2011PTC061773	ತೇಜ್ ಅಲುಮಿನಿಯಂ ಪ್ರೈವೇಟ್ ಲಿಮಿಟೆಡ್
63	AC2803281	U29195KA2000PTC027039	ಸೋಮು ಪ್ರೊಟೊಪ್ಯಾಕ್ ಪ್ರೈವೇಟ್ ಲಿಮಿಟೆಡ್
64	AC2809543	U74900KA2015PTC083435	ಟಿಎಸ್‌ಇ ಬಿಜನೆಸ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
65	AC2821153	U74900KA2014PTC075462	ರಿಯಾಲಿಟಿಕ್ಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
66	AC2794986	U72900KA2020PTC138650	ಹೆಲ್ತ್‌ಬ್ರಾಹ್ಮಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
67	AC2822910	U52300KA2021PTC152586	ಇಂಪೊರ್ಟಿಕಾಹ್ ಪ್ರೈವೇಟ್ ಲಿಮಿಟೆಡ್
68	AC2837941	U78100KA2023PTC172140	ಗ್ರೇಡ್‌ಖೋ ಕರಿಯರ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
69	AC2822550	U74999KA2018PTC119196	ಸ್ಯಾಪ್‌ಲರ್ನ್ ಇಂಡಿಯಾ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
70	AC2820912	U72900KA2011PTC058581	7ಐ ಸೆಕ್ಯೂರಿಟಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
71	AC2814403	U15400KA2018PTC114214	ಜುರಿಖ ಫ್ರೂಟ್ಸ್ ಪ್ರೈವೇಟ್ ಲಿಮಿಟೆಡ್
72	AC2835414	U62013KA2023PTC181282	ಫ್ಲಾಟ್‌ಫಾರಂಒಪ್ಸ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
73	AC2821506	U52609KA2022PTC158684	ವೇದರಸ ಇಂಡಿಯಾ ಪ್ರೈವೇಟ್ ಲಿಮಿಟೆಡ್
74	AC2817226	U62099KA2023PTC177413	ಇಂಟೆಯಂಟ್ ಟೆಕ್ ಪ್ರೈವೇಟ್ ಲಿಮಿಟೆಡ್
75	AC2849659	U74999KA2022PTC163675	ಕ್ರೆಡ್‌ಆಪ್ಟಿಮೊ ಪ್ರೈವೇಟ್ ಲಿಮಿಟೆಡ್
76	AC2816784	U27200KA2021PTC145403	ಫ್ರಾಸಿಐಲ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್
77	AC2830541	U74999KA2021PTC154822	ಬಿಜ್‌ಪ್ಲಾಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
78	AC2805026	U72900KA2020PTC133730	ಗ್ಲೋಬಲೆಜಿಯೊ ಇಕಾಮರ್ಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
79	AC2817889	U74999KA2020PTC139189	ಅಂಕಲ್ ಜಾಕಿ ಪ್ರೈವೇಟ್ ಲಿಮಿಟೆಡ್
80	AC2829576	U80903KA2020PTC136039	ಡಿ ಎಲ್ ಟ್ರೈನಿಂಗ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
81	AC2835603	U74999KA2016PTC092434	ಸ್ಪನ್‌ಡ್ರೀಮ್ಸ್ ಕ್ರಿಯೇಟಿವ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
82	AC2837906	U51909KA2021PTC151051	ಸ್ಟೊಯಿಕ್ ಮರ್ಚಂಟ್ಸ್ ಪ್ರೈವೇಟ್ ಲಿಮಿಟೆಡ್
83	AC2829864	U74999KA2021PTC150688	ಪರಿಭಾರತಿ ಡಿಜಿಟಲ್ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್
84	AC2829554	U70109KA2019PTC127818	ಅಭಿವೃದ್ಧಿ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್
85	AC2834477	U92490KA2016PTC093262	ಇಂಡಿಯನ್ ಫುಟ್‌ಬಾಲ್ ಕೋಚಸ್ ಅಲಯನ್ಸ್ ಪ್ರೈವೇಟ್ ಲಿಮಿಟೆಡ್
86	AC2534076	U65990KA2022PTC167643	ಕಂಡಿಬಿಲಾ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್
87	AC2252794	U93000KA2012PTC065637	ಎಎಸ್ ವಿಸಾಸ್ ಅಂಡ್ ಪರ್ಮಿಟ್ಸ್.ಕಾಮ್ ಪ್ರೈವೇಟ್ ಲಿಮಿಟೆಡ್
88	AC2851725	U72100KA2022PTC160924	ಬೀಡೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
89	AC2848872	U80301KA2011PTC060776	ಲಿಂಕ್‌ಷೀಟ್ ಲರ್ನಿಂಗ್ ಪ್ರೈವೇಟ್ ಲಿಮಿಟೆಡ್
90	AC2843578	U63030KA2014PTC073993	ಸ್ಕೆಲ್ವಾ ಲಾಜಿಸ್ಟಿಕ್ಸ್ ಪ್ರೈವೇಟ್ ಲಿಮಿಟೆಡ್
91	AC2852937	U72200KA2006PTC039732	ಇಂಗ್‌ಸಾಫ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
92	AC2839201	U85500KA2025PTC199797	ಕನಕ ಮೈಂಡ್‌ಫುಲ್‌ನೆಸ್ ಪ್ರೈವೇಟ್ ಲಿಮಿಟೆಡ್
93	AC2859377	U72200KA2005PTC038056	ಫೋರ್‌ಸೈಟ್ ಸರ್ವೆ ಸಪೋರ್ಟ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
94	AC2848520	U72900KA2016PTC094418	ವ್ಯಮೊನಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಿಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ರೌನಕ್ ಅಗರವಾಲ್
ಡೆಪ್ಯೂಟಿ ರಿಜಿಸ್ಟ್ರಾರ್
CBC 07123/11/0040/2627 ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/83/2025–26 ದಿನಾಂಕ: 22–04–2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ವಸತಿ ಹಾಗೂ ಕೈಗಾರಿಕಾ ವಲಯಗಳಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದಿಸಲಾದ ಮಹಾಯೋಜನೆಯಂತೆ **"ವಸತಿ ಹಾಗೂ ಕೈಗಾರಿಕಾ ವಲಯಗಳಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ"** ಮಾಡಲು ಕೋರಿರುತ್ತಾರೆ. ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ವಾಗಟ ಗ್ರಾಮದ ಸ.ನಂ.ಗಳ ವಿವರ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ	ಭೂ ಉಪಯೋಗ ಬದಲಾವಣೆ ಉದ್ದೇಶ
1	ಶ್ರೀ ಆನಂದಬಾಬು. ಎಂ.ಎನ್. ಬಿನ್ ಲೇಟ್ ನರಸಿಂಹರೆಡ್ಡಿ	153	01-22	ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ
2	ಶ್ರೀಮತಿ ಭಾರತಿ ಕೋಂ ಎಂ.ಸಿ. ಆನಂದ್ ಕುಮಾರ್	154	02-38	ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಹಾಗೂ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿರುತ್ತಾರೆ.

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಸದರಿ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ಕೈಗಾರಿಕಾ / ವಾಣಿಜ್ಯ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/307/ಅಡ್ವಟೋರ್/2026–27

||jai sri gurudev||

BGSKH Education Trust (R) - A Unit Sri Adichunchanagiri Shikshana Trust (R)

BGS COLLEGE OF ENGINEERING & TECHNOLOGY

(Affiliated to VTU Belagavi & Approved by AICTE, New Delhi)

Mahalakshmipuram, Bengaluru, Karnataka - 560086

www.bgscet.ac.in

Estd. : 2022

KCET CODE : E-286

COMED-K CODE : E-207

Prospective Institution for Aspiring Students

Admissions Open for 2026–27

Courses Offered

B.E. - 4

01 Computer Science and Engineering
02 Artificial Intelligence & Machine Learning
03 Artificial Intelligence and Data Science
04 Computer Science and Design
05 Information Science and Engineering

MBA - 2

Master of Business Administration

01 Marketing
02 Finance
03 Human Resource
04 Business Analytics
05 Dual Specialization
06 Digital Marketing
07 Logistics and supply chain management

VTU Recognised R&D Center at CSE

Vision :

"Creating Competent IT Professionals With Core Values For The Real World."

Mission :

* Providing Students with a Sound Knowledge in IT Fundamentals.
* Exposing Students to Emerging Frontiers in various domains of IT enabling Continuous Learning.
* Promoting Excellence in Teaching, Training, Research and Consultancy.
* Developing Entrepreneurial acumen to venture into Innovative areas of IT.
* Imparting value based Professional Education with a sense of Social Responsibility.

HIGHLIGHTS

Motto: Create, Enrich & Transform

State-of-the-art digital classrooms for engaging learning and holistic student development.

Located in heart of Bengaluru ear shot distance from Mahalakshmi Metro Station (green line) and IISc.

Best lab facilities with 800+ computers in networking and programming.

Student Development Activities Technical Events, Hackathons, Sports day and Extracurricular activities are conducted.

Dedicated Career Development and Corporate Affairs' Center with 100% placement opportunities for all students.

Dedicated Faculties 100+ dedicated, experienced faculties with 50% Doctorate and rest are pursuing PhD

100% admissions from last 4 years with a CET rank of around 2K - 20K. Consistent results with a pass percentage of more than 95% at VTU Exams.

Sports, NSS and Hostel Facilities Dedicated Sports director, coaches and trainers promoting physical and mental health and NSS program officer. Boys and Girls Hostel with dedicated wardens.

Fests and Hackathons SUSHUMNA - Annual cultural fest, ADVAYA - Pan-India 24 hours Hackathon, Sports day, Workshops and seminars for students skill development.

R&D and Incubation Centres 40 Patents: 12 granted. International Conference - IEEE

5 CoEs and SDCs In association with leading industries: CISCO, Exaleap, Technodysis and 5G. VTU Skill Development Centre in association with NSDC

SEED & Student Clubs Student centric activities and peer-to-peer learning, IEEE & CSI Chapters. Various Clubs including NSS, Youth Red Cross, Green Campus Initative, Coding & NDLI Clubs

OUR PROUD PERFORMERS OF 2026 BATCH





OUR PROUD RECRUITERS

Infosys, epam, unisys, TATA ELXSI, AUTODESK, cognizant, IBM, wipro, Stratogent, ENHUB, DeltaX, Stemup, POSSPOLE, RAYT VECTOR, BOEING, typeTheta, Idea Infinity, Accentrix, JUSPAY, FWC, SURYA DIGITAL, BRISTLECONE, hp, DYUTI technologies, vtiger, koskii, [24]7.ai, UST, WEBKNOT, AMD, Codeyoung, SASKEN, dentsu, SKILLENTRIX, zeta, Aaptean, ASM, Green, DAIMLER TRUCK, upGrad, VIT, tcs, CGI, Rodoc, BLACK BOX, VFM, infoblox, OnePaper, genpact, Tech Mahindra, NTT DATA, CLOVER BAY, TECHNODYSIS, Delphi - TVS Technologies, jaro education, L&T Technology Services, PHILIPS, smarted, CyRAACS, Edelman Financial Engines, QTR

and many more...

273+ Job Offers for foundation Batch

Highest Package - 27 LPA Average Package - 5.6 LPA
Highest Stipend - 50 K Average Stipend - 15 K Median Package - 6 LPA

BGSCET Placement Statistics as of 21-04-2026

Department	Eligible Students	Single Offers	Multiple Offers	Total Offers
CSE	51	32	14	46
ISE	53	51	21	72
AI&DS	47	41	17	58
AI&ML	48	36	3	39
CSD	52	45	13	58
TOTAL	251	205	68	273

* Ongoing

UNIQUE FEATURES

Driven and Guided by passionate Spiritual Masters, Industry Experts and Academicians.

Situated at Mahalakshmipuram, Chord Road, in the heart of Bengaluru.

100% admissions from last 3 years with a CET cutoff rank of around 12 - 16K. Consistent results with a pass percentage of more than 90 at VTU Exams.

Centers of Excellence in association with leading industries: CISCO, Exaleap, Technodysis and 5G. VTU Skill Development Centre in association with NSDC

State-of-the art classrooms and well-equipped laboratories with 500+ computers having high-end configuration and necessary accessories.

Unique institution with unique opportunities for every individual.

More than 70% of 3rd year students are pursuing internships at IT industry.

For Admissions Contact 9844846820 / 9964897207 / 9611525664 / 9731292555

ಚಿಟಿಕೆ ಸುದ್ದಿ

ವಿದೇಶಿ ಮಹಿಳೆಗೆ ಲೈಂಗಿಕ ಕಿರುಕುಳ; ಇಬ್ಬರ ಬಂಧನ

ಮಡಿಕೇರಿ: ಕೊಡಗು ಜಿಲ್ಲೆಯ ಕೇರಳ ಗಡಿ ಭಾಗ ಕುಟ್ಟ ವ್ಯಾಪ್ತಿಯ ಹೋಂಸ್ಟೇನಲ್ಲಿ ತಂಗಿದ್ದ ವಿದೇಶಿ ಮಹಿಳೆ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ಕಿರುಕುಳ ಪ್ರಕರಣಕ್ಕೆ ಸಂಬಂಧಿಸಿ ಹೋಂಸ್ಟೇ ಮಾಲೀಕ ಹಾಗೂ ಒಬ್ಬ ಸಿಬ್ಬಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಸಿಬ್ಬಂದಿ ಅಮಲು ಬರಿಸುವ ಪಾನೀಯ ನೀಡಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಮಹಿಳೆ ಅಮೆರಿಕ ರಾಯಭಾರ ಕಚೇರಿಗೆ ಮಾಹಿತಿ ನೀಡಿದ್ದರು. ಇದು, ಸೂಕ್ಷ್ಮ ಪ್ರಕರಣವಾಗಿರುವುದರಿಂದ ಹೆಚ್ಚಿನ ವಿವರ ನೀಡಲಾಗದು’ ಎಂದು ಎಸ್ಪಿ ಆರ್.ಎನ್.ಬಿಂದುಮಣಿ ಹೇಳಿದರು.

‘ಅಮೆರಿಕ ರಾಯಭಾರ ಕಚೇರಿಯಿಂದ ಯಾರೂ ಮಾಹಿತಿ ಪಡೆದಿಲ್ಲ’ ಎಂದು ಸ್ಪಷ್ಟಪಡಿಸಿದರು. ‘ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಬೇಕು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸೂಚಿಸಿದ್ದಾರೆ.

ಬೆಂಕಿ ಹಚ್ಚಿಕೊಂಡು ನೋವಿನಿಂದ ಓಡಾಡಿದ ಮಹಿಳೆ

ಸವದತ್ತಿ (ಬೆಳಗಾವಿ ಜಿಲ್ಲೆ): ಇಲ್ಲಿನ ಗುರ್ಲಹೊಸೂರಿನ ಬಡಾವಣೆಯ ಕೋರ್ಟ್ ಬಳಿ ಬುಧವಾರ ಮಹಿಳೆಯೊಬ್ಬರು ದೇಹ, ತಲೆಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಬೀದಿಯಲ್ಲಿ ಓಡಾಡಿದ್ದಾರೆ.

‘ಅನಿತಾ ಹನಮಂತಪ್ಪ ಕರಿಗಾರ ಬೆಂಕಿ ಹಚ್ಚಿಕೊಂಡಿದ್ದು, ನೋವು ತಾಳಲಾರದೇ ರಸ್ತೆ ತುಂಬ ಓಡಾಡಿದ್ದಾರೆ. ಅವರನ್ನು ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ತಲೆ, ಕುತ್ತಿಗೆಯಲ್ಲಿ ಸುಟ್ಟ ಗಾಯಗಳಾಗಿವೆ. ನೋವಿನಿಂದ ಕಿರುಚಾಡುತ್ತಿದ್ದಾರೆ. ಚಿಕಿತ್ಸೆಗೆ ಸ್ಪಂದಿಸುತ್ತಿಲ್ಲ’ ಎಂದು ಸಹಾಯಕ ವೈದ್ಯಾಧಿಕಾರಿ ತಿಳಿಸಿದ್ದಾರೆ.

ಲಂಚ: ಪಿಎಸ್ಐ, ಕಾನ್‌ಸ್ಟೆಬಲ್ ಬಂಧನ

ಭೀಮಪ್ಪ ರಬಕವಿ

ಸಂತೋಷ ಬಿರಾದಾರ

ಕೆರೂರ (ಬಾಗಲಕೋಟೆ ಜಿಲ್ಲೆ): ಜೂಜಾಟ ಪ್ರಕರಣದಲ್ಲಿ ವಶಕ್ಕೆ ಪಡೆದಿದ್ದ ಆರೋಪಿ ಬಿಡುಗಡೆಗೆ ₹ 1.70 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಕೆರೂರ ಪೊಲೀಸ್ ಠಾಣೆ ಪಿಎಸ್ಐ ಭೀಮಪ್ಪ ರಬಕವಿ ಮತ್ತು ಕಾನ್‌ಸ್ಟೆಬಲ್ ಶಂಕರ ಬಿರಾದಾರ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

‘ಈ ಬಗ್ಗೆ ಮುತ್ತಪ್ಪ ನಾಯ್ಕರ ದೂರು ನೀಡಿದ್ದರು’ ಎಂದು ಅಧಿಕಾರಿಗಳು ತಿಳಿಸಿದರು. ಲೋಕಾಯುಕ್ತ ಎಸ್ಪಿ ಎಂ.ಬಿ. ನಂದಗಾವಿ ಅವರು ಕಾರ್ಯಾಚರಣೆಯ ನೇತೃತ್ವವನ್ನು ವಹಿಸಿದ್ದರು.

‘ಶ್ರೀ ರಾಜರಾಜೇಶ್ವರ’ ಪ್ರಶಸ್ತಿಗೆ ತಂತ್ರಿ ಆಯ್ಕೆ


ನರಸಿಂಹ ತಂತ್ರಿ

ಪಡುಬಿದ್ರಿ (ಉಡುಪಿ ಜಿಲ್ಲೆ): ಶ್ರೀ ಪಲಿಮಾರು ಮಠಾಧೀಶ ವಿದ್ಯಾಧೀಶ ತೀರ್ಥರು ನೀಡುವ ‘ಶ್ರೀ ರಾಜರಾಜೇಶ್ವರ’ ಪ್ರಶಸ್ತಿಗೆ ಕುಡುಪು ಶ್ರೀಮದನಂತ ಪದ್ಮನಾಭ ದೇವಸ್ಥಾನದ ತಂತ್ರಿ ಕುಡುಪು ನರಸಿಂಹ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ರಜತ ಫಲಕ, ₹ 50 ಸಾವಿರ ನಗದು ಒಳಗೊಂಡಿದೆ. ಏ.26ರಂದು ವಿದ್ಯಾಮಾನ್ಯತೀರ್ಥ ಶ್ರೀಪಾದರ ಆರಾಧನಾ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪಲಿಮಾರು ಮಠದ ಹೇಳಿಕೆ ತಿಳಿಸಿದೆ.

ಅಧಿಕಾರಿಗೆ ₹25 ಸಾವಿರ ದಂಡ

ಮಳವಳ್ಳಿ (ಮಂಡ್ಯ ಜಿಲ್ಲೆ): ಆರ್‌ಟಿಐ ಅರ್ಜಿದಾರರಿಗೆ ಸಕಾಲದಲ್ಲಿ ಮಾಹಿತಿ ನೀಡದ ಇಲ್ಲಿನ ಪುರಸಭೆಯ ಪರಿಸರ ಎಂಜಿನಿಯರ್ ವೀಕ್ಷಿತಾ ಅವರಿಗೆ ಕರ್ನಾಟಕ ಮಾಹಿತಿ ಆಯೋಗ ₹25 ಸಾವಿರ ದಂಡ ವಿಧಿಸಿದೆ.

ಪುರಸಭೆಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆದ ವಾಹನ, ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ವಿವರ ಕೋರಿ ಬನ್ನೂರು ನಿವಾಸಿ ನಿತಿನ್ ಅರ್ಜಿ ಸಲ್ಲಿಸಿದ್ದರು. ಮಾಹಿತಿ ಸಿಗದ ಕಾರಣ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ ಆಯೋಗ, ಎರಡು ವರ್ಷಗಳಾದರೂ ದಾಖಲೆ ಒದಗಿಸದ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡಿತ್ತು. ಸಮಯ ಕೋರಿದ್ದ ಅವರು ನಂತರವೂ ವಿಚಾರಣೆಗಳಿಗೆ ಸತತ ಗೈರು ಹಾಜರಾಗಿದ್ದರು. ದಂಡ ವಿಧಿಸಿರುವ ಆಯೋಗ ಮುಂದಿನ ವಿಚಾರಣೆಗೆ ಖುದ್ದು ಹಾಜರಾಗಿ ವಿವರಣೆ ನೀಡಲು ಸೂಚಿಸಿದೆ.

₹102 ಕೋಟಿ ಜಿಎಸ್‌ಟಿ ವಂಚನೆ: ಸೆರೆ

ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ಸಕ್ರಿಯವಾಗಿದ್ದ ಜಾಲ

ಪ್ರಜಾವಾಣಿ ವಾರ್ತೆ

ಮೊಹಮ್ಮದ್ ತೌಕೀರ್

ಬೆಂಗಳೂರು: ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ ₹410 ಕೋಟಿ ಮೊತ್ತದ ಖೊಟ್ಟಿ ವಹಿವಾಟಿನ ಮೂಲಕ ₹102.50 ಕೋಟಿ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚಿಸಿದ್ದ ಜಾಲವೊಂದನ್ನು ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಕರ್ನಾಟಕ, ತಮಿಳುನಾಡು ಮತ್ತು ಆಂಧ್ರ ಪ್ರದೇಶದಲ್ಲಿ ಸಕ್ರಿಯವಾಗಿದ್ದ ಈ ಜಾಲದ ಕಿಂಗ್‌ಪಿನ್ ಮೊಹಮ್ಮದ್ ತೌಕೀರ್ (42) ಎಂಬಾತನನ್ನು ಅಧಿಕಾರಿಗಳು ಬಂಧಿಸಿದ್ದಾರೆ.

2025ರ ನವೆಂಬರ್‌ನಲ್ಲಿ ಬೆಂಗಳೂರು ನಗರದ ಎಸ್‌ಜೆಪಿ ರಸ್ತೆ, ಜೆ.ಸಿ ರಸ್ತೆ, ಕಲಾಸಿಪಾಳ್ಯ, ಬಿವಿಕೆ ಅಯ್ಯಂಗಾರ್ ರಸ್ತೆಗಳಲ್ಲಿ ಕಾರ್ಯಾಚರಣೆ ನಡೆಸಿದ್ದ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ ಅಧಿಕಾರಿಗಳು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚನೆ ನಡೆಯುತ್ತಿರುವುದನ್ನು ಪತ್ತೆ ಮಾಡಿದ್ದರು.

ಈ ವೇಳೆ ಒಟ್ಟು ₹1,464 ಕೋಟಿ ಮೊತ್ತದ ಖೊಟ್ಟಿ ವಹಿವಾಟು ನಡೆಸಿ, ₹350 ಕೋಟಿಯಷ್ಟು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಂಡಿರುವುದು ಆ ದಾಳಿಯ ವೇಳೆ ಪತ್ತೆಯಾಗಿತ್ತು. ನಗರದ ರೇವತಿ ಮತ್ತು ಇ.ಪ್ರತಾಪ್ ಎಂಬುವವರು ಈ ಜಾಲವನ್ನು ನಡೆಸುತ್ತಿದ್ದರು ಮತ್ತು ತಮಿಳುನಾಡಿನ ಇರ್ಬಾಜ್ ಅಹಮದ್ ಮತ್ತು ನಫೀಜ್ ಅಹಮದ್ ಎಂಬುವವರು ಈ ಜಾಲವನ್ನು ನಿರ್ವಹಿಸುತ್ತಿದ್ದರು ಎಂಬುದು ಗೊತ್ತಾಗಿತ್ತು.

ಈಗ ಈ ಜಾಲವನ್ನು ನಿರ್ವಹಣೆ ಮಾಡುತ್ತಿದ್ದದ್ದು ಆಂಧ್ರ ಪ್ರದೇಶದ ಚಿತ್ತೂರಿನ, ಆದರೆ ಬೆಂಗಳೂರಿನಲ್ಲಿ ನೆಲಸಿರುವ ಮೊಹಮ್ಮದ್ ತೌಕೀರ್ ಮತ್ತು ಶೇಖ್ ಜಾಕೀರ್ ಹುಸೇನ್ ಆಲಿಯಾಸ್ ಬಾಷಾ ಎಂಬುದನ್ನು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಪತ್ತೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಹಿಂದಿನ ₹1,464 ಕೋಟಿಯ ಹೊರತಾಗಿ ಈ ಇಬ್ಬರು ಇನ್ನೂ ₹410 ಕೋಟಿ ಮೊತ್ತದ ವಂಚನೆ ನಡೆಸಿದ್ದಾರೆ. ಈ ಮೂಲಕ ₹102.50 ಕೋಟಿ ಮೊತ್ತದ ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಪಡೆದುಕೊಂಡಿದ್ದಾರೆ. ರೇವತಿ, ಪ್ರತಾಪ್, ಇರ್ಬಾಜ್ ಮತ್ತು ನಫೀಜ್ ಅವರನ್ನು ಇದೇ ಜನವರಿಯಲ್ಲಿ ಬಂಧಿಸಲಾಗಿತ್ತು. ಅದರ ಬೆನ್ನಲ್ಲೇ ತೌಕೀರ್ ಮತ್ತು ಜಾಕೀರ್ ನಗರದ 69ನೇ ನಗರ ಸಿವಿಲ್ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು ಎಂದು ಮಾಹಿತಿ ನೀಡಿವೆ.

ಈಚೆಗೆ ನ್ಯಾಯಾಲಯವು ಈ ಇಬ್ಬರ ಜಾಮೀನು ಅರ್ಜಿಗಳನ್ನು ವಜಾ ಮಾಡಿತ್ತು. ಅದರ ಬೆನ್ನಲ್ಲೇ ಜಾಕೀರ್ ವಿದೇಶಕ್ಕೆ ಪರಾರಿಯಾಗಿದ್ದು, ವಿಶೇಷ ಕಾರ್ಯಾಚರಣೆ ನಡೆಸಿ ತೌಕೀರ್ ಅವರನ್ನು ಬಂಧಿಸಲಾಗಿದೆ. ಆರೋಪಿಯನ್ನು ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು. ನ್ಯಾಯಾಲಯವು ತೌಕೀರ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯು ತಿಳಿಸಿದೆ.

ವಂಚನೆಗೆ ವ್ಯವಸ್ಥಿತ ಜಾಲ

- ಆರೋಪಿಗಳು ಖೊಟ್ಟಿ ವಿಳಾಸ ನೀಡಿ ಬಾಡಿಗೆ ಮತ್ತು ಭೋಗ್ಯ ಕರಾರು ಪತ್ರ ಪಡೆದುಕೊಳ್ಳುತ್ತಿದ್ದರು. ಈ ಪತ್ರಗಳನ್ನು ನೋಂದಣಿ ಮಾಡಿಸುತ್ತಿದ್ದರು. ಆ ವಿಳಾಸದಲ್ಲಿ ಇನ್ಯಾರದೋ ಪ್ಯಾನ್ ಮತ್ತು ಆಧಾರ್ ವಿವರ ಬಳಸಿಕೊಂಡು ಏಕವ್ಯಕ್ತಿ ಮಾಲೀಕತ್ವ ಅಥವಾ ಸೀಮಿತ ಹೊಣೆಗಾರಿಕೆಯ ಪಾಲುದಾರಿಕೆ ಕಂಪನಿಗಳನ್ನು ಆರಂಭಿಸುತ್ತಿದ್ದರು
- ಬಾಡಿಗೆ ಕರಾರು ಪತ್ರ, ಕಂಪನಿ ನೋಂದಣಿ ಪತ್ರ ನೀಡಿ ಜಿಎಸ್‌ಟಿ ನೋಂದಣಿ ಮಾಡಿಸುತ್ತಿದ್ದರು. ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಲು ಈ ಜಿಎಸ್‌ಟಿ ನಂಬರ್‌ಗಳನ್ನೇ ಬಳಸಿಕೊಳ್ಳುತ್ತಿದ್ದರು
- ಆರೋಪಿಗಳು ಬೇರೆ–ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಹತ್ತಾರು ಬ್ಯಾಂಕ್ ಖಾತೆಗಳನ್ನು ತೆರೆಯುತ್ತಿದ್ದರು. ಅವುಗಳಲ್ಲೇ ಕೆಲವನ್ನು ಸೇವಾದಾತ ಕಂಪನಿಗೆ, ಕೆಲವನ್ನು ಮಧ್ಯಸ್ಥಿಕೆ ಕಂಪನಿಗೆ ಮತ್ತು ಇನ್ನೂ ಕೆಲವನ್ನು ಅಂತಿಮ ಖರೀದಿದಾರ ವ್ಯಕ್ತಿ/ಕಂಪನಿ ಎಂದು ತೋರಿಸುತ್ತಿದ್ದರು
- ಸಿಮೆಂಟ್, ಕಬ್ಬಿಣದ ಸರಳು, ಝಿಂಕ್ ಶೀಟ್ ಮತ್ತು ಕೊಳವೆ–ಕೊಳಾಯಿಯಂತಹ ಸಾಮಗ್ರಿಗಳ ಖರೀದಿ ಹೆಸರಿನಲ್ಲಿ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸುತ್ತಿದ್ದರು. ಈ ಇನ್‌ವಾಯ್ಸ್‌ಗಳನ್ನು ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ವರ್ಗಾಯಿಸುತ್ತಿದ್ದರು. ಆ ಇನ್‌ವಾಯ್ಸ್‌ಗಳ ಆಧಾರದಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಳ್ಳುತ್ತಿದ್ದರು
- ನಕಲಿ ಇನ್‌ವಾಯ್ಸ್ ಮತ್ತು ಅಕ್ರಮ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಬಗ್ಗೆ ಅಧಿಕಾರಿಗಳಿಗೆ ಅನುಮಾನ ಬಂದು ನೋಟಿಸ್ ನೀಡುತ್ತಿದ್ದಂತೆಯೇ, ಆ ಕಂಪನಿಗಳ ನೋಂದಣಿಯನ್ನು ಆರೋಪಿಗಳು ರದ್ದುಪಡಿಸುತ್ತಿದ್ದರು. ನಂತರ ಹೊಸ ಕಂಪನಿ ಆರಂಭಿಸುತ್ತಿದ್ದರು

ಸುದ್ದಿ 2 ನಿಮಿಷ

ಖರ್ಗೆಗೆ ಕಪ್ಪು–ಬಿಳುಪಿನ ವ್ಯತ್ಯಾಸ ಗೊತ್ತಿಲ್ಲ: ಉಪರಾಷ್ಟ್ರಪತಿ

ಭಾಲ್ಕಿ (ಬೀದರ್ ಜಿಲ್ಲೆ): ‘ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಕೆಲವೊಮ್ಮೆ ಕಪ್ಪು ಮತ್ತು ಬಿಳಿ ನಡುವಿನ ವ್ಯತ್ಯಾಸ ಗುರುತಿಸುತ್ತಿಲ್ಲ. ಭಯೋತ್ಪಾದಕರು ಹಾಗೂ ಭಯೋತ್ಪಾದಕರಿಗೇ ಭಯೋತ್ಪಾದಕರಾಗಿರುವವರ ನಡುವಿನ ವ್ಯತ್ಯಾಸವೂ ಅವರಿಗೆ ಕಾಣುತ್ತಿಲ್ಲ ಎನಿಸುತ್ತಿದೆ’ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಭಾಲ್ಕಿ ಚನ್ನಬಸವಾಶ್ರಮದಲ್ಲಿ ಬುಧವಾರ ಏರ್ಪಡಿಸಿದ್ದ ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮೀಜಿ ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಮಲ್ಲಿಕಾರ್ಜುನ ಖರ್ಗೆ ಹಾಗೂ ನಮ್ಮ ವಿಚಾರಧಾರೆಗಳ ನಡುವೆ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆ. ಹೀಗಿದ್ದರೂ, ನಾವಿಬ್ಬರೂ ಒಳ್ಳೆಯ ಸ್ನೇಹಿತರು’ ಎಂದೂ ಅವರು ಹೇಳಿದರು.

ಖರ್ಗೆ ಅವರು ಮಂಗಳವಾರ ಚೆನ್ನೈನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಭಯೋತ್ಪಾದಕ’ ಎಂದು ಟೀಕಿಸಿದ್ದರು. ಬಳಿಕ ಸ್ಪಷ್ಟೀಕರಣ ನೀಡಿದ್ದ ಖರ್ಗೆ ಅವರು, ‘ನಾನು ಅಕ್ಷರಶಃ ಭಯೋತ್ಪಾದಕ ಎಂದು ಹೇಳಿಲ್ಲ. ಜನರನ್ನು ಭಯಪಡಿಸುತ್ತಿದ್ದಾರೆ ಎಂದಿದ್ದೇನೆ’ ಎಂದು ಸಮಜಾಯಿಷಿ ನೀಡಿದ್ದರು.

ಖರ್ಗೆ ಅವರ ಹೇಳಿಕೆಗೆ ಬುಧವಾರ ಇಲ್ಲಿ ಪ್ರತಿಕ್ರಿಯಿಸಿದ ಉಪರಾಷ್ಟ್ರಪತಿ ಅವರು, ‘ಪ್ರಧಾನಿ ಭಯೋತ್ಪಾದಕರಿಗೇ ಭಯೋತ್ಪಾದಕರಾಗಿದ್ದಾರೆ’ ಎಂಬುದನ್ನು ಪರೋಕ್ಷವಾಗಿ ಹೇಳಿದ್ದಾರೆ.

ಕೋಮುಲ್ ಅಕ್ರಮ: ತನಿಖೆ ಶುರು

ಕೋಲಾರ: ಕೋಲಾರ ಜಿಲ್ಲಾ ಹಾಲು ಒಕ್ಕೂಟದಲ್ಲಿ (ಕೋಮುಲ್) ನಡೆದಿದೆ ಎನ್ನಲಾದ ₹512.46 ಕೋಟಿ ಅವ್ಯವಹಾರ ದೂರಿನ ಕುರಿತು ಲೋಕಾಯುಕ್ತ ಅಧಿಕಾರಿಗಳು ಬುಧವಾರ ತನಿಖೆ ಆರಂಭಿಸಿದ್ದಾರೆ.

ಲೋಕಾಯುಕ್ತ ತಾಂತ್ರಿಕ ಮತ್ತು ಲೆಕ್ಕ ಶಾಖೆ ತನಿಖಾಧಿಕಾರಿ ಎಸ್.ಬಿ.ಲೋಕೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶುಭಾ ಇಂಧೂದರ ಹಾಗೂ ಸಿಬ್ಬಂದಿ ಸ್ಥಳ ಮತ್ತು ಕಡತ ಪರಿಶೀಲಿಸಿದರು.

ಮೊದಲ ದಿನ ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ದೂರುದಾರರ ಸಮ್ಮುಖದಲ್ಲಿ ಪರಿಶೀಲನೆ ನಡೆಯಿತು. ಈ ಪ್ರಕ್ರಿಯೆ ಮೂರು ದಿನ ಅಂದರೆ ಏ.24ವರೆಗೆ ಮುಂದುವರಿಯಲಿದೆ.

ಒಕ್ಕೂಟ ನಿರ್ಮಿಸುತ್ತಿರುವ ಎಂವಿಕೆ ಗೋಲ್ಡನ್ ಡೇರಿ, ಸೌರ ಘಟಕ, ಅವಿಭಜಿತ ಒಕ್ಕೂಟವಿದ್ದಾಗ (ಕೋಚಿಮುಲ್) ಚಿಂತಾಮಣಿಯಲ್ಲಿ ನಿರ್ಮಿಸಿರುವ ಐಸ್ ಕ್ರೀಂ ಘಟಕ ಹಾಗೂ ಚಿಕ್ಕಬಳ್ಳಾಪುರ ನಂದಿ ಕ್ರಾಸ್ ಬಳಿ 5 ಲಕ್ಷ ಲೀಟರ್ ಸಾಮರ್ಥ್ಯದ ಮೆಗಾ ಡೇರಿ ಯೋಜನೆಗಳ (ಅಂದಾಜು ಮೊತ್ತ ₹512.46 ಕೋಟಿ) ಅನುಷ್ಠಾನದಲ್ಲಿ ಅವ್ಯವಹಾರ ನಡೆಸಲಾಗಿದೆ ಎಂದು ಲೋಕಾಯುಕ್ತದಲ್ಲಿ ದೂರು ದಾಖಲಾಗಿತ್ತು.

ನಿವೇಶನ: ಅಂಗವಿಕಲರಿಗೆ ಶೇ 5 ಮೀಸಲು ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಾಭಿವೃದ್ಧಿ ಪ್ರಾಧಿಕಾರಗಳು ಹಂಚಿಕೆ ಮಾಡುವ ನಿವೇಶನಗಳಲ್ಲಿ ಅಂಗವಿಕಲರಿಗೆ ಶೇ 5ರಷ್ಟು ಕೋಟಾ ನಿಗದಿ ಮಾಡಲು ಹಾಗೂ ಹಂಚಿಕೆಯಾದ ನಿವೇಶನದ ಮೌಲ್ಯದಲ್ಲಿ ಶೇ 25ರಷ್ಟು ರಿಯಾಯಿತಿ ನೀಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

‘ಕರ್ನಾಟಕ ರಾಜ್ಯ ವಿಕಲಚೇತನರ ಸಂಘಟನೆ’ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ಅಂಗವಿಕಲರ ಹಕ್ಕುಗಳ ಕಾಯ್ದೆ–2016ರ ಸೆಕ್ಷನ್-37ನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ಸರ್ಕಾರಕ್ಕೆ ಆದೇಶಿಸಿತ್ತು. ಈ ಕಾಯಿದೆಯು ಅಂಗವಿಕಲರಿಗೆ ವಸತಿ ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಆದ್ಯತೆ ನೀಡುವುದನ್ನು ಕಡ್ಡಾಯಗೊಳಿಸುತ್ತದೆ. ಹೈಕೋರ್ಟ್ ಸೂಚನೆಯಂತೆ ನಗರಾಭಿವೃದ್ಧಿ ಇಲಾಖೆಯು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮ–1991'ಕ್ಕೆ ತಿದ್ದುಪಡಿ ತಂದು ಹೊಸ ಅಧಿಸೂಚನೆಯನ್ನು ಹೊರಡಿಸಿದೆ.

ಅಂಗವಿಕಲರ ಕೋಟಾದಲ್ಲಿ ನಿವೇಶನ ಹಂಚಿಕೆ ಮಾಡುವಾಗ ಅಂಗವಿಕಲ ಮಹಿಳೆಯರಿಗೂ ಸೂಕ್ತ ಆದ್ಯತೆ ನೀಡಬೇಕು ಎಂದು ಹೇಳಿದೆ. ಈ ಅಧಿಸೂಚನೆಯು ವಸತಿಗಷ್ಟೇ ಸೀಮಿತವಾಗದೆ, ಸ್ವಯಂ ಉದ್ಯೋಗ, ವ್ಯಾಪಾರ ಅಥವಾ ಉತ್ಪಾದನಾ ಕೇಂದ್ರಗಳ ಸ್ಥಾಪನೆ, ರಿಯಾಯಿತಿ ದರದಲ್ಲಿ ಭೂಮಿ ಪಡೆಯಲೂ ಸಹಕಾರಿಯಾಗಲಿದೆ.

ಕಟೀಲು ‘ತೂಟೆದಾರ ಸೇವೆ’

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದಲ್ಲಿ ಬುಧವಾರ ನಸುಕಿನಲ್ಲಿ ನಡೆದ ‘ತೂಟೆದಾರ ಸೇವೆ’ಯಲ್ಲಿ ನಿರತ ಅತ್ತೂರು ಹಾಗೂ ಕೊಡತ್ತೂರು ಮಾಗಣೆಯ ಭಕ್ತರು

ಉನ್ನತ– ವೈದ್ಯಕೀಯ ಶಿಕ್ಷಣ ಸಚಿವರ ನೇತೃತ್ವದಲ್ಲಿ ವಿದ್ಯಾರ್ಥಿ ಘಟಕಗಳ ಸಭೆ

ವಿದ್ಯಾರ್ಥಿ ಚುನಾವಣೆ: ಸಿ.ಎಂಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸಲು ನಿಯಮಗಳು ಮತ್ತು ಮಾರ್ಗಸೂಚಿಯನ್ನು ಲಿಂಗ್ಡೋ ಸಮಿತಿಯ ಶಿಫಾರಸಿನ ಆಧಾರದಲ್ಲಿ ರೂಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿಫಾರಸು ಮಾಡಲಾಗುವುದು’ ಎಂದು ವಿವಿಧ ರಾಜಕೀಯ ಪಕ್ಷಗಳ ವಿದ್ಯಾರ್ಥಿ ಘಟಕಗಳಿಗೆ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ ಭರವಸೆ ನೀಡಿದರು.

ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆ ಆರಂಭಿಸುವ ಕುರಿತು 2026-27ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಘೋಷಿಸಿದ್ದರು.

ಈ ಕುರಿತಂತೆ ರಾಜ್ಯ ಉನ್ನತ ಶಿಕ್ಷಣ ಮಂಡಳಿಯ ಸಭಾಂಗಣದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮತ್ತು ಎಡ ಪಕ್ಷಗಳ ವಿದ್ಯಾರ್ಥಿ ಘಟಕಗಳ ಪ್ರತಿನಿಧಿಗಳ ಜೊತೆ ಉಭಯ ಸಚಿವರು ಬುಧವಾರ ಚರ್ಚೆ ನಡೆಸಿದರು.

ತಮ್ಮ ಮಾತ್ರ ಪಕ್ಷಗಳ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಬೇಕೆಂದು ವಿದ್ಯಾರ್ಥಿ ಘಟಕಗಳ ಪ್ರತಿನಿಧಿಗಳು ಒತ್ತಾಯಿಸಿದರು.

ಎಡಪಂಥೀಯ ಸಂಘಟನೆಗಳನ್ನು ಪ್ರತಿನಿಧಿಸುವ ವಿದ್ಯಾರ್ಥಿ ನಾಯಕರಾದ ಲೇಖಾ ಅಡವಿ, ವೀಣಾ ನಾಯಕ್, ಶಿವಪ್ಪ ಮತ್ತು ದೊಡ್ಡ ಬಸವರಾಜ್, ‘ಎಸ್‌ಎಫ್‌ಐ, ಎಐಎಸ್‌ಎಫ್, ಎಐಡಿಎಸ್‌ಒ ಮತ್ತು ಎಐಎಸ್‌ಒಗಳಿಂದ ಚುನಾಯಿತ ಸಂಸ್ಥೆಗಳಲ್ಲಿ ರಚನಾತ್ಮಕ ಪ್ರಾತಿನಿಧ್ಯ ಕಲ್ಪಿಸಬೇಕು. ಮಹಿಳಾ ಅಭ್ಯರ್ಥಿಗಳಿಗೆ ಸ್ಥಾನಗಳನ್ನು ಮೀಸಲಿಡಬೇಕು’ ಎಂದು ಒತ್ತಾಯಿಸಿದರು.

ಜೆಡಿಎಸ್ ವಿದ್ಯಾರ್ಥಿ ಘಟಕದ ಆದಿತ್ಯ ಎನ್. ರಾಜ್, ‘ಕನ್ನಡ ಮಾತನಾಡುವ ವಿದ್ಯಾರ್ಥಿಗಳಿಗೆ ಶೇ 70ರಷ್ಟು ಸೀಟುಗಳನ್ನು ಮೀಸಲಿಡಬೇಕು’ ಎಂದು ಆಗ್ರಹಿಸಿದರೆ, ಎಬಿವಿಪಿಯ ಪ್ರತಿನಿಧಿಗಳು, ‘ಅಭ್ಯರ್ಥಿಗಳಿಗೆ. ಕನಿಷ್ಠ ಹಾಜರಾತಿ ಮಿತಿ ಶೇ 60 ಮತ್ತು ಎಫ್‌ಐಆರ್ ಅಥವಾ ಶೈಕ್ಷಣಿಕ ಬಾಕಿ ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು’ ಎಂದು ಒತ್ತಾಯಿಸಿದರು.

ಎನ್‌ಎಸ್‌ಯುಐನ ಕೀರ್ತಿ ಗಣೇಶ್ ಮತ್ತು ವಿದ್ಯಾರ್ಥಿ ಜನತಾದಳ ಘಟಕದ ಪ್ರತಿನಿಧಿಗಳು, ‘ಹಾಜರಾತಿ ಅಥವಾ ಎಫ್‌ಐಆರ್ ಆಧಾರದಲ್ಲಿ ವಿದ್ಯಾರ್ಥಿಯನ್ನು ಚುನಾವಣೆಯಿಂದ ನಿರ್ಬಂಧಿಸುವುದು ನ್ಯಾಯಯುತವಲ್ಲ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯೊಬ್ಬರು, ‘ಚುನಾಯಿತ ವಿದ್ಯಾರ್ಥಿ ಸಂಘಗಳ ಪಾತ್ರ, ಅಧಿಕಾರಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕು. ವಿದ್ಯಾರ್ಥಿಗಳಿಗೆ ಆಯಾ ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸುವ ಹಕ್ಕು ನೀಡಬೇಕು’ ಎಂದು ಆಗ್ರಹಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಸಂಸ್ಥೆಗಳ ಅಧ್ಯಾಪಕ ಸಂಸ್ಥೆಗಳು, ಕಾಲೇಜು ಆಡಳಿತ ಮಂಡಳಿಗಳು ಮತ್ತು ಶಿಕ್ಷಕರ ಸಂಘಗಳ ಪ್ರತಿನಿಧಿಗಳು, ವಿದ್ಯಾರ್ಥಿ ಚುನಾವಣೆಗಳು ನ್ಯಾಯಯುತವಾಗಿ ನಡೆಸಬೇಕು ಎಂದರು.

ಲಿಂಗ್ಡೋ ಸಮಿತಿ ವರದಿ ಪರಿಗಣನೆ

ಸುಪ್ರೀಂ ಕೋರ್ಟ್ ಆದೇಶದ ಅನ್ವಯ, ದೇಶದಾದ್ಯಂತ ಇರುವ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಗಳಿಗೆ ಮಾರ್ಗಸೂಚಿ ರಚನೆಗೆ ಶಿಫಾರಸು ಮಾಡಲು ಮಾಜಿ ಮುಖ್ಯ ಚುನಾವಣಾ ಆಯುಕ್ತ ಜೆ.ಎಂ. ಲಿಂಗ್ಡೋ ನೇತೃತ್ವದಲ್ಲಿ 2005ರ ಡಿ. 2ರಂದು ಸಮಿತಿ ರಚಿಸಲಾಗಿತ್ತು. ಈ ಸಮಿತಿಯು 2006ರ ಮೇ 26ರಂದು ವರದಿಯನ್ನು ಸಲ್ಲಿಸಿತ್ತು. ಆ ಶಿಫಾರಸುಗಳನ್ನು ಜಾರಿಗೆ ತರುವಂತೆ ಸುಪ್ರೀಂ ಕೋರ್ಟ್ 2006ರ ಸೆ. 22ರಂದು ನಿರ್ದೇಶ ನೀಡಿತ್ತು. ಲಿಂಗ್ಡೋ ವರದಿಯಲ್ಲಿರುವ ಶಿಫಾರಸುಗಳನ್ನು ಅನುಸರಿಸಿ ವಿದ್ಯಾರ್ಥಿ ಸಂಘ ಚುನಾವಣೆ ನಡೆಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಉಭಯ ಸಚಿವರು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಇಂದು

ಒಂದನೇ ಪುಟದಿಂದ...

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ 2026ರ ಪರೀಕ್ಷೆಯಿಂದಲೇ ಅನ್ವಯವಾಗುವಂತೆ ಮೂರನೇ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿ ಕೈಬಿಟ್ಟು, ಗ್ರೇಡ್ ನಮೂದಿಸಲು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿತ್ತು. ಹಿಂದಿನ ವರ್ಷಗಳಂತೆ 100 ಅಂಕಗಳಿಗೆ ಪ್ರಶ್ನೆ ಪತ್ರಿಕೆ ಇದ್ದರೂ ಮೌಲ್ಯಮಾಪನದ ನಂತರ ಗ್ರೇಡ್ ಎ, ಬಿ, ಸಿ ಎಂದು ನಮೂದಿಸಲು ಹಾಗೂ ತೃತೀಯ ಭಾಷೆ ಹೊರತುಪಡಿಸಿ ಉಳಿದ ವಿಷಯಗಳ ಗರಿಷ್ಠ 525 ಅಂಕಗಳನ್ನಷ್ಟೇ ಪರಿಗಣಿಸಿ, ಪ್ರತಿ ವಿದ್ಯಾರ್ಥಿಯ ಶೇಕಡವಾರು ಅಂಕಗಳನ್ನು ಲೆಕ್ಕ ಹಾಕಿ ಫಲಿತಾಂಶ ಪ್ರಕಟಿಸಲು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ತೃತೀಯ ಭಾಷೆಗಳಿಗೆ ಅಂಕಗಳನ್ನು ನೀಡುವಂತೆ ಸೂಚಿಸಿತ್ತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 18ರಿಂದ ಏಪ್ರಿಲ್ 2ರವರೆಗೆ 2,871 ಪರೀಕ್ಷಾ ಕೇಂದ್ರಗಳಲ್ಲಿ ನಡೆದಿತ್ತು. 9,02,889 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು.

ಮುಂದಿನ ಪರೀಕ್ಷೆಗೆ ‘ಗ್ರೇಡ್’

ಒಂದನೇ ಪುಟದಿಂದ...

‘ತೃತೀಯ ಭಾಷೆಗಳಿಗೆ ಗ್ರೇಡ್ ಎ, ಬಿ, ಸಿ ಎಂದು ನಮೂದಿಸಲು, ಉಳಿದ ವಿಷಯಗಳ ಗರಿಷ್ಠ 525 ಅಂಕಗಳನ್ನಷ್ಟೇ ಪರಿಗಣಿಸಿ, ಪ್ರತಿ ವಿದ್ಯಾರ್ಥಿಯ ಶೇಕಡವಾರು ಅಂಕಗಳನ್ನು ಲೆಕ್ಕ ಹಾಕಲು ಈಗಾಗಲೇ ಕರಡು ಅಧಿಸೂಚನೆ ಹೊರಡಿಸಲಾಗಿದೆ’ ಎಂದು ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಫಲಿತಾಂಶ ವೀಕ್ಷಣೆ ಆನ್‌ಲೈನ್ ವ್ಯವಸ್ಥೆ

ಫಲಿತಾಂಶವನ್ನು https://karresults.nic.in ಜಾಲತಾಣ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕ ಪಡೆಯುಬಹುದು.

ವಿದ್ಯಾರ್ಥಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸ್ ಆ್ಯಪ್, ಎಸ್‌ಎಂಎಸ್ ಮೂಲಕವೂ ಫಲಿತಾಂಶವನ್ನು ರವಾನಿಸಲಾಗುವುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ಪ್ರಕಾಶ್ ನಿಟ್ಟಾಲಿ ಮಾಹಿತಿ ನೀಡಿದ್ದಾರೆ.

ಡಿಜಿಟಲ್ ಅಂಕಪಟ್ಟಿ

ದ್ವಿತೀಯ ಪಿಯು ಅಂಕಪಟ್ಟಿಯಂತೆಯೇ ಎಸ್‌ಎಸ್‌ಎಲ್‌ಸಿಗೂ ಡಿಜಿಟಲ್ ಅಂಕಪಟ್ಟಿ ಸಿಗಲಿದೆ. ಫಲಿತಾಂಶದ ಸಮಯದಲ್ಲೇ ವಿದ್ಯಾರ್ಥಿಗಳು ಡಿಜಿಟಲ್ ಅಂಕಪಟ್ಟಿಗಳನ್ನು ಡಿಜಿಲಾಕರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ‘ಈ ಬಾರಿ ಡಿಜಿಟಲ್ ಜತೆಗೆ ಭೌತಿಕ ಅಂಕಪಟ್ಟಿಯನ್ನೂ ನೀಡಲಾಗುತ್ತದೆ. 2026–27ನೇ ಶೈಕ್ಷಣಿಕ ಸಾಲಿನಿಂದ ದ್ವಿತೀಯ ಪಿಯು ಹಾಗೂ ಎಸ್‌ಎಸ್‌ಎಲ್‌ಸಿಗೆ ಡಿಜಿಟಲ್ ಅಂಕಪಟ್ಟಿಯಷ್ಟೇ ಇರಲಿದೆ’ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

ಸಿಡಿಲು ಬಡಿದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು/ಬಳ್ಳಾರಿ: ರಾಜ್ಯದ ದಕ್ಷಿಣ ಕನ್ನಡ, ರಾಯಚೂರು, ಬಳ್ಳಾರಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಪ್ರತ್ಯೇಕ ಪ್ರಕರಣಗಳಲ್ಲಿ ಸಿಡಿಲು ಬಡಿದು ಇಬ್ಬರು ಮಹಿಳೆಯರು ಸತ್ತಿದ್ದಾರೆ.

ರಾಯಚೂರು: ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಗುಡುಗು ಸಹಿತ ಮಳೆಯಾಗಿದೆ. ಹಟ್ಟಿ ಬಳಿಯ ಬಸವನ ಬಗಡಿಯ ದೊಡ್ಡಿಯಲ್ಲಿ ಸಿಡಿಲು ಬಡಿದು ರೈತ ಮಹಿಳೆ ದುರುಗಮ್ಮ ಸಾಬಯ್ಯ (40) ಮೃತಪಟ್ಟಿದ್ದಾರೆ.

ಜಮೀನಿನಲ್ಲಿ ಮೇವಿನ ಬಣವಿಗೆ ದುರುಗಮ್ಮ ಅವರು ತಾಡಪಲ್ ಹೊದಿಸಲು ಹೋಗಿದ್ದಾಗ ಅವಘಡ ಸಂಭವಿಸಿದ್ದು, ಹತ್ತಿ ಮತ್ತು ಹುಲ್ಲಿನ ಬಣವೆ ಬೆಂಕಿಗೆ ಆಹುತಿಯಾಗಿದೆ.

ಸಂಡೂರು (ಬಳ್ಳಾರಿ) ವರದಿ: ತಾಲ್ಲೂಕಿನ ಹಳೆ ಜೋಗಿಕಲ್ಲುವಿನಲ್ಲಿ ಬುಧವಾರ ಸಿಡಿಲು ಬಡಿದು ಅಕ್ಷತಾ (18) ಮೃತಪಟ್ಟಿದ್ದಾರೆ.

ಭಾರಿ ಮಳೆಯಿಂದ ದೌಲತ್‌ಪುರದಲ್ಲಿ ಎಕರೆ ಬಾಳೆ ಬೆಳೆ ನೆಲಕಚ್ಚಿದೆ. ತೆಕ್ಕಲಕೋಟೆ ಪಟ್ಟಣ, ಹೋಬಳಿ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದ್ದು, ಕರೂರು ಗ್ರಾಮದಲ್ಲಿ ದೊಡ್ಡಹಳ್ಳದಲ್ಲಿ ನೀರು ಹರಿದಿದೆ.

ದಕ್ಷಿಣ ಕನ್ನಡದಲ್ಲಿ ಆರ್ಭಟ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಬುಧವಾರ ನಸುಕಿನಲ್ಲಿ ಗುಡುಗು ಮಿಂಚು ಸಹಿತ ಧಾರಾಕಾರ ಮಳೆಯಾಗಿದೆ.

ಅತ್ತಾವರ ಅಯ್ಯಪ್ಪಸ್ವಾಮಿ ದೇಗುಲದ ಬಳಿ ಗೋಡೆ ಕುಸಿದು, ಆರು ಕಾರು ಜಖಂಗೊಂಡಿವೆ. ಚಮ್ಮಾರಗಲ್ಲಿ ಬಳಿ ಮರದ ಕೊಂಬೆ ಬಿದ್ದು, 2 ಮನೆಗಳು ಭಾಗಶಃ, ಹಾಗೂ 2 ದ್ವಿಚಕ್ರ ವಾಹನಗಳು ಹಾನಿಗೊಳಗಾಗಿವೆ.

ಉಳ್ಳಾಲ ತಾಲ್ಲೂಕಿನಲ್ಲಿ ಎರಡು ಮನೆಗಳು ಜಖಂಗೊಂಡಿವೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

‘ರಾಜ್ಯದ ಕೆಲವೆಡೆ ಒಂದು ವಾರ ಮಳೆ’

ಬೆಂಗಳೂರು: ರಾಜ್ಯದ ಕೆಲವೆಡೆ ಗುರುವಾರದಿಂದ ಮುಂದಿನ ಒಂದು ವಾರ ಭಾರಿ ಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಬಾಗಲಕೋಟೆ, ವಿಜಯಪುರ, ಕಲಬುರಗಿ ಮತ್ತು ಗದಗ ಜಿಲ್ಲೆಯಲ್ಲಿ ಒಂದೆರಡು ಕಡೆ ಗುರುವಾರ ಭಾರಿ ಗಾಳಿಯೊಂದಿಗೆ ಮಳೆಯಾಗುವ ಸಂಭವವಿದೆ. ಬೀದರ್, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಒಂದು ಅಥವಾ ಎರಡು ಕಡೆ ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ, ಮಧ್ಯಮ ಪ್ರಮಾಣದಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ, ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ದಾವಣಗೆರೆ, ಮೈಸೂರು ಮತ್ತು ಚಾಮರಾಜನಗರದ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ. ಗುರುವಾರದಿಂದ ಐದು ದಿನಗಳು ತಾಪಮಾನದಲ್ಲಿ ದೊಡ್ಡ ವ್ಯತ್ಯಾಸವಿಲ್ಲ ಎಂದು ಇಲಾಖೆ ತಿಳಿಸಿದೆ.

ಚನ್ನಕೇಶವನ ಪಾದ ಸ್ಪರ್ಶಿಸಿದ ಸೂರ್ಯರಶ್ಮಿ

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಚನ್ನಕೇಶವ ದೇಗುಲದಲ್ಲಿ ಬುಧವಾರ ಸೂರ್ಯರಶ್ಮಿ ಚನ್ನಕೇಶವ ಮೂರ್ತಿಯ ಮೇಲೆ ಗೋಚರಿಸಿತು.

ಬೆಳಿಗ್ಗೆ 6.15ರಿಂದ 6.20ರವರೆಗೆ ಸೂರ್ಯನ ಕಿರಣಗಳು ಮಹಾದ್ವಾರದ ಮೂಲಕ ನೇರವಾಗಿ ಗರ್ಭಗುಡಿ ಪ್ರವೇಶಿಸಿ, ಮೂಲವಿಗ್ರಹವನ್ನು ಸ್ಪರ್ಶಿಸಿದವು. 6.42ಕ್ಕೆ ಕಿರಣಗಳು ನವರಂಗ ದ್ವಾರ ದಾಟಿ ಸಾಗಿದವು.

ಕಿರಣಗಳು ಸ್ಪರ್ಶಿಸಿದಾಗ ಮೂರ್ತಿ ಆಭರಣಗಳು ಕೆಂಪು ಬಣ್ಣದಲ್ಲಿ ಕಂಗೊಳಿಸಿದವು. ರಥೋತ್ಸವ ಮತ್ತು ನರಸಿಂಹ ಜಯಂತಿಯ ಕಾರಣಕ್ಕೆ ಉತ್ಸವಮೂರ್ತಿಯನ್ನು ಮೂಲ ವಿಗ್ರಹದ ಮುಂಭಾಗ ಇರಿಸಲಾಗಿತ್ತು. ಇದರಿಂದ ಸೂರ್ಯರಶ್ಮಿ ಉತ್ಸವ ಮೂರ್ತಿಯ ಪಾದಗಳ ಮೇಲೆ ಬಿದ್ದವು.

ಲಂಚ: ಎಂಜಿನಿಯರ್‌ಗೆ 4 ವರ್ಷ ಜೈಲು

ಕಲಬುರಗಿ: ಸಿವಿಲ್ ಕಾಮಗಾರಿಯ ಬಿಲ್‌ನ ಹಣ ಬಿಡುಗಡೆಗೆ ಶೇ4ರಷ್ಟು ಲಂಚ ಪಡೆಯುವಾಗ ಸಿಕ್ಕಿ ಬಿದ್ದಿದ್ದ ಜೇವರ್ಗಿ ಪುರಸಭೆಯ ಆಗಿನ ಕಿರಿಯ ಎಂಜಿನಿಯರ್ ನಾನಾಸಾಬ್ ಅಮೃತಪ್ಪ ಮಡಿವಾಳಗೆ ಇಲ್ಲಿನ ಜಿಲ್ಲಾ ನ್ಯಾಯಾಲಯ 4 ವರ್ಷ ಜೈಲು ಹಾಗೂ ₹20 ಸಾವಿರ ದಂಡ ವಿಧಿಸಿದೆ.

ಜೇವರ್ಗಿ ಪುರಸಭೆ ವ್ಯಾಪ್ತಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮೂರ್ತಿ ಸ್ಥಳಾಂತರ ಹಾಗೂ ನಾಲೆಯ ಮೇಲೆ ವೇದಿಕೆಯ ಕಟ್ಟೆ ನಿರ್ಮಿಸುವ ₹35 ಲಕ್ಷ ಮೊತ್ತದ ಕೆಲಸವನ್ನು 2016–17ರಲ್ಲಿ ಗೋಪಾಲ ಬಿಜಾಸ್ಪೂರ ಅವರು ಗುತ್ತಿಗೆ ಪಡೆದಿದ್ದರು. ಇದಕ್ಕೆ ಸಂಬಂಧಿಸಿ ₹6.70 ಲಕ್ಷದ ಬಿಲ್ ಪಾಸ್‌ಗೆ ಲಂಚ ಪಡೆಯುವಾಗ ನಾನಾಸಾಬ್ ಮಡಿವಾಳ ಸಿಕ್ಕಿ ಬಿದ್ದಿದ್ದರು. ಇನ್‌ಸ್ಪೆಕ್ಟರ್ ರಾಘವೇಂದ್ರ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಶೇಷ ಕೋರ್ಟ್‌ನ ನ್ಯಾಯಾಧೀಶ ಜಿ.ಎಲ್.ಲಕ್ಷ್ಮೀನಾರಾಯಣ ಶಿಕ್ಷೆ ವಿಧಿಸಿದರು.

ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ● ಉಪರಾಷ್ಟ್ರಪತಿ, ಗಣ್ಯರಿಂದ ಗೌರವ

ಪಟ್ಟದ್ದೇವರ ಸೇವೆ ಶ್ಲಾಘನೆ, ಸನ್ಮಾನ

ಪ್ರಜಾವಾಣಿ ವಾರ್ತೆ

ಭಾಲ್ಕಿ (ಬೀದರ್ ಜಿಲ್ಲೆ): ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷರೂ ಆದ ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮೀಜಿ ಬಸವಲಿಂಗ ಪಟ್ಟದ್ದೇವರ 75ನೇ ಜನ್ಮದಿನ ನಿಮಿತ್ತ ಇಲ್ಲಿನ ಚನ್ನಬಸವಾಶ್ರಮದಲ್ಲಿ ಬುಧವಾರ ಅಮೃತ ಮಹೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಉಪರಾಷ್ಟ್ರಪತಿ ಸಿ .ಪಿ.ರಾಧಾ ಕೃಷ್ಣನ್, ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಗದಗ–ಡಂಬಳ ಜಗದ್ಗುರು ತೋಂಟದಾರ್ಯ ಮಠದ ತೋಂಟದ ಸಿದ್ದರಾಮ ಸ್ವಾಮೀಜಿ ಅವರು ಬಸವಲಿಂಗ ಪಟ್ಟದ್ದೇವರನ್ನು ಸನ್ಮಾನಿಸಿ, ಗೌರವಿಸಿದರು.

ಬಳಿಕ ಮಾತನಾಡಿದ ಸಿ.ಪಿ. ರಾಧಾಕೃಷ್ಣನ್, ‘ಇದು ಬಸವಣ್ಣನವರ ಪವಿತ್ರ ನೆಲ. ಅವರ ಆಶಯಗಳಂತೆ ಭಾಲ್ಕಿ ಮಠ ಕೆಲಸ ನಿರ್ವಹಿಸುತ್ತಿದೆ. ಬಸವಲಿಂಗ ಪಟ್ಟದ್ದೇವರು ಬಸವಣ್ಣನ ತತ್ವಾದರ್ಶಗಳಂತೆ ಕೆಲಸ ಮಾಡುತ್ತಿದ್ದು, ಅನಾಥರಿಗೆ ಅನ್ನ, ಅರಿವು ಕೊಡುತ್ತಿದ್ದಾರೆ. ಅವರನ್ನು ಗೌರವಿಸುವ ಕಾರ್ಯ ಸ್ತುತ್ಯರ್ಹ’ ಎಂದರು.

ಮಲ್ಲಿಕಾರ್ಜುನ ಖರ್ಗೆ ಅವರು, ‘ಬಸವಣ್ಣನವರು ಮನುವಾದ, ಚಾತುರ್ವರ್ಣ ಪದ್ಧತಿ ತಿರಸ್ಕರಿಸಿ, ಹೊಸ ಧರ್ಮ ಸ್ಥಾಪಿಸಿ, ಎಲ್ಲ ಜಾತಿಗಳ ಜನರನ್ನು ಒಂದುಗೂಡಿಸಿದರು. ಹಿಂದುಳಿದ ಸಮಾಜದ ಅಲ್ಲಮಪ್ರಭು ದೇವರನ್ನು ಅನುಭವ ಮಂಟಪದ ಅಧ್ಯಕ್ಷರನ್ನಾಗಿ ಮಾಡಿದ್ದರು. ಅಂಥ ಶ್ರೇಷ್ಠ ತತ್ವಗಳ ಪ್ರಚಾರ, ಪ್ರಸಾರ ಅಗತ್ಯ. ಆ ನಿಟ್ಟಿನಲ್ಲಿ ಬಸವಲಿಂಗ ಪಟ್ಟದ್ದೇವರು ಪ್ರಗತಿಪರ ವಿಚಾರಗಳೊಂದಿಗೆ ಕೆಲಸ ಮಾಡುತ್ತಿದ್ದಾರೆ’ ಎಂದರು.

ಕಾರ್ಯಕ್ರಮದಲ್ಲಿ ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮೀಜಿ ಬಸವಲಿಂಗ ಪಟ್ಟದ್ದೇವರನ್ನು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಗೌರವಿಸಿದರು

> ಬುದ್ಧ, ಮಹಾವೀರರ ಜಯಂತಿಯಂತೆ ವಿಶ್ವಗುರು ಬಸವಣ್ಣನವರ ಜಯಂತಿ ದಿನ ರಜೆ ಘೋಷಿಸಿ, ರಾಷ್ಟ್ರ ಮಟ್ಟದಲ್ಲಿ ಜಯಂತಿ ಆಚರಿಸಬೇಕು
> **ಬಸವಲಿಂಗ ಪಟ್ಟದ್ದೇವರು**, ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮೀಜಿ

ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ, ಪೌರಾಡಳಿತ ಸಚಿವ ರಹೀಂ ಖಾನ್, ಸಂಸದ ಸಾಗರ್ ಖಂಡ್ರೆ, ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹಾಗೂ ಶಶಿಧರ ಕೋಸಂಬೆ ಉಪಸ್ಥಿತರಿದ್ದರು.

ಜನ್ಮದಿನಕ್ಕೆ ನೀಡಿದ ₹75 ಲಕ್ಷ ವಚನ ವಿ.ವಿಗೆ

ಸನ್ಮಾನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ, ಸ್ಮರಣಿಕೆಯೊಂದಿಗೆ ಸ್ವಾಮೀಜಿ ಅವರಿಗೆ ₹75 ಲಕ್ಷ ಮೊತ್ತದ ಚೆಕ್ ನೀಡಲಾಯಿತು. ‘ಬಸವಕಲ್ಯಾಣದಲ್ಲಿ ನಿರ್ಮಿಸಲಿರುವ ವಚನ ವಿ.ವಿಗೆ ಈ ಮೊತ್ತ ನೀಡುವುದಾಗಿ ಸ್ವಾಮೀಜಿ ಅವರು ವೇದಿಕೆಯಲ್ಲೇ ಘೋಷಿಸಿದರು.

‘ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ ಸರ್ಕಾರದ ಒಪ್ಪಿಗೆ ಸಿಕ್ಕಿದೆ. ನನ್ನ ಜನ್ಮದಿನ ನಿಮಿತ್ತ ನೀಡಿರುವ ₹75 ಲಕ್ಷ ಮೊತ್ತದ ಚೆಕ್ ಅನ್ನು ವಚನ ವಿ.ವಿಗೆ ಪ್ರಥಮ ಕಾಣಿಕೆಯಾಗಿ ನೀಡುವೆ’ ಎಂದು ಬಸವಲಿಂಗ ಪಟ್ಟದ್ದೇವರು ಘೋಷಿಸಿದಾಗ ಕರತಾಡನ ಮುಗಿಲುಮುಟ್ಟಿತು.

||jai sri gurudev||

Sri Adichunchanagiri Shikshana Trust (R.)

SJC INSTITUTE OF TECHNOLOGY

(An Autonomus Institute Under VTU Belagavi & Approved by AICTE, New Delhi)

Accredited by NAAC with A+ Grade & NBA (CSE, ISE, ECE, ME & CV) NIRF (151-300) in 2023, Gold Rated by QS-IGauge

Post Box #20, B.B. Road, Chikkaballapur - 562 101, Karnataka

www.sjcit.ac.in

Estd. : 1986

KCET CODE : E-014

COMED-K CODE : E-108

nirf 151-300 NATIONAL INSTITUTIONAL RANKING FRAMEWORK · NBA · A+ NAAC · QS I-GAUGE GOLD · INSTITUTION'S INNOVATION COUNCIL 4-Star Rating

Prospective Institution for Aspiring Students

Admissions Open for 2026–27

Courses Offered

B.E. - 4 Years

01 Computer Science and Engineering
02 Computer Science and Engineering (AI&ML)
03 Artificial Intelligence and Data Science
04 Computer Science and Design
05 Electronics and Communication Engineering
06 Civil Engineering
07 Aeronautitcal Engineering
08 Aerospace Engineering
09 Mechanical Engineering

M.Tech - 2 Years

01 Computer Science & Engineering
02 Digital Communication & Networking
03 Structural Engineering
04 Machine Design

MBA - 2 Years

Master of Business Administration (MBA)

01 Marketing · 02 Finance · 03 Human Resource · 04 Business Analytics · 05 Dual Specialization

VTU Recognised R&D Centers at CSE, ECE, ME, CV, AE, MBA and Basic Science Departments

Motto : Education, Empowerment and Environment

HIGHLIGHTS

Quality Education

40 Years of Excellence, NBA & NAAC Accredited
Relentless Service to Society, Imbibing Cultural & Spiritual Values, Rural Centric

3400+ Students
400+ Staff
23000+ Alumni Network
Disciplined work Culture

64-acres Sprawling Lush Green Wi-Fi Campus
State-of-the-art Infrastructure and Amenities, 1000 Mbps BW with 60+ Access Points, Hostel facility for Boys & Girls

95 % Results, 85% Placements
3531 + Job offers in Last 5 Years
2022 Batch – 846+ Offers
2023 Batch – 744+ Offers
2024 Batch – 540+ Offers
2025 Batch – 753+ Offers
2026 Batch – 648* Ongoing
Blended Learning and Traning Model (Aptitude, Soft-skills and Technical training)

54 Well Equipped and Spacious Labs
6 Seminar halls, Auditorium, 2 play grounds, gym, Indoor stadium, Amphitheatre, BGS Conference Hall, Gallery Room, 24x7 security with CCTV coverage

195 Faculty
Experienced, Well qualified and Passionate faculty.
64 PhDs, 96 Pursuing PhD

Student Friendly Campus

IQAC , Academic Audit and MoUs
Quality Assurance Policies, MoUs with Industries and Govt.

CoEs
AI & ML, DS, IOT, VLSI & IP, Aerospace, Structures, Bosch Rexroth Automation Centre, Artisan Centre
Cisco Enabled Campus

SEED and Student Clubs
Student Excellence and Empowerment Development Centre – Student Centric, Promotes Activity based and Peer-to-peer learning, IEEE & CSI

Scholarships from GO, NGO &endowment...etc.
Exclusive hostels for Boys & Girls

BGS R&D Centre
In Association with BARC, VTU, NAIN and KITS

BGS-SJCIT Incubation Foundation(BGS-SIF)
(Company under section-8 IIC, EDC, IPR Cell, Start-ups

NCC, NSS & Community Service Culture
Community Service, Blood Donation, CSR, Planting Saplings

Transportation
Transportation between cities and their neighboring villages

Cultural & Technical Fests, Clubs & Societies

OUR PROUD PERFORMERS OF 2026 BATCH



OUR PROUD RECRUITERS

and many more...

3531+ Job Offers in Last 5 Years

Highest Package - 28 LPA · Average Package - 5.6 LPA
Highest Stipend - 45 K · Average Stipend - 15 K · Median Package - 6 LPA

Placemen Statistics of Last 5 Years

Batch	2022	2023	2024	2025	2026
Total Job offers	846	744	540	753	648*
Single Job offers	522	477	424	449	465*
Highest Package	14 LPA	28 LPA	9.5 LPA	13 LPA	13.96 LPA
Average Package	5.4 LPA	5.6 LPA	4.5 LPA	4.8 LPA	4.6 LPA
Companies Visited	58	63	60	96	78*

* Ongoing

For Admissions Contact	9880154354 / 9844724904 9880143028 / 9731292555

ನೀವು ಕೆಲಸ ಮಾಡಿ, ಮಾಡದೆ ಇರಿ. ಒಳ್ಳೆಯ ಆಸ್ತಿಗಳು ನಿಮ್ಮ ಕಿಸೆಗೆ ಹಣವನ್ನು ತಂದು ಇರಿಸುವ ಕೆಲಸ ಮಾಡುತ್ತವೆ.
–ರಾಬರ್ಟ್ ಕಿಯೊಸಾಕಿ, ಲೇಖಕ

ದುಡ್ಡಿನಂಥಾ ಮಾತು

ಸಂಪತ್ತು ಸೃಷ್ಟಿ
ಉಳಿತಾಯದ ಹಾದಿ ಹೀಗಿರಲಿ

• ಅಭಿಷೇಕ್ ತಿವಾರಿ

ಹೂಡಿಕೆಗಳಿಗೆ ಪ್ರತಿಯಾಗಿ ಭಾರಿ ಪ್ರಮಾಣದ ಗಳಿಕೆ ಸಿಗಬೇಕು ಎಂದು ಹಲವರು ಬಯಸುತ್ತಾರೆ. ಹೂಡಿಕೆ ಮಾಡಿದ ಹಣವು ಬಹುಬೇಗನೆ ದುಪ್ಪಟ್ಟಾದ, ಯಾರೋ ಒಬ್ಬ ಹೂಡಿಕೆದಾರ ಖರೀದಿಸಿದ ಕಂಪನಿಯೊಂದರ ಷೇರು ಭಾರಿ ಪ್ರಮಾಣದಲ್ಲಿ ಲಾಭ ತಂದುಕೊಟ್ಟ ಅಥವಾ ಕ್ರಿಪ್ಟೊ ಕರೆನ್ಸಿಯಲ್ಲಿನ ಹೂಡಿಕೆಯಿಂದ ದಿಢೀರ್ ಸಂಪತ್ತು ಸೃಷ್ಟಿಯಾದ ಕಥೆಗಳನ್ನು ನಾವು ಆಗಾಗ ಕೇಳುತ್ತೇವೆ.

ಈ ಬಗೆಯ ಕಥೆಗಳು ಕೇಳಲು ಬಹಳ ಚೆನ್ನಾಗಿರುತ್ತವೆ, ಸಂಪತ್ತು ಸೃಷ್ಟಿಸಬೇಕು ಎಂದಾದರೆ ಹೂಡಿಕೆಗೆ ಪ್ರತಿಯಾಗಿ ಸಿಗುವ ಬಡ್ಡಿ ಅಥವಾ ಗಳಿಕೆಯೇ ಮುಖ್ಯ ಎಂಬ ಭಾವನೆಯನ್ನು ಇವು ಮೂಡಿಸುತ್ತವೆ. ಆದರೆ ಆಶ್ಚರ್ಯ ಮೂಡಿಸುವಂತಹ ಸಂಗತಿ ಎಂದರೆ, ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸುವ ಕೆಲಸವು ಹೂಡಿಕೆಗಳಿಗೆ ಸಿಗುವ ಗಳಿಕೆ ಪ್ರಮಾಣ ಎಷ್ಟು ಎಂಬುದಕ್ಕಿಂತ ವ್ಯಕ್ತಿ ಎಷ್ಟು ಹೆಚ್ಚು ಉಳಿತಾಯ ಮಾಡಿದ ಎಂಬುದನ್ನು ಆಧರಿಸಿರುತ್ತದೆ.

ಪ್ರತಿ ತಿಂಗಳೂ ಹೆಚ್ಚು ಹಣ ಉಳಿತಾಯ ಮಾಡುವುದು ಬಹಳ ನೀರಸವಾದ ಕೆಲಸ ಅನ್ನಿಸಬಹುದು, ಆ ಕೆಲಸದಲ್ಲಿ ಆಕರ್ಷಕವಾದುದು ಏನೂ ಇಲ್ಲ ಅನ್ನಿಸಬಹುದು. ಆದರೆ ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸಲು ಇರುವ ಅತ್ಯಂತ ಪರಿಣಾಮಕಾರಿ ಕ್ರಮಗಳಲ್ಲಿ ಇದೂ ಒಂದು. ಹೌದು, ಹೆಚ್ಚು ಉಳಿತಾಯ ಮಾಡಬೇಕು ಎಂದಾದರೆ ಇಂದು ಖರ್ಚು ಕಡಿಮೆ ಮಾಡಬೇಕು.

ಭವಿಷ್ಯದ ವೆಚ್ಚಗಳಿಗಾಗಿ ಒಂದಿಷ್ಟು ಸಿದ್ಧತೆ ನಡೆಸುವುದು ಹಾಗೂ ಇಂದಿನ ಜೀವನವನ್ನು ಅನುಭವಿಸುವುದರ ನಡುವೆ ಯಾವಾಗಲೂ ಒಂದು ಹೊಯ್ದಾಟ ಇದ್ದೇ ಇರುತ್ತದೆ. ಆದರೆ ಇಲ್ಲಿ ವ್ಯಕ್ತಿಯ ಗುರಿ ಇರಬೇಕಾದುದು ಜೀವನವನ್ನು ಖುಷಿಯಿಂದ ಅನುಭವಿಸುವುದನ್ನೇ ನಿಲ್ಲಿಸುವುದರಲ್ಲಿ ಅಲ್ಲ; ಬದಲಿಗೆ, ಖುಷಿಗಳನ್ನು ಕಳೆದುಕೊಳ್ಳದೆಯೇ ಅರ್ಥಪೂರ್ಣವಾದ ಇಡುಗಂಟೊಂದನ್ನು ಸೃಷ್ಟಿಸಿಕೊಳ್ಳುವುದು ಗುರಿಯಾಗಬೇಕು.

ಇದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ರಾಹುಲ್ ಮತ್ತು ಅಂಜಲಿ (ಕಾಲ್ಪನಿಕ ವ್ಯಕ್ತಿಗಳು) ಅವರತ್ತ ಗಮನ ಹರಿಸೋಣ. ಹೆಚ್ಚಿನ ಗಳಿಕೆ ಪಡೆಯುವುದರ ಮೇಲೆ ಗಮನ ಹರಿಸುವ ವ್ಯಕ್ತಿ ರಾಹುಲ್. ಮಾರುಕಟ್ಟೆಯ ಬಗ್ಗೆ ಅಧ್ಯಯನ, ಅಲ್ಲಿ ಸಿಗುವುದಕ್ಕಿಂತ ಹೆಚ್ಚಿನ ಗಳಿಕೆ ಪಡೆಯುವುದರ ಮೇಲೆ ರಾಹುಲ್ ಸಮಯ ವ್ಯಯಿಸುತ್ತಾನೆ. ಆದರೆ ಅಂಜಲಿ ಹಾಗಲ್ಲ. ಆದಷ್ಟು ಸರಳವಾಗಿ ವ್ಯವಹರಿಸುವುದು ಅವಳ ಪ್ರವೃತ್ತಿ. ಆಕೆ ಭಾರಿ ಪ್ರಮಾಣದ ಗಳಿಕೆಯ ಹಿಂದೆ ಬಿದ್ದವಳಲ್ಲ. ಅದರ ಬದಲಿಗೆ ಆಕೆ ಸಾಧ್ಯವಾದಷ್ಟು ಹೆಚ್ಚಿನ ಮೊತ್ತವನ್ನು ಉಳಿತಾಯ ಮಾಡುವುದಕ್ಕೆ ಗಮನ ನೀಡುತ್ತಾಳೆ. ಅಲ್ಲದೆ, ಉಳಿತಾಯ ಮಾಡುವ ಪ್ರವೃತ್ತಿಯನ್ನು ಬಹಳ ಬೇಗ ರೂಢಿಸಿಕೊಂಡ ವ್ಯಕ್ತಿ ಅಂಜಲಿ. ಹತ್ತು ವರ್ಷ ಹಾಗೂ ಇಪ್ಪತ್ತು ವರ್ಷಗಳ ಅವಧಿಯಲ್ಲಿ ರಾಹುಲ್ ಹೆಚ್ಚು ಗಳಿಕೆ ಪಡೆದರೂ ಒಟ್ಟಾರೆಯಾಗಿ ಹೆಚ್ಚಿನ ಮೊತ್ತ ಒಗ್ಗೂಡಿಸಲು ಸಾಧ್ಯವಾಗುವುದು ಅಂಜಲಿಗೆ. ಇದಕ್ಕೆ ಕಾರಣ ಬಹಳ ಸರಳ. ಅಂಜಲಿ ದೊಡ್ಡ ಮೊತ್ತವನ್ನು ಉಳಿತಾಯದಲ್ಲಿ ತೊಡಗಿಸುತ್ತಾಳೆ, ಉಳಿಸಿದ ಮೊತ್ತಕ್ಕೆ ಬಡ್ಡಿ ಹಾಗೂ ಚಕ್ರಬಡ್ಡಿ ಸಿಗುತ್ತವೆ. ರಾಹುಲ್‌ಗೆ ಕೂಡ ಬಡ್ಡಿ ಮತ್ತು ಚಕ್ರಬಡ್ಡಿ ಸಿಗುತ್ತವೆ. ದೀರ್ಘಾವಧಿಯಲ್ಲಿ ಆತ ಕೂಡ ದೊಡ್ಡ ಮೊತ್ತ ಒಗ್ಗೂಡಿಸಬಲ್ಲ. ಹೀಗಿದ್ದರೂ, ಅಂಜಲಿಗೆ ಸಾಧ್ಯವಾದ ಮೊತ್ತವನ್ನು ಒಗ್ಗೂಡಿಸಲು ರಾಹುಲ್‌ಗೆ ಹೆಚ್ಚಿನ ಸಮಯ ಬೇಕಾಗುತ್ತದೆ.

ಹೆಚ್ಚು ಉಳಿತಾಯ ಮಾಡುವುದು ಹಾಗೂ ಹೆಚ್ಚು ಬಡ್ಡಿ ಗಳಿಕೆ ಮಾಡುವುದರ ನಡುವಿನ ಹೋಲಿಕೆಯನ್ನು ಇಲ್ಲಿರುವ ಪಟ್ಟಿಯಲ್ಲಿ ನೀಡಲಾಗಿದೆ.

ತಿಂಗಳ ಉಳಿತಾಯದ ಮೊತ್ತವು ಪ್ರತಿವರ್ಷ ಶೇ 7ರಷ್ಟು ಹೆಚ್ಚಾಗುತ್ತದೆ ಎಂದು ಭಾವಿಸಿ ಇಲ್ಲಿ ಲೆಕ್ಕಾಚಾರ ನೀಡಲಾಗಿದೆ. ಅಂಜಲಿ ಮತ್ತು ರಾಹುಲ್ ಅವರ ವೇತನವು ವಾರ್ಷಿಕ ಶೇ 7ರಷ್ಟು ಹೆಚ್ಚಾಗುತ್ತದೆ, ಹಾಗಾಗಿ ಅವರ ಉಳಿತಾಯದ ಮೊತ್ತ ಕೂಡ ಅಷ್ಟೇ ಪ್ರಮಾಣದಲ್ಲಿ ಜಾಸ್ತಿ ಆಗುತ್ತದೆ ಎಂದು ಭಾವಿಸಲಾಗಿದೆ. ರಾಹುಲ್‌ನ ಉಳಿತಾಯದ ಮೊತ್ತವು ಮೊದಲ ವರ್ಷದಲ್ಲಿ ತಿಂಗಳಿಗೆ ₹10 ಸಾವಿರ ಆಗಿರುತ್ತದೆ. ಎರಡನೆಯ ವರ್ಷದಲ್ಲಿ ಅದು ತಿಂಗಳಿಗೆ ₹10,700 ಆಗುತ್ತದೆ. ಮೂರನೆಯ ವರ್ಷದಲ್ಲಿ ತಿಂಗಳಿಗೆ ₹11,449 ಆಗುತ್ತದೆ ಹಾಗೂ ಪ್ರತಿ ವರ್ಷ ಇದೇ ಬಗೆಯಲ್ಲಿ ಹೆಚ್ಚುತ್ತ ಸಾಗುತ್ತದೆ.

ಅಂಜಲಿಯ ತಿಂಗಳ ಉಳಿತಾಯದ ಮೊತ್ತ ಆರಂಭದ ಒಂದು ವರ್ಷ ₹20 ಸಾವಿರ ಇರುತ್ತದೆ. ಎರಡನೆಯ ವರ್ಷದಲ್ಲಿ ಆಕೆಯ ತಿಂಗಳ ಉಳಿತಾಯದ ಮೊತ್ತವು ₹21,400ಕ್ಕೆ ಹೆಚ್ಚಳ ಆಗುತ್ತದೆ. ಮೂರನೆಯ ವರ್ಷದಲ್ಲಿ ಅದು ₹22,898 ಆಗುತ್ತದೆ. ಮುಂದಿನ ವರ್ಷಗಳಲ್ಲಿಯೂ ಅದು ಇದೇ ಪ್ರಮಾಣದಲ್ಲಿ ಹೆಚ್ಚಳ ಕಾಣುತ್ತದೆ.

ರಾಹುಲ್ ಹಾಗೂ ಅಂಜಲಿಯ ತಿಂಗಳ ವೇತನ ₹1 ಲಕ್ಷ ಎಂದು ಪರಿಗಣಿಸಿ ಈ ಲೆಕ್ಕಹಾಕಲಾಗಿದೆ. ರಾಹುಲ್ ಪ್ರತಿ ತಿಂಗಳು ತನ್ನ ವೇತನದ ಶೇ 10ರಷ್ಟನ್ನು ಉಳಿತಾಯ ಮಾಡಿ, ಅದಕ್ಕೆ ಪ್ರತಿಯಾಗಿ ಶೇ 6ರಷ್ಟು ಗಳಿಸುತ್ತಾನೆ. 10 ವರ್ಷಗಳ ಕೊನೆಯಲ್ಲಿ ರಾಹುಲ್ ಒಗ್ಗೂಡಿಸಿದ ಮೊತ್ತವು ಗಳಿಕೆ ಸೇರಿ ಅಂದಾಜು ₹21.73 ಲಕ್ಷ ಆಗಿರುತ್ತದೆ. 20 ವರ್ಷಗಳ ಕೊನೆಯಲ್ಲಿ ಮೊತ್ತವು ಗಳಿಕೆ ಸೇರಿ ಅಂದಾಜು ₹81.67 ಲಕ್ಷ ಆಗಿರುತ್ತದೆ.

ರಾಹುಲ್ ತನ್ನ ಉಳಿತಾಯದ ಹಣಕ್ಕೆ ಪ್ರತಿಯಾಗಿ ದುಪ್ಪಟ್ಟು ಗಳಿಕೆ (ಅಂದರೆ, ಉಳಿತಾಯ ಮಾಡುವ ಮೊತ್ತ ₹10 ಸಾವಿರವಾದರೂ ಗಳಿಕೆ ಶೇ 12ರಷ್ಟು) ಪಡೆದರೆ 10ನೆಯ ವರ್ಷದ ಕೊನೆಯಲ್ಲಿ ಆತ ಒಗ್ಗೂಡಿಸುವ ಮೊತ್ತವು ಅಂದಾಜು ₹28.80 ಲಕ್ಷ ಆಗುತ್ತದೆ. 20ನೆಯ ವರ್ಷದ ಕೊನೆಯಲ್ಲಿ ಅದು ₹1.46 ಕೋಟಿ ಆಗುತ್ತದೆ. ಈ ಲೆಕ್ಕವು ದೀರ್ಘಾವಧಿಯಲ್ಲಿ ಹೆಚ್ಚಿನ ಗಳಿಕೆಯ ಪ್ರಯೋಜನವನ್ನು ತೋರಿಸುತ್ತದೆ.

ಈಗ ಅಂಜಲಿಯ ಉಳಿತಾಯದ ಬಗ್ಗೆ ಗಮನ ಹರಿಸೋಣ. ಅಂಜಲಿ ದುಪ್ಪಟ್ಟು ಮೊತ್ತ ಉಳಿಸುತ್ತಾಳೆ. ಆಕೆ ತನ್ನ ಸಂಬಳದ ಶೇ 20ರಷ್ಟು ಮೊತ್ತವನ್ನು ಉಳಿತಾಯ ಮಾಡುತ್ತಾರೆ, ಆದರೆ ಅದಕ್ಕೆ ಪ್ರತಿಯಾಗಿ ಶೇ 6ರಷ್ಟು ಮಾತ್ರ ಗಳಿಕೆ ಪಡೆಯುತ್ತಾಳೆ. ಆಕೆಯ ಗಳಿಕೆ ಪ್ರಮಾಣ ಕಡಿಮೆ ಇದ್ದರೂ 10ನೆಯ ವರ್ಷದ ಕೊನೆಯಲ್ಲಿ ಆಕೆ ಒಗ್ಗೂಡಿಸಿದ ಮೊತ್ತವು ಅಂದಾಜು ₹43.46 ಲಕ್ಷ ಆಗಿರುತ್ತದೆ. 20 ವರ್ಷಗಳ ಕೊನೆಯಲ್ಲಿ ಅದು ₹1.63 ಕೋಟಿ ಆಗುತ್ತದೆ. ಇದು ರಾಹುಲ್ ಒಗ್ಗೂಡಿಸಿದ ಮೊತ್ತಕ್ಕಿಂತ ಬಹಳ ಹೆಚ್ಚು. ರಾಹುಲ್ ಪಡೆಯುವ ಗಳಕೆಯು ಶೇ 12ರಷ್ಟು ಆಗಿದ್ದಾಗಲೂ, ಇಷ್ಟು ಮೊತ್ತವನ್ನು ಒಗ್ಗೂಡಿಸಲು ಆತನಿಂದ ಆಗುವುದಿಲ್ಲ.

20 ವರ್ಷಗಳಲ್ಲಿ ರಾಹುಲ್ ಮತ್ತು ಅಂಜಲಿ ಒಗ್ಗೂಡಿಸಿದ ಮೊತ್ತದ ನಡುವಿನ ವ್ಯತ್ಯಾಸವು ₹17 ಲಕ್ಷದಷ್ಟಾಗುತ್ತದೆ. ರಾಹುಲ್ ಉಳಿತಾಯ ಮಾಡಿದ ಹಣವು ವರ್ಷಕ್ಕೆ ಶೇ 12ರಷ್ಟು ಪ್ರಮಾಣದಲ್ಲಿ ಹಾಗೂ ಅಂಜಲಿಯ ಉಳಿತಾಯದ ಹಣವು ವರ್ಷಕ್ಕೆ ಶೇ 6ರಷ್ಟು ಪ್ರಮಾಣದಲ್ಲಿ ಮಾತ್ರ ಹೆಚ್ಚಳ ಕಂಡರೂ ಈ ವ್ಯತ್ಯಾಸ ಆಗುತ್ತದೆ. ಇದರಿಂದ ಅರ್ಥವಾಗುವ ಸಂಗತಿ ಬಹಳ ಸ್ಪಷ್ಟ. ಹೆಚ್ಚಿನ ಗಳಿಕೆ ಸಾಧ್ಯವಾಗಬಹುದು, ಸಾಧ್ಯವಾಗದೆಯೂ ಇರಬಹುದು. ಗಳಿಕೆಯ ಪ್ರಮಾಣ ಎಷ್ಟಿರಬೇಕು ಎಂಬುದು ಸಾಮಾನ್ಯವಾಗಿ ಉಳಿತಾಯ ಮಾಡುವ ವ್ಯಕ್ತಿಯ ನಿಯಂತ್ರಣದಲ್ಲಿ ಇರುವುದಿಲ್ಲ. ಆದರೆ, ಎಷ್ಟು ಹಣ ಉಳಿತಾಯ ಮಾಡಬಹುದು ಎಂಬುದು ವ್ಯಕ್ತಿಯ ನಿಯಂತ್ರಣಕ್ಕೆ ಸಿಗುವ ಅಂಶ.

ಹೂಡಿಕೆಯ ಪಯಣದ ಆರಂಭಿಕ ಹಂತದಲ್ಲಿ ಉಳಿತಾಯದ ಮೊತ್ತವನ್ನು ಹೆಚ್ಚು ಮಾಡುವುದು, ಹೆಚ್ಚಿನ ಗಳಿಕೆಯ ಬೆನ್ನುಹತ್ತುವುದಕ್ಕಿಂತ ದೊಡ್ಡದಾದ ಪರಿಣಾಮ ಉಂಟುಮಾಡಬಹುದು. ಒಗ್ಗೂಡಿಸಿದ ಮೊತ್ತವು ದೊಡ್ಡದಾದ ನಂತರದಲ್ಲಿ, ಹೆಚ್ಚಿನ ಪ್ರಮಾಣದ ಗಳಿಕೆಯು ಆ ಮೊತ್ತವನ್ನು ಹೆಚ್ಚು ಮಾಡುವಲ್ಲಿ ಇನ್ನಷ್ಟು ನೆರವಾಗಬಹುದು.

ಜೀವನದ ಗುಣಮಟ್ಟವನ್ನು ತೀರಾ ಕಡಿಮೆ ಮಾಡಿಕೊಳ್ಳದೆಯೇ ಉಳಿತಾಯದ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಲು ಹಲವು ಮಾರ್ಗಗಳಿವೆ. ಆದರೆ ಎಲ್ಲರ ಬದುಕು ಕೂಡ ಭಿನ್ನವಾಗಿರುವ ಕಾರಣಕ್ಕೆ ಪ್ರತಿ ವ್ಯಕ್ತಿಯೂ ತನಗೆ ಯಾವ ಮಾರ್ಗ ಹೆಚ್ಚು ಸೂಕ್ತವೆಂಬುದನ್ನು ತೀರ್ಮಾನಿಸಬಹುದು. ಉಳಿತಾಯ ಮಾಡುವುದನ್ನು ಸುಲಭವಾಗಿಸುವ ಸ್ವಯಂಚಾಲಿತ ಪಾವತಿ ವ್ಯವಸ್ಥೆಯನ್ನು ನೆಚ್ಚಿಕೊಳ್ಳುವುದು ಮುಖ್ಯವಾಗುತ್ತದೆ. ತೀರಾ ಅಗತ್ಯವಲ್ಲದ ವೆಚ್ಚಗಳನ್ನು ಗಮನಿಸುತ್ತ ಇರುವುದು, ಮನಸ್ಸಿಗೆ ತೋಚಿದ್ದನ್ನೆಲ್ಲ ಖರೀದಿಸದೆ ಇರುವುದು, ಆದಾಯ ಹೆಚ್ಚಿದಂತೆಲ್ಲ ಉಳಿತಾಯವನ್ನು ಕೂಡ ಜಾಸ್ತಿ ಮಾಡುವುದು, ಹೆಚ್ಚಿನ ಬಡ್ಡಿಯ ಸಾಲದ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದು ಉಳಿತಾಯದ ಮೊತ್ತ ಹೆಚ್ಚಿಸಲು ಅರ್ಥಪೂರ್ಣವಾಗಿ ನೆರವಾಗಬಲ್ಲವು.

ಎಸ್‌ಐಪಿ ಮೂಲಕ ಉಳಿತಾಯ ಮಾಡುತ್ತಿರುವವರು ಟಾಪ್‌–ಅಪ್ ಅಥವಾ ಸ್ಟೆಪ್‌–ಅಪ್ ಎಸ್‌ಐಪಿ ಆಯ್ಕೆ ಮಾಡಿಕೊಂಡಲ್ಲಿ, ಪ್ರತಿ ವರ್ಷ ಉಳಿತಾಯದ ಮೊತ್ತ ಕೂಡ ತಾನಾಗಿಯೇ ಹೆಚ್ಚುತ್ತಿರುತ್ತದೆ. ಹೆಚ್ಚು ಉಳಿತಾಯ ಅಂದರೆ ಖುಷಿಯಿಲ್ಲದ ಜೀವನ ಎಂದು ಅರ್ಥವಲ್ಲ. ಇದರ ಅರ್ಥ ಹಣದ ವಿಚಾರದಲ್ಲಿ ಒಂದಿಷ್ಟು ನಿಖರ ಉದ್ದೇಶ ಹೊಂದಿರುವುದು ಎಂದು. ಅಂದರೆ, ವ್ಯಕ್ತಿಯು ವರ್ತಮಾನದಲ್ಲಿಯೂ ಖುಷಿಯಾಗಿರಬೇಕು, ಭವಿಷ್ಯಕ್ಕಾಗಿಯೂ ಸಿದ್ಧವಾಗಿರಬೇಕು.

ಲೇಖಕ ಪಿಜಿಐಎಂ ಇಂಡಿಯಾ ಅಸೆಟ್ ಮ್ಯಾನೇಜ್ಮೆಂಟ್‌ನ ಸಿಇಒ

₹1 ಲಕ್ಷ ಸಂಬಳ ಹಾಗೂ ಉಳಿತಾಯದಲ್ಲಿ ವಾರ್ಷಿಕ ಶೇಕಡ 7ರಷ್ಟು ಹೆಚ್ಚಳ

ರಾಹುಲ್	ಉಳಿತಾಯ ಪ್ರಮಾಣ	ಗಳಿಕೆ (%)	10 ವರ್ಷಗಳ ನಂತರ	20 ವರ್ಷಗಳ ನಂತರ
	10%	6%	₹21.73 ಲಕ್ಷ	₹81.67 ಲಕ್ಷ
ದುಪ್ಪಟ್ಟು ಗಳಿಕೆ	10%	12%	₹28.80 ಲಕ್ಷ	₹1.46 ಕೋಟಿ
ಅಂಜಲಿ	ಉಳಿತಾಯ ಪ್ರಮಾಣ	ಗಳಿಕೆ (%)	10 ವರ್ಷಗಳ ನಂತರ	20 ವರ್ಷಗಳ ನಂತರ
ದುಪ್ಪಟ್ಟು ಉಳಿತಾಯ	20%	6%	₹43.46 ಲಕ್ಷ	₹1.63 ಕೋಟಿ

(ಇಲ್ಲಿರುವ ಲೆಕ್ಕಾಚಾರ ಮಾಹಿತಿಗಾಗಿ ಮಾತ್ರ. ಹಿಂದೆ ಸಿಕ್ಕಂತಹ ಗಳಿಕೆಯು ಮುಂದೆಯೂ ಅಷ್ಟೇ ಗಳಿಕೆ ಸಿಗುತ್ತದೆ ಎಂಬ ಖಾತರಿಯನ್ನು ನೀಡುವುದಿಲ್ಲ. ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯಲ್ಲಿ ನಿಶ್ಚಿತ ಗಳಿಕೆ ಇರುವುದಿಲ್ಲ. ಹೀಗಾಗಿ, ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯಿಂದ ಇಂತಿಷ್ಟೇ ಪ್ರಮಾಣದ ಗಳಿಕೆ ಖಚಿತವಾಗಿ ಸಿಗುತ್ತದೆ ಎನ್ನಲು ಆಗುವುದಿಲ್ಲ.)

ಹೂಡಿಕೆ : ಮಾಹಿತಿ ಎಲ್ಲಿಂದ ಪಡೆಯುತ್ತಾರೆ?

• ಗಂಜಿ ಆದಿಶೇಷ

ಡಿಜಿಟಲ್ ವೇದಿಕೆಗಳು ಮತ್ತು ಸಮೂಹ ಮಾಧ್ಯಮಗಳ ಮೂಲಕ ಸಾಂಪ್ರದಾಯಿಕ ಹೂಡಿಕೆದಾರರು ಷೇರುಪೇಟೆಯ ಉತ್ಪನ್ನಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುತ್ತಿದ್ದಾರೆ.

ಯೂಟ್ಯೂಬ್ ವಿಡಿಯೊಗಳು, ಇನ್‌ಸ್ಟಾಗ್ರಾಂ ರೀಲ್‌ಗಳು, 'ಎಕ್ಸ್' ಬರಹಗಳು ಸೇರಿದಂತೆ ಸಾಮಾಜಿಕ ಜಾಲತಾಣಗಳ ಮೂಲಕ ಷೇರುಪೇಟೆ ಉತ್ಪನ್ನಗಳ (ಮ್ಯೂಚುವಲ್ ಫಂಡ್‌ಗಳು, ಇಟಿಎಫ್, ಷೇರುಗಳು, ಎಫ್‌ ಆ್ಯಂಡ್ ಒ, ಆರ್‌ಇಐಟಿ ಇನ್ವಿಟಿಸ್/ಕಾರ್ಪೊರೇಟ್ ಸಾಲಪತ್ರಗಳು, ಪರ್ಯಾಯ ಹೂಡಿಕೆ ನಿಧಿ) ಬಗ್ಗೆ ಅವರು ಮಾಹಿತಿ ಪಡೆಯುತ್ತಿದ್ದಾರೆ.

ಸ್ನೇಹಿತರು, ಕುಟುಂಬ ಮತ್ತು ಸಹೋದ್ಯೋಗಿಗಳಿಂದ ಷೇರುಪೇಟೆಯ ಬಗ್ಗೆ ಮಾಹಿತಿ ಪಡೆದುಕೊಳ್ಳುವವರ ಪ್ರಮಾಣ ಶೇ 59ರಷ್ಟಿದೆ.

ವಿವಿಧ ಷೇರುಪೇಟೆ ಉತ್ಪನ್ನಗಳ ಬಗ್ಗೆ ಹೂಡಿಕೆದಾರರು ಎಲ್ಲಿಂದ ಮಾಹಿತಿ ಸಂಗ್ರಹಿಸುತ್ತಾರೆ, ಅವರು ಆಯ್ಕೆ ಮಾಡಿಕೊಳ್ಳುವ ಷೇರುಗಳ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ಎಂಬುದನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಡೆಸಿದ ಸಮೀಕ್ಷೆಯೊಂದು ತಿಳಿಸಿದೆ.

ಸಾಂಪ್ರದಾಯಿಕ ಹೂಡಿಕೆದಾರರು ಮಾಹಿತಿ ಪಡೆಯುತ್ತಿರುವ ವಿಧಾನ



1. ಸಾಮಾಜಿಕ ಜಾಲತಾಣಗಳು **2.** ಮೆಸೇಜ್ ಆ್ಯಪ್‌ಗಳು (ವಾಟ್ಸ್ ಆ್ಯಪ್, ಟೆಲಿಗ್ರಾಂ ಇತರೆ) **3.** ಸರ್ಚ್ ಎಂಜಿನ್‌ಗಳು **4.** ಆನ್‌ಲೈನ್ ಪತ್ರಿಕೆಗಳು, ನಿಯತಕಾಲಿಕಗಳು **5.** ಇತರೆ ಆನ್‌ಲೈನ್ ಮಾಧ್ಯಮ 6. ಎಎಂಎಫ್‌ಐ, ಸೆಬಿ ಇತರೆ ವೆಬ್‌ಸೈಟ್‌ಗಳು **7.** ಫಿನ್‌ಟೆಕ್ ಆ್ಯಪ್‌ಗಳು, ಹೂಡಿಕೆ ವೇದಿಕೆಗಳು **8.** ಟಿ.ವಿ **9.** ಪತ್ರಿಕೆಗಳು, ನಿಯತಕಾಲಿಕಗಳು **10.** ರೇಡಿಯೊ **11.** ವೈಯಕ್ತಿಕ ಭೇಟಿಗಳು, ಸಭೆಗಳು **12.** ದೂರವಾಣಿ ಕರೆ, ಎಸ್‌ಎಂಎಸ್.
13 ಸೆಮಿನಾರ್, ವೆಬಿನಾರ್ ಮತ್ತು ಕಾರ್ಯಾಗಾರಗಳು

ಬಿಲಿಯನ್‌ಬ್ರೇನ್ಸ್ ಗರಾಜ್ ವೆಂಚರ್ಸ್

ಬ್ರೋಕರೇಜ್ ಮಾತು

ಬಿಲಿಯನ್‌ಬ್ರೇನ್ಸ್ ಗರಾಜ್ ವೆಂಚರ್ಸ್ (ಗ್ರೋವ್) ಕಂಪನಿಯ ಷೇರುಮೌಲ್ಯವು ₹235ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಮೋತಿಲಾಲ್ ಓಸ್ವಾಲ್ ಅಂದಾಜು ಮಾಡಿದೆ. ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಗ್ರೋವ್ ಕಂಪನಿಯ ಕಾರ್ಯಾಚರಣೆ ವರಮಾನವು ಹಿಂದಿನ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 88ರಷ್ಟು ಹೆಚ್ಚಳ ಸಾಧಿಸಿದೆ. ಕಂಪನಿಯು ಒಟ್ಟು ₹1,505 ಕೋಟಿ ವರಮಾನ ಗಳಿಸಿದೆ. ಕಂಪನಿಯ ತೆರಿಗೆ ನಂತರದ ಲಾಭವು ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕಕ್ಕೆ ಹೋಲಿಕೆ ಮಾಡಿದರೆ ಈ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಶೇ 122ರಷ್ಟು ಹೆಚ್ಚಾಗಿದ್ದು ₹686 ಕೋಟಿಗೆ ತಲುಪಿದೆ.

ಗ್ರೋವ್ ಕಂಪನಿಯ ವರಮಾನವು ಮುಂದಿನ ದಿನಗಳಲ್ಲಿ ಉತ್ತಮವಾಗಿ ಇರಲಿದೆ. ಕಂಪನಿಯು ಈಚೆಗೆ ಎಂಟಿಎಫ್ ಹಾಗೂ ಕಮಾಡಿಟೀಸ್ ಸೇವೆಗಳನ್ನು ಆರಂಭಿಸಿದೆ, ಈ ಮೂಲಕ ಕಂಪನಿಯ ಬ್ರೋಕರೇಜ್ ವಹಿವಾಟು ಹೆಚ್ಚಿನ ಮಾರುಕಟ್ಟೆ ಪಾಲು ಪಡೆಯುತ್ತಿದೆ. ಇದು ಇನ್ನಷ್ಟು ಬೆಳವಣಿಗೆಗೆ ಉತ್ತೇಜನ ನೀಡಲಿದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಗ್ರೋವ್ ಷೇರುಮೌಲ್ಯವು ₹217.70 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಕ್ಕೆ ಪತ್ರಿಕೆ ಹೊಣೆಯಲ್ಲ)

'ನೀಟ್' ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ಬಿತ್ತರ

ಪಿಯುಸಿ/ಸಿಇಟಿ ಪರೀಕ್ಷೆ

CHEMISTRY

31) The standard heat of formation, in kcal/mol of Ba^{2+} is :
[Given : standard heat of formation of $SO^{2}{}_{-4}$ ion (aq)=–216 kcal/mol, standard heat of crystallisation of $BaSO_4$(s)=–4.5 kcal/mol, standard heat of formation of $BaSO_4$(s) = – 349 kcal/mol]
(a) + 220.5 (b) – 128.5
(c) – 133.0 (d) + 133.0
Ans: (b)
Expln:-

$$S + 2O_2 + 2e^- \longrightarrow SO_4^{2-} \quad \Delta H_f = -216\ kcal/mol \quad ...(1)$$

$$Ba^{2+}(g) + SO_4^{2-}(g) \longrightarrow BaSO_4(s) \quad \Delta H_{crystallisation} = -4.5\ kcal/mol \quad ...(2)$$

$$Ba + S + 2O_2 \longrightarrow BaSO_4(s) \quad \Delta H_{f(BaSO_4)} = -349\ kcal/mol \quad ...(3)$$

$$Ba(s) \longrightarrow Ba^{2+}(g) + 2e^- \quad ...(4)$$

From equation (1),(2) and (3) we get equation (4). Applying equation (3) – (1) – (2)
So, –349 – (–4.5) – (–216)
So – 349 + 4.5 + 216
= –349 + 220.5
= – 128.5 kcal/mol

32) Which amongst the following options is correct graphical representation of Boyle's Law?



Ans:- C
Expln:- PV = nRT
P = nRT.(1/V)
Plot of P vs (1/V) would be straight line passing through origin having slope = nRT. At high temperatures, P vs (1/V) would have greater slope.

33) Terylene is NOT a ....
a) Copolymer b) Polyester fiber
c) Chain growth polymer
d) Step growth polymer
Ans:- c; Chain growth polymer.

34) What amount of dioxygen (in gram) contains 1.8×10^{22} molecules?
(a) 0.960 (b) 96.0
(c) 0.0960 (d) 9.60
Ans: (a) 0.960
Expln:-6.022×10^{23} molecules are present in 32g.
$\therefore$ 1.8×10^{22} molecules are present in

$$\frac{1.8\times10^{22}\times32}{6.022\times10^{23}} = 0.960.$$

35) The IUPAC name of the complex ion formed when gold dissolves in aqua regia is
a) tetrachloridoaurate (III)
b) tetrachloridoaurate (I)
c) tetrachloridoaurate (II)
d) tetrachloridoaurate (III).
Ans:- a; When gold dissolve sin aqua regia, it gives tetrachloridoaurate (III) anion.
$2Au + 3HNO_3 + 11HCl \rightarrow 2H[AuCl_4] + 3NOCl + 6H_2O$

36) Benzaldehyde and acetone can be best distinguished using ....
a) Sodium hydroxide solution
b) Fehling's solution c) Tollen's reagent
d) 2, 4- DNPH **Ans:- c;**

37) Arrange the following compounds in the increasing order of their acidic strength:
i) m-nitrophenol, ii) m-cresol,
iii) phenol, iv) m-chlorophenol.
(a) ii < iv < iii < i **(b) ii < iii < i < iv**
(c) iii < ii < i < iv **(d) ii < iii < iv< i**
Ans: (d) ii < iii < iv< i
Expln:- m-cresol has electron-releasing group (CH_3). Hence it decreases the acidic strength. Both nitro and chloro have –I effect. Hence they show higher acidic strength. But nitro is a stronger –I group than chloro group. Hence m-minitro phenol is more acidic than m-chlorophenol.

38) Which one of the following is an example for homogeneous catalysis?
a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl **Ans:-** d

39) Which of the following are paramagnetic?
A. $[NiCl_4]^{2-}$ **B. $Ni(CO)_4$**
C. $[Ni(CN)_4]^{2-}$ **D. $[Ni(H_2O)_6]^{2+}$**
E. $Ni(PPh_3)_4$
Choose the correct answer from the options given below :
(a) A, D and E only (b) A and C only
(c) B and E only (d) A and D only
Ans:- d
A. $[NiCl_4]^{2-}$; Ni^{+2}; $3d^8$; sp^3 hybridisation; 2 unpaired electrons; paramagnetic
B. $Ni(CO)_4$; Ni; $3d^8 4s^2$; sp^3 hybridisation; Zero unpaired electron; diamagnetic
C. $[Ni(CN)_4]^{2-}$; Ni^{+2}; $3d^8$; dsp^2 hybridisation; Zero unpaired electron; diamagnetic
D. $[Ni(H_2O)_6]^{2+}$; Ni^{2+}, $3d^8$; sp^3d^2 hybridisation; Two unpaired electron; paramagnetic
E. $Ni(PPh_3)_4$; Ni; $3d^8 4s^2$, sp^3 hybridisation; zero unpaired electron; Diamagnetic

BIOLOGY

MULTIPLE CHOICE QUESTIONS:-

26. Which of the following is true for eutrophicated water body?
(a) High mineral content
(b) High oxygen content
(c) Rich species diversity
(d) Low organic content
Ans:a
Expl:- Eutrophication is the natural aging of lake by the biological enrichment of its water. The acceleration of aging process starts due to heavy discharge of pollutants from the industry and home. The prime contaminants are nutrients such as nitrates and phosphates which acts as plant nutrient and over stimulate the growth of algae known as algal bloom

27) Cell in the quiescent stage (G_0)
a) Always become cancerous
b) Show indefinite proliferation
c) Remain metabolically inactive
d) Remain metabolically active
Ans: (d)
Expln:- In G_0, some cells in the adult animals do not appear to exhibit division (e.g., heart cells) and many other cells divide only occasionally. These cells that do not divide further exist G_1 phase to enter an inactive stage called quiescent stage (G_0) of the cell cycle. Cells in this stage remain metabolically active but no longer proliferate unless called on to do so depending on the requirement of the organism

28) In which type of interaction, both the interacting organisms do not live close together?
a) Predation b) Parasitism
c) Mutualism d) Competition
Ans:(d)
Expln:- Predation is the consumption of one species (the prey) by another (the predator). Parasitism is a host parasite relationship in which one (parasite) is benefited while other (host) is adversely affected, although not necessarily killed. Competition is the injurious effect of one organism on another because of the removal of some resources of the environment. This phenomenon can result in major fluctuations in the composition of the microbial population in the soil

29) IUDs which are used by females
(a) Act as spermicidal jellies
(b) Block the entry of sperms into vagina
(c) Are implanted under the skin and they release progestogen and estrogen
(d) Release copper ions in the uterus that increase phagocytosis of sperms.
Ans:d
Expl:- IUDs are T-shaped intrauterine devices containing either copper or progesterone which are inserted by doctors into the uterus through vagina. They are a form of long reversible contraceptive methods.
They prevent contraception by increasing the phagocytosis of sperms within the uterus thus, making it unsuitable for implantation. They also suppress sperm motility and fertilizing ability, e.g., Cu-T, Cu 7, LNG-20, Mirene, etc.

30) Which one of the following statement is correct?
a) Chasmogamous flowers always exhibit geitonogamy.
b) Cleistogamous flowers always exhibit autogamy.
c) Chasmogamous flowers never exhibit autogamy.
d) Cleistogamous flowers exhibit both autogamy and geitonogamy.
Ans: (b)
Expln:- Cleistogamous flowers do not open at all. In such flowers, the anther and stigma lie close to each other. When anthers dehisce in the flower buds, pollen grain comes in contact with the stigma to effect pollination. Thus, cleistogamous flowers are invariably autogamous as there is no chance of cross pollen landing on the stigma. Whereas chasmogamous flowers(with exposed anthers and stigma) can exhibit autogamy, geitonogamy or xenogamy.

31) **Identify the wrong statement.**
a) Alleles IA and IB produce sugars
b) Both IA and IB are present together and they express because of codominance
c) Alleles b and c also produce sugar
d). When IB and b or i are present only IB is expressed **Ans: c**
Expln:- ABO blood grouping is a type of blood grouping system in which blood is of 4 types A, B, AB and O blood group. These blood groups are controlled by the gene I. The surface of the RBC Contains Sugar polymer. The gene I has 3 types of alleles A, B and i. Different forms of Sugars are present on RBC Surface of alleles IA and IB. However, C does not produce sugar.

32) During the chemiosmotic synthesis of ATP in photosynthesis:
a) The protons accumulate in the intermembrane space of chloroplast
b) The proton gradient is not required
c) The protons accumulate in the intermembrane space of the mitochondrion
d) The protons accumulate within the lumen of the thylakoids **Ans: (c)**
Expln:- During chemiosmotic synthesis, ATP synthesis is linked to the development of a proton gradient across a membrane. This time these are membranes of the thylakoid. There is one difference though, here the proton accumulation is towards the inside of the membrane, i.e., in the lumen. In respiration, protons accumulate in the intermembrane space of the mitochondria when electrons move through the ETS

ಪ್ರೇಮಿ ದೂರವಾಗುವ ಆತಂಕದಿಂದ ಕೃತ್ಯ

ಕೈ–ಕಾಲು ಕಟ್ಟಿ ಪ್ರಿಯಕರನ ಸುಟ್ಟಿದ್ದ ಪ್ರಕರಣ, ಆರೋಪಿ ಪ್ರೇಮಾ ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದೇಶಿ ಶೈಲಿ’ಯಲ್ಲಿ ಪ್ರೇಮ ನಿವೇದನೆ ಮಾಡುವುದಾಗಿ ನಂಬಿಸಿ, ಪ್ರಿಯಕರನನ್ನು ಮನೆಗೆ ಕರೆಸಿಕೊಂಡು ಸೀಮೆಎಣ್ಣೆ ಹಾಗೂ ಪೆಟ್ರೋಲ್ ಸುರಿದು ಸುಟ್ಟುಹಾಕಿದ್ದ ಪ್ರಕರಣದ ಆರೋಪಿ, ಅಂಜನಾನಗರದ ನಿವಾಸಿ ಪ್ರೇಮಾ (27) ಅವರನ್ನು ಬ್ಯಾಡರಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಹೆಚ್ಚಿನ ವಿಚಾರಣೆಗಾಗಿ ಮೂರು ದಿನ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ತುಮಕೂರು ಜಿಲ್ಲೆ ಲಿಂಗನಹಳ್ಳಿಯ ನಿವಾಸಿ ಕಿರಣ್ (27) ಅವರನ್ನು ಅಂಜನಾನಗರದ ಮನೆಗೆ ಮಂಗಳವಾರ ಮಧ್ಯಾಹ್ನ ಕರೆಸಿಕೊಂಡು ಕೈ–ಕಾಲು ಕಟ್ಟಿ ಸುಟ್ಟುಹಾಕಲಾಗಿತ್ತು.

ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಬುಧವಾರ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು.

ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿದ್ದು, ಆ ತಂಡವು ಆರೋಪಿಯ ವಿಚಾರಣೆ ನಡೆಸುತ್ತಿದೆ ಎಂದು ಪೊಲೀಸರು ಹೇಳಿದರು.

ಕಿರಣ್

ಪ್ರೇಮಾ

ಅಪರಾಧ ಸುದ್ದಿ

ತಪ್ಪೊಪ್ಪಿಗೆ: ‘ಕಿರಣ್ ಹಾಗೂ ನಾನು ರಾಜಾಜಿನಗರದ ವಿ.ಐ ಸ್ಟೋರ್ ನಲ್ಲಿ (ಟೆಲಿಕಾಂ ಸೇವಾ ಪೂರೈಕೆ ಸಂಸ್ಥೆ) ಕೆಲಸ ಮಾಡುತ್ತಿದ್ದೆವು. ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದೆವು. ಒಟ್ಟಿಗೆ ಸುತ್ತಾಟ ನಡೆಸುತ್ತಿದ್ದೆವು. ಕಿರಣ್ ಇತ್ತೀಚೆಗೆ ನನ್ನನ್ನು ನಿರ್ಲಕ್ಷ್ಯ ಮಾಡುತ್ತಿದ್ದರು. ನನ್ನನ್ನು ದೂರ ಮಾಡುತ್ತಾರೆ ಎಂಬ ಆತಂಕದಿಂದಲೇ ಕೊಲೆ ಮಾಡಿ, ನಾನೂ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದೆ ಎಂಬುದಾಗಿ ವಿಚಾರಣೆ ವೇಳೆ ಪ್ರೇಮಾ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ’ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

‘ಫೆಬ್ರುವರಿ 14ರಂದು ಪ್ರೇಮಾ ಅವರು ತನ್ನ ಪ್ರೀತಿಯನ್ನು ಕಿರಣ್‌ಗೆ ತಿಳಿಸಿದ್ದರು. ಕಿರಣ್ ಸಹ ಒಪ್ಪಿಕೊಂಡಿದ್ದರು. ಪ್ರಿಯಕರನಿಗಾಗಿ ಪ್ರೇಮಾ ₹4.50 ಲಕ್ಷ ಮೌಲ್ಯದ ಬೈಕ್ ಹಾಗೂ ಮೊಬೈಲ್ ಫೋನ್ ಕೊಡಿಸಲು ಮುಂದಾಗಿದ್ದರು. ಇಬ್ಬರೂ ಸೇರಿ ಬೈಕ್ ಶೋರೂಂವೊಂದಕ್ಕೆ ಹೋಗಿ ಬಂದಿದ್ದರು’ ಎಂದು ಮೂಲಗಳು ಹೇಳಿವೆ.

‘ಕಿರಣ್ ಇತ್ತೀಚೆಗೆ ಪ್ರೇಮಾ ಅವರಿಂದ ಅಂತರ ಕಾಯ್ದುಕೊಳ್ಳಲು ಶುರುಮಾಡಿದ್ದರು. ಈ ವಿಚಾರವು ಪ್ರೇಮಾಗೆ ಬೇಸರ ತರಿಸಿತ್ತು. ಮದುವೆ ಮಾಡಿಕೊಳ್ಳುವಂತೆ ಪ್ರೇಮಾ ಮನೆಯಲ್ಲಿ ಒತ್ತಡ ಹಾಕುತ್ತಿದ್ದರು. ಈ ವಿಚಾರವನ್ನು ಪ್ರೇಮಾ, ಕಿರಣ್‌ಗೆ ತಿಳಿಸಿದ್ದರು. ಕಿರಣ್ ಮದುವೆ ಪ್ರಸ್ತಾಪವನ್ನು ಮುಂದೂಡುತ್ತಿದ್ದರು. ಇಬ್ಬರ ಮಧ್ಯೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಆಗ ಪ್ರಿಯಕರನನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದರು. ಅದಕ್ಕಾಗಿಯೇ ಪೆಟ್ರೋಲ್ ಮತ್ತು ಸೀಮೆಎಣ್ಣೆಯನ್ನು ಮೊದಲೇ ಖರೀದಿಸಿ ಮನೆಗೆ ತಂದಿಟ್ಟಿದ್ದರು’ ಎಂದು ಮೂಲಗಳು ಹೇಳಿವೆ.

‘ವಿದೇಶಿ ಶೈಲಿ’ಯಲ್ಲಿ ಪ್ರೇಮ ನಿವೇದನೆ ಮಾಡುವುದಾಗಿ ನಂಬಿಸಿ ಮಂಗಳವಾರ ಪ್ರಿಯಕರನನ್ನು ಮನೆಗೆ ಕರೆಸಿಕೊಂಡಿದ್ದರು. ಪ್ರಿಯಕರನ ಮೈಮೇಲೆ ಪೆಟ್ರೋಲ್ ಹಾಗೂ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ ಬಳಿಕ ಪ್ರೇಮಾ ಸಹ ಅದೇ ಬೆಂಕಿಯಲ್ಲಿ ಆಹುತಿಯಾಗಲು ನಿರ್ಧರಿಸಿದ್ದರು. ಬೆಂಕಿಯಿಂದ ಬದುಕುಳಿದರೆ ಆತ್ಮಹತ್ಯೆ ಮಾಡಿಕೊಳ್ಳಲು ವಿಷದ ಬಾಟಲಿ ಹಾಗೂ ಮಾತ್ರೆಗಳನ್ನು ಸಿದ್ಧಪಡಿಸಿಕೊಂಡಿದ್ದರು. ಆದರೆ, ಕಿರಣ್ ಬೆಂಕಿಯಲ್ಲಿ ನರಳುತ್ತಾ ಕಿರುಚಾಡುತ್ತಿದ್ದಾಗ ಪ್ರೇಮಾ ಭಯಬಿದ್ದು ಹೊರಕ್ಕೆ ಓಡಿಬಂದಿದ್ದರು. ಅರೆಬರೆ ಬಟ್ಟೆಯಲ್ಲಿದ್ದ ಆಕೆಯನ್ನು ಕಂಡು ಪಕ್ಕದ ಮನೆಯವರು ಬಟ್ಟೆ ನೀಡಿ ರಕ್ಷಿಸಿ, ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

‘ವಿಷಯ ತಿಳಿಸಿದ್ದರೆ ನಾವೇ ಒಪ್ಪಿಸುತ್ತಿದ್ದೆವು’

ಮರಣೋತ್ತರ ಪರೀಕ್ಷೆ ನಡೆದ ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದ ಎದುರು ಕಿರಣ್ ಕುಟುಂಬಸ್ಥರು ಕಣ್ಣೀರು ಹಾಕಿದರು. ಒಬ್ಬನೇ ಮಗನನ್ನು ಕಳೆದುಕೊಂಡ ದುಃಖದಲ್ಲಿ ತಂದೆ ನರಸಿಂಹಯ್ಯ ಕಣ್ಣೀರು ಹಾಕಿದರು.

‘ಮಗನಿಗೆ ಯಾವತ್ತೂ ಒಂದು ಏಟು ಹೊಡೆಯದೆ ಪ್ರೀತಿಯಿಂದ ಬೆಳೆಸಿದ್ದೆ, ಕೆಲಸ ಮಾಡಿಕೊಂಡು ಚೆನ್ನಾಗಿ ಜೀವನ ನಡೆಸಲಿ ಎಂದು ಬೆಂಗಳೂರಿಗೆ ಕಳುಹಿಸಿದ್ದೆವು. ಪ್ರೀತಿಯ ನಾಟಕವಾಡಿ ಮಗನನ್ನು ಬರ್ಬರವಾಗಿ ಕೊಲೆ ಮಾಡಿದ್ದಾಳೆ. ಆಕೆಗೆ ಶಿಕ್ಷೆಯಾಗಬೇಕು’ ಎಂದು ತಂದೆ ನರಸಿಂಹಯ್ಯ ಕಣ್ಣೀರು ಹಾಕಿದರು.

‘ಕಿರಣ್ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದು, ವಿಷಯ ತಿಳಿಸಿಲ್ಲ. ವಿಷಯ ಗೊತ್ತಾದರೆ ಅದನ್ನು ತಡೆದುಕೊಳ್ಳುವ ಶಕ್ತಿ ಅವರಿಗಿಲ್ಲ’ ಎಂದು ಸಂಬಂಧಿ ವೀಣಾ ಹೇಳಿದರು.

‘ಕಿರಣ್‌ನನ್ನು ಮದುವೆಯಾಗುವ ಆಸೆಯಿದ್ದರೆ ಮಾಹಿತಿ ನೀಡಬಹುದಿತ್ತು, ನಾವೇ ಒಪ್ಪಿಸುತ್ತಿದ್ದೆವು. ಈ ವಿಷಯವನ್ನು ಯಾರ ಬಳಿಯೂ ಹೇಳದೇ ಮನೆಗೆ ಕರೆಸಿಕೊಂಡು ಕೊಲೆ ಮಾಡಲಾಗಿದೆ’ ಎಂದು ಹೇಳಿದರು.

ಹಳೆ ಪ್ರೇಯಸಿಯೊಂದಿಗೆ ಸುತ್ತಾಟ

ಪ್ರೇಮಾಳನ್ನು ಕಡೆಗಣಿಸಿ ಕಿರಣ್ ಹಳೆಯ ಪ್ರಿಯತಮೆಯ ಜೊತೆ ಮತ್ತೆ ಸಂಪರ್ಕದಲ್ಲಿ ಇದ್ದರು ಎನ್ನಲಾಗಿದೆ. ಮಾಜಿ ಪ್ರೇಯಸಿಯ ಜನ್ಮದಿನವನ್ನು ಆಚರಿಸಿ ಕಿರಣ್ ಫೋಟೊಗಳನ್ನು ತೆಗೆಸಿಕೊಂಡಿದ್ದರು. ಅದನ್ನು ಕಂಡು ಆಕ್ರೋಶಗೊಂಡಿದ್ದ ಪ್ರೇಮಾ, ಕಿರಣ್ ಜತೆ ಜಗಳವಾಡಿದ್ದರು. ಕಿರಣ್ ಪ್ರೇಮಾಳ ನಂಬರ್ ಬ್ಲಾಕ್ ಮಾಡಿದ್ದರಿಂದ ಸೇಡು ಮತ್ತಷ್ಟು ಹೆಚ್ಚಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಬಕಾರಿ: ಸಂಪನ್ಮೂಲ ಸಂಗ್ರಹ ಸಮಿತಿ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ತೆರಿಗೆ ವ್ಯವಸ್ಥೆಯನ್ನು ಪುನರ್‌ಪರಿಶೀಲಿಸಲು ರಾಜ್ಯ ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ಡಾ.ಕೆ.ಪಿ.ಕೃಷ್ಣನ್ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಂಪನ್ಮೂಲ ಸಂಗ್ರಹ ಸಮಿತಿಯು, ರಾಜ್ಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ.

‘ರಾಜ್ಯದಲ್ಲಿ ಮದ್ಯದ ಸ್ವರೂಪ ಮತ್ತು ಬೆಲೆಯ ಆಧಾರದ ಮೇಲೆ ತೆರಿಗೆ ಅಥವಾ ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಈ ವ್ಯವಸ್ಥೆಯನ್ನು ಬದಲಿಸಬೇಕು. ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣದ ಆಧಾರದ ಮೇಲೆ ತೆರಿಗೆ ದರವನ್ನು ನಿಗದಿ ಮಾಡಬೇಕು’ ಎಂದು ಸಮಿತಿಯು ಶಿಫಾರಸು ಮಾಡಿದೆ.

‘ಮದ್ಯದಲ್ಲಿರುವ ಪ್ರತಿ ಒಂದು ಲೀಟರ್ ಶುದ್ಧ ಆಲ್ಕೋಹಾಲ್ ಮೇಲೆ ₹1,000 ಹೆಚ್ಚುವರಿ ಅಬಕಾರಿ ಸುಂಕ ವಿಧಿಸಬೇಕು. ಹಂತಹಂತವಾಗಿ ಈ ಮೊತ್ತವನ್ನು 2028-29ರ ಹೊತ್ತಿಗೆ ₹2,000ಕ್ಕೆ ಹೆಚ್ಚಿಸಬೇಕು. ಮದ್ಯದ ದರವನ್ನು ವಿಪರೀತ ಹೆಚ್ಚಳ ಮಾಡಿ, ಜನರು ಅಕ್ರಮ ಮದ್ಯದತ್ತ ತೆರಳುವಂತೆ ಮಾಡಬಾರದು’ ಎಂದಿದೆ.

ರಾಜ್ಯ ಸರ್ಕಾರವು ಈಚೆಗೆ ಹೊರಡಿಸಿರುವ ನೂತನ ಕರಡು ಅಬಕಾರಿ ನೀತಿಯಲ್ಲಿ ಈ ಶಿಫಾರಸುಗಳನ್ನು ಅಳವಡಿಸಿಕೊಂಡಿದೆ.

ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು–560 056, ದೂ : 080–23213023
ಸಂಖ್ಯೆ: ಪವಿ. 3/ಬಾಡಿಗೆ/ವಾಹನ/2026–27 ದಿನಾಂಕ : 17.04.2026
ಅಧಿಸೂಚನೆ
2026–27ನೇ ಶೈಕ್ಷಣಿಕ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆಗೆ ವಾಹನಗಳನ್ನು ಪಡೆಯಲು ದ್ವಿ ಲಕೋಟೆ ಪದ್ಧತಿ (2 Cover System) ಅಂದರೆ ತಾಂತ್ರಿಕ ಮತ್ತು ಹಣಕಾಸು ದರಪಟ್ಟಿಯನ್ನು ನೊಂದಾಯಿತ ಸಂಸ್ಥೆ/ಕಂಪನಿಗಳಿಂದ ಆಹ್ವಾನಿಸಲಾಗಿದೆ.
ತಾಂತ್ರಿಕ ಮತ್ತು ಹಣಕಾಸು ಬಿಡ್ಡಿನ ಅರ್ಹತೆ/ ವಿಶೇಷತೆಗಳನ್ನು ಷರತ್ತು ಹಾಗೂ ನಿಬಂಧನೆಗಳನ್ನು ವಿಶ್ವವಿದ್ಯಾಲಯ ವೆಬ್‌ಸೈಟ್ bangaloreuniversity.karnataka.gov.in ನಿಂದ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ. ದರಪಟ್ಟಿಯನ್ನು ಅಧೀಕ್ಷಕರು, ಪರೀಕ್ಷಾ ವಿಭಾಗ–3 ಪರೀಕ್ಷಾ ಭವನ, ಜ್ಞಾನಭಾರತಿ ಆವರಣ, ಬೆಂಗಳೂರುವಿಶ್ವವಿದ್ಯಾಲಯ, ಬೆಂಗಳೂರು–56. ಇವರಿಗೆ ಈ ಅಧಿಸೂಚನೆ ಪ್ರಕಟಗೊಂಡ 7 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–22961210 ಮತ್ತು ಇ–ಮೇಲ್: regevalex3bub.ernet.in ಮುಖಾಂತರ ಸಂಪರ್ಕಿಸಬಹುದಾಗಿದೆ.
ಸಹಿ/–
ವಾ.ಸಾ.ಸಂ.ಇ/ವಾಪ್ರ/291/ಆಕಾರ್/2026–27 ಕುಲಸಚಿವರು (ಮೌಲ್ಯಮಾಪನ)

ನಟಿ ರನ್ಯಾ ಜೈಲಿನಿಂದ ಬಿಡುಗಡೆ

ಪ್ರಜಾವಾಣಿ ವಾರ್ತೆ


ರನ್ಯಾ ರಾವ್

ಬೆಂಗಳೂರು: ದುಬೈನಿಂದ ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ನಟಿ ಹರ್ಷವರ್ಧಿನಿ ರನ್ಯಾ (ರನ್ಯಾ ರಾವ್) ಅವರು ಒಂದು ವರ್ಷದ ಬಳಿಕ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬುಧವಾರ ಸಂಜೆ ಬಿಡುಗಡೆಯಾದರು. ಜೈಲಿನಿಂದ ಬಿಡುಗಡೆಯಾದ ರನ್ಯಾ, ವಕೀಲರ ಕಾರಿನಲ್ಲಿ ತೆರಳಿದರು.

ದುಬೈನಿಂದ 14.2 ಕೆ.ಜಿ ಚಿನ್ನವನ್ನು ಕಳ್ಳ ಸಾಗಣೆ ಮಾಡಿದ್ದ ಆರೋಪದಡಿ 2025ರ ಮಾರ್ಚ್ 3ರ ರಾತ್ರಿ ಡಿಆರ್‌ಐ ಅಧಿಕಾರಿಗಳು ದೇವನಹಳ್ಳಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ಯಾ ಅವರನ್ನು ಬಂಧಿಸಿದ್ದರು. ಬಳಿಕ ನಡೆದ ತನಿಖೆ ವೇಳೆ ಚಿನ್ನ ಸಾಗಣೆ, ಮಾರಾಟಕ್ಕೆ ನೆರವು ನೀಡಿದ್ದ ಆರೋಪದಲ್ಲಿ ರನ್ಯಾ ಸಹಚರರಾದ ತರುಣ್ ರಾಜ್ ಕೊಂಡೂರು ಹಾಗೂ ಸಾಹಿಲ್ ಜೈನ್ ಅವರನ್ನು ಬಂಧಿಸಲಾಗಿತ್ತು.

ರನ್ಯಾ, ತರುಣ್ ರಾಜ್‌ಗೆ ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು 2025ರ ಮೇ 20ರಂದು ಜಾಮೀನು ಮಂಜೂರು ಮಾಡಿತ್ತು. ಇದಕ್ಕೂ ಮುನ್ನ ಅಂದರೆ ಏಪ್ರಿಲ್ 22ರಂದು ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯ (ಕಾಫಿಪೋಸಾ) 3(1) ಸೆಕ್ಷನ್ ಅಡಿಯಲ್ಲಿ ರನ್ಯಾ ವಿರುದ್ಧ ಬಂಧನದ ಆದೇಶ ಹೊರಡಿಸಲಾಗಿತ್ತು. ಕಾಫಿಪೋಸಾ ಪ್ರಕರಣದಲ್ಲಿ ಬಂಧನವಾದರೆ, ಒಂದು ವರ್ಷ ಜೈಲಿನಿಂದ ಬಿಡುಗಡೆ ಆಗುವಂತೆ ಇಲ್ಲ. ಹೀಗಾಗಿ, ಜಾಮೀನು ಲಭಿಸಿದ್ದರೂ ರನ್ಯಾ ಕಾರಾಗೃಹದಲ್ಲೇ ಇದ್ದರು.

‘ಈ ಹಿಂದೆಯೇ ಲಭಿಸಿದ್ದ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ. ಪ್ರಕರಣದ ತನಿಖೆ ನಡೆಯುತ್ತಿದೆ. ಸದ್ಯಕ್ಕೆ ಮೇಲ್ಮನವಿ ಸಲ್ಲಿಸುತ್ತಿಲ್ಲ’ ಎಂದು ಡಿಆರ್‌ಐ ಮೂಲಗಳು ತಿಳಿಸಿವೆ. ತರುಣ್ ರಾಜ್ ಕೊಂಡೂರು ಹಾಗೂ ಸಾಹಿಲ್ ಜೈನ್ ಅವರಿಗೂ ಜಾಮೀನು ಲಭಿಸಿದ್ದು, ಸದ್ಯದಲ್ಲೇ ಬಿಡುಗಡೆ ಆಗಲಿದ್ದಾರೆ.

ದೋಷಾರೋಪ ಪಟ್ಟಿ ಸಲ್ಲಿಕೆ

‘ಅಕ್ರಮ ಹಣ ವರ್ಗಾವಣೆ (ತಡೆ) ಕಾಯ್ದೆಯ (ಪಿಎಂಎಲ್‌ಎ) ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯಕ್ಕೆ ಕಳೆದ ಫೆಬ್ರುವರಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ರನ್ಯಾ ರಾವ್, ಸಹಚರರು ಒಂದು ವರ್ಷದಲ್ಲಿ ₹102.55 ಕೋಟಿ ಮೌಲ್ಯದ 127 ಕೆ.ಜಿ ಚಿನ್ನವನ್ನು ಕಳ್ಳ ಸಾಗಣೆ ಮಾಡಿದ್ದಾರೆಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಇ.ಡಿ ಮೂಲಗಳು ತಿಳಿಸಿವೆ.

ನಗರದ ಲ್ಯಾವೆಲ್ಲೆ ರಸ್ತೆಯ ನಂದವಾಣಿ ಮ್ಯಾನ್ಷನ್ ಫ್ಲ್ಯಾಟ್ ಸೇರಿದಂತೆ 16 ಸ್ಥಳಗಳ ಮೇಲೆ ಡಿಆರ್‌ಐ ಅಧಿಕಾರಿಗಳು ಈ ಹಿಂದೆ ದಾಳಿ ನಡೆಸಿ, ನಗದು ಹಾಗೂ ದಾಖಲೆಗಳನ್ನು ಜಪ್ತಿ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಸರ್ಕಾರಿ ನೌಕರರಿಗೆ ವೇತನ ಪಾವತಿಯಾಗಿಲ್ಲ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ


ವಿಜಯೇಂದ್ರ

ಬೆಂಗಳೂರು: ‘ರಾಜ್ಯ ಸರ್ಕಾರದ ಸುಮಾರು 5 ಲಕ್ಷ ನೌಕರರ ಪೈಕಿ ಹಲವರಿಗೆ ಏಪ್ರಿಲ್ 22ನೇ ತಾರೀಕು ಬಂದರೂ ವೇತನ ಪಾವತಿ ಆಗಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರ್ಥಿಕ ನೀತಿಗಳ ವೈಫಲ್ಯ ಮತ್ತು ಆಡಳಿತದಲ್ಲಿನ ಭ್ರಷ್ಟಾಚಾರದ ಕಾರಣಕ್ಕೆ ಹೀಗಾಗಿದೆ’ ಎಂದು ಆರೋಪಿಸಿದ್ದಾರೆ.

‘ರಾಜ್ಯ ಸರ್ಕಾರವು ಹಿಂದಿನ ವರ್ಷದ ಎರಡು ತಿಂಗಳ ಗೃಹಲಕ್ಷ್ಮೀ ಹಣವನ್ನು ನುಂಗಿ ಹಾಕಿತ್ತು. ಈಚೆಗೆ ನಡೆದ ಉಪ ಚುನಾವಣೆ ವೇಳೆ ಗೃಹಲಕ್ಷ್ಮೀ ಖಾತೆಗಳಿಗೆ ಹಣ ಜಮೆ ಮಾಡಿದೆ. ಸರ್ಕಾರಿ ನೌಕರರ ವೇತನದ ಹಣವನ್ನು ತೆಗೆದು, ಗೃಹಲಕ್ಷ್ಮೀ ಯೋಜನೆಗೆ ಬಳಸಿಕೊಳ್ಳಲಾಗಿದೆ’ ಎಂದಿದ್ದಾರೆ.

‘ಮುಖ್ಯಮಂತ್ರಿ ಬದಲಾವಣೆ, ಸಂಪುಟ ಪುನರ್‌ರಚನೆ ಮತ್ತು ಮುಸ್ಲಿಮರ ತುಷ್ಟೀಕರಣದ ಕಾರಣಕ್ಕೆ ಕಾಂಗ್ರೆಸ್‌ನಲ್ಲಿ ಆಂತರಿಕ ಬಿಕ್ಕಟ್ಟು ತಲೆದೋರಿದ್ದು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ವೈಯಕ್ತಿಕ ಪ್ರತಿಷ್ಠೆಯಲ್ಲಿ ಮುಳುಗಿಹೋಗಿದ್ದಾರೆ. ಅದರ ಪರಿಣಾಮವನ್ನು ರಾಜ್ಯದ ಜನರು ಎದುರಿಸಬೇಕಾಗಿದೆ. ಬಿರುಬೇಸಿಗೆ ಮತ್ತು ನೀರಿಲ್ಲದ ಸ್ಥಿತಿಯಲ್ಲಿ ರಾಜ್ಯದ ಜನರು ಬಸವಳಿದಿದ್ದಾರೆ. ಜನರ ನೆರವಿಗೆ ಧಾವಿಸುವಂತೆ ಸರ್ಕಾರವನ್ನು ಎಚ್ಚರಿಸಲು ಹೋರಾಟ ನಡೆಸುತ್ತೇವೆ’ ಎಂದಿದ್ದಾರೆ.

‘ಜನಗಣತಿಯಿಂದ ವಿಳಂಬ’

‘ವೇತನ ಪಾವತಿಯಲ್ಲಿ ವಿಳಂಬವಾಗಿದೆ ಎಂಬುದರ ಬಗ್ಗೆ ನಮಗೆ ಯಾವುದೇ ದೂರು ಬಂದಿಲ್ಲ. ಜನಗಣತಿ ಕಾರಣಕ್ಕೆ ಕೆಲವರಿಗೆ ಪಾವತಿ ವಿಳಂಬವಾಗಿರಬಹುದು’ ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ‘ಪ್ರಜಾವಾಣಿ’ಗೆ ಹೇಳಿದರು.

‘ಹೊಸ ಆರ್ಥಿಕ ವರ್ಷದ ಕಾರಣಕ್ಕೆ ಕೆಲವರಿಗೆ ವೇತನ ಪಾವತಿಯಲ್ಲಿ ವಿಳಂಬವಾಗಿರಬಹುದು. ಆದರೆ ಹಲವು ಮಂದಿಯನ್ನು ಜನಗಣತಿ ತರಬೇತಿ ಮತ್ತು ಮನೆಗಣತಿಗೆ ನಿಯೋಜನೆ ಮಾಡಲಾಗಿದೆ. ಈ ಕಾರಣದಿಂದ ಖಜಾನೆ ಇಲಾಖೆಯಲ್ಲಿ ಬಿಲ್ ಪಾಸಾಗದೇ, ವಿಳಂಬವಾಗಿರುವ ಸಾಧ್ಯತೆಯೇ ಹೆಚ್ಚು’ ಎಂದು ವಿವರಿಸಿದರು.

ಆಕಾಶವಾಣಿ ಸುದ್ದಿ ವಿಭಾಗ ಸ್ಥಳಾಂತರ ನಿರ್ಧಾರಕ್ಕೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಧಾರವಾಡ ಆಕಾಶವಾಣಿ ಪ್ರಾದೇಶಿಕ ಕೇಂದ್ರದ ಸುದ್ದಿ ವಿಭಾಗವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ನಿರ್ಧಾರವನ್ನು ಪ್ರಸಾರ ಭಾರತಿ ಹಿಂತೆಗೆದುಕೊಂಡಿದೆ.

ಸುದ್ದಿ ವಿಭಾಗವನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಪ್ರಸಾರ ಭಾರತಿ ಸಕ್ಷಮ ಪ್ರಾಧಿಕಾರ ನಿರ್ಣಯಿಸಿತ್ತು. ಇದಕ್ಕೆ ಉತ್ತರ ಕರ್ನಾಟಕದ ಜನರಿಂದ ವಿರೋಧ ವ್ಯಕ್ತವಾಗಿತ್ತು. ಈ ಕಾರಣದಿಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಸಂಪರ್ಕಿಸಿ ಆಕಾಶವಾಣಿ ಕೇಂದ್ರವನ್ನು ಧಾರವಾಡದಲ್ಲೇ ಮುಂದುವರಿಸುವಂತೆ ಕೋರಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
ಸಂಖ್ಯೆ:ಎಸ್‌ಯುಪಿ(1)C-30/2026-27 ದಿನಾಂಕ: 08.04.2026
ಟೆಂಡರ್ ಅಧಿಸೂಚನೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಔಷಧಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 16.05.2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಸಂಪರ್ಕಿಸಲು ಕೋರಿದೆ.
Tender number : DHFWS/2026-27/IND2423
ಸಹಿ/– ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
DIPR/DK/KSMCA/117/26-27 dt. 22.04.2026

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ" ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027. ಫೋನ್: 080–22483641
ಸಂಖ್ಯೆ: KSBCL/ADM-11-89/2026-27 ದಿನಾಂಕ:22.04.2026
ಇ–ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು (ಕೆ.ಎಸ್.ಬಿ.ಸಿ.ಎಲ್) ಬೆಂಗಳೂರು ಇವರು **ಕರ್ನಾಟಕದಲ್ಲಿ ಗೋದಾಮುಗಳ ನಿರ್ಮಾಣಕ್ಕಾಗಿ ವಿನ್ಯಾಸ ಮತ್ತು ನಿರ್ಮಾಣ, ಮೇಲ್ವಿಚಾರಣಾ ಸಲಹೆಗಾರರನ್ನು ನೇಮಿಸಿಕೊಳ್ಳಲು** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.
ಟೆಂಡರ್ ವೇಳಾ ಪಟ್ಟಿ:
1. ಸಮಾಲೋಚನಾ ಅವಧಿ: **36 ತಿಂಗಳು**. 2. ಪ್ರಸ್ತಾವನೆಗಳ ಪೂರ್ವಭಾವಿ ಸಭೆ: **06.05.2026 ರಂದು ಮಧ್ಯಾಹ್ನ 3:00 ಗಂಟೆಗೆ.** 3. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ಆನ್‌ಲೈನ್): **02.06.2026 ರಂದು ಸಂಜೆ 5:30 ಗಂಟೆಯವರೆಗೆ.** 4. ಪ್ರಸ್ತಾವನೆಗಳನ್ನು ತೆರೆಯುವುದು: **04.06.2026 ರಂದು ಸಂಜೆ 4:30 ಗಂಟೆಗೆ.** ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ : www.kppp.karnataka.gov.in ಭೇಟಿ ನೀಡಿ ಪಡೆಯಬಹುದು.
ಸಹಿ/–
ವಾಸಾಸಂಇ/ವಾಪ್ರ/ಜಿಎ/296/2026–27 ಕಾರ್ಯನಿರ್ವಾಹಕ ನಿರ್ದೇಶಕರು (ಆ & ಮೂ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.8. “ಸಂಪರ್ಕ ಸೌಧ”, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000 Website: www.krdcl.in
ಇ–ಮೇಲ್: e-mail: mdkrdcl@gmail.com & cekrdcl@gmail.com
ಸಂ:ಕೆಆರ್‌ಡಿಸಿಎಲ್/ಐಎಫ್‌ಬಿ/2026–27/02 ದಿನಾಂಕ: 09.04.2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆಆರ್‌ಡಿಸಿಎಲ್) ಕೆಳಗೆ ವಿವರಿಸಿದಂತೆ ದ್ವಿ ಲಕೋಟೆ (Tow Cover System) ಪದ್ಧತಿಯಲ್ಲಿ ಟೆಂಡರ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಆಯ್ಕೆಯು ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ ವಿಧಾನ (QCBS) ಅನ್ನು ಆಧರಿಸಿರುತ್ತದೆ.
ಕೆಲಸದ ಹೆಸರು: ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ರಸ್ತೆ ಸಂಖ್ಯೆ 06ಕ್ಕೆ ಮರುಮೌಲ್ಯಮಾಪನ ಅಧ್ಯಯನಗಳು, ಡಿಪಿಆರ್ ತಯಾರಿಕೆ (ಹಂತ-II) ಸೇರಿದಂತೆ ಸಲಹಾ ಸೇವೆಗಳು. ಕರ್ನಾಟಕದ ಬೆಂಗಳೂರು ನಗರ/ಗ್ರಾಮೀಣ ಜಿಲ್ಲೆಯ ನೆಲಮಂಗಲ ಬಿಡದಿ ರಸ್ತೆಯ (ಹಳೆಯ NH-4 ರಸ್ತೆಯ ವಿಶ್ವನಾಥಪುರ ಜಂಕ್ಷನ್‌ನಿಂದ ತಾವರೆಕೆರೆ ಮೂಲಕ ಬಿಡದಿಯವರೆಗೆ) ಅಭಿವೃದ್ಧಿ. ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ) (GST ಸೇರಿದಂತೆ): **35,00,000/–**. ಇಎಂಡಿ (ರೂ.ಗಳಲ್ಲಿ): **35,000/–**. ಅಂದಾಜು ಉದ್ದ (ಕಿ.ಮೀ.ಗಳಲ್ಲಿ): **42.** ಸೇವೆಗಳ ಅವಧಿ: **30 ದಿನಗಳು.**
1. ಆಸಕ್ತ ಅರ್ಜಿದಾರರು ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಬಿಡ್‌ಗಳು ಮತ್ತು ಇಎಂಡಿಯನ್ನು ಅನ್‌ಲೈನ್ ನಲ್ಲಿ ಸಲ್ಲಿಸಬಹುದು. 2. ವಿವಿಧ ಚಟುವಟಿಕೆ ದಿನಾಂಕಗಳ ವೇಳಾಪಟ್ಟಿಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದು.
ಸೂಚನೆ: ಇನ್ನುಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆಗಳು ಅಥವಾ ತಿದ್ದುಪಡಿಗಳಿದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಳವಡಿಸಲಾಗುವುದು.
ಸಹಿ/– ಮುಖ್ಯ ಅಭಿಯಂತರರು ಕರಅನಿನಿ, ಬೆಂಗಳೂರು
DIPR/CP/RO293/AAPL/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ
ಬೆಂಗಳೂರು ನಗರ ಜಿಲ್ಲೆ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು 560038
ದೂರವಾಣಿ ಸಂಖ್ಯೆ : 080–25202265, ಇ–ಮೇಲ್ : dhobangaloreurban@gmail.com
ಸಂಖ್ಯೆ : ಜಿ.ಆ.ಕು.ಕ/ಅಭಿವೃದ್ಧಿ/ಟೆಂಡರ್/01/2026–27 ದಿನಾಂಕ: 17/04/2026
ಇ–ಟೆಂಡರ್ ಪ್ರಕಟಣೆ
ಟೆಂಡರ್ ಅಧಿಸೂಚನೆ ಸಂಖ್ಯೆ : DHO/DEV/TENDER/01/2026-27, ದಿನಾಂಕ: 17.04.2026
2026–27 ನೇ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ವ್ಯಾಪ್ತಿಯ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಗಳಲ್ಲಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸರ್ಕಾರದ ಮಾರ್ಗಸೂಚಿಗಳನ್ವಯ ಖಾಲಿ ಇರುವ ಅವಶ್ಯ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಗುತ್ತಿಗೆ ಆಧಾರದಡಿ ನೇಮಿಸಲು ಕೆಟಿಪಿಪಿ ನಿಯಮಾನುಸಾರ E-Procurement ಮುಖಾಂತರ ಟೆಂಡರ್‌ನ್ನು ಕರೆದಿದ್ದು https://kppp.karnataka.gov.in ಇ–ಪೋರ್ಟಲ್ ಮುಖಾಂತರ ಆಸಕ್ತಿಯುಳ್ಳ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್‌ನ್ನು ಇ–ಪೋರ್ಟಲ್ ಮುಖಾಂತರ ದಿನಾಂಕ: 18.04.2026 ರಿಂದ ದಿನಾಂಕ: 16.05.2026 ರಂದು ಮಧ್ಯಾಹ್ನ 03:00 ಗಂಟೆವರೆಗೂ ಸಲ್ಲಿಸಬಹುದಾಗಿರುತ್ತದೆ, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಹಳೇ ಟಿ ಬಿ ಆಸ್ಪತ್ರೆ ಆವರಣ, ಇಂದಿರಾನಗರ, ಬೆಂಗಳೂರು–560038 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಂಗಳೂರು ನಗರ ಜಿಲ್ಲೆ
DIPR/CP/286/Zen/2026-27

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
KUIDFC
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಗರಾಭಿವೃದ್ಧಿ ಭವನ, ನಂ.22, 17ನೇ ‘ಎಫ್’ ಕ್ರಾಸ್, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿ.ಎಂ.ಟಿ.ಸಿ ಡಿಪೋ ಹತ್ತಿರ, ಬೆಂಗಳೂರು–560038. ಫೋ.ನಂ.: 080–25196124 । ಇ–ಮೇಲ್: info@kuidfc.com, ವೆಬ್‌ಸೈಟ್:www.kuidfc.com
ಸಂಖ್ಯೆ: ಕೆಯುಐಡಿಎಫ್‌ಸಿ/ಅಡಳಿತ/ಯುಐಬಿ/HVAC-CAMC/2025–26 ದಿನಾಂಕ: 22.04.2026
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (3ನೇ ಕರೆ)
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
ಕೆಯುಐಡಿಎಫ್.ಸಿ ಸಂಸ್ಥೆಯು ಈ ಕೆಳಕಂಡ ಸೇವೆಯನ್ನು ಒದಗಿಸಲು ಅರ್ಹ ಗುತ್ತಿಗೆದಾರ ರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್ ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

Sl. No.	Name of Work	Earnest Money Deposit in Rs
1	Providing Comprehensive AMC HVAC (Heat Ventilation and Air – Conditioning) System for 3 years at Nagarabhivruddhi Bavana KUIDFC.	50,000/-

ಟೆಂಡರ್ ಆಹ್ವಾನಿಸುವ ದಿನಾಂಕ: 22.04.2026. ಬಿಡ್ ಪೂರ್ವಭಾವಿ ಸಭೆಯ **ದಿನಾಂಕ & ಸಮಯ: 06.05.2026ರ ಪೂರ್ವಾಹ್ನ 11:00 ಗಂಟೆಗೆ,** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ & ಸಮಯ: 13.05.2026ರ ಅಪರಾಹ್ನ 05:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ & ಸಮಯ: 15.05.2026ರ ಪೂರ್ವಾಹ್ನ 11.00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ & ಸಮಯ: 20.05.2026ರ ಪೂರ್ವಾಹ್ನ 11.00 ಗಂಟೆಗೆ.** ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ಆಡಳಿತ) ಕೆಯುಐಡಿಎಫ್‌ಸಿ, ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/290/2026–27

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ/ಎಸ್.ಸಿ(ಎಫ್)/ಪವನ ವಿದ್ಯುತ್ ದರ/2025/1894 ದಿನಾಂಕ: 21.04.2026
ಸೂಚನೆ
ವಿಷಯ: “ಪವನ ವಿದ್ಯುತ್ ಯೋಜನೆಗಳಿಗೆ ಬಿಡ್ಸ್ ಕರೆಯುವ ಆ.ವ. 2026–2027 ರಿಂದ ಆ.ವ. 2028–2029 ರವರೆಗೆ ಸಾಮಾನ್ಯ ದರ (Generic Tariff) ನಿಗದಿಪಡಿಸುವ ಕುರಿತು.”
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು **“ಪವನ ವಿದ್ಯುತ್ ಯೋಜನೆಗಳಿಗೆ ಬಿಡ್ಸ್ ಕರೆಯುವ ಆ.ವ. 2026–2027 ರಿಂದ ಆ.ವ. 2028–2029 ರವರೆಗೆ ಸಾಮಾನ್ಯ ದರ (Generic Tariff) ನಿಗದಿಪಡಿಸುವ ಕುರಿತು”** ಚರ್ಚಾಪತ್ರವನ್ನು ಹೊರಡಿಸಿ ಆಸಕ್ತದಿಂದ ಲಿಖಿತ ಆಕ್ಷೇಪಣೆಗಳು / ಅಭಿಪ್ರಾಯಗಳು / ಸಲಹೆಗಳನ್ನು ಆಹ್ವಾನಿಸಿತ್ತು.
ಈ ವಿಷಯದಲ್ಲಿ ಆಯೋಗವು ಸಾರ್ವಜನಿಕ ವಿಚಾರಣೆಯನ್ನು ನಡೆಸಲು ನಿಶ್ಚಯಿಸಿದ್ದು, ಅದು ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ **ದಿನಾಂಕ: 28.04.2026ರಂದು ಮಧ್ಯಾಹ್ನ 03.00 ಘಂಟೆಗೆ** ನಡೆಯಲಿದೆ. ಆಸಕ್ತ ವ್ಯಕ್ತಿಗಳು / ಭಾಗೀದಾರರು ಸದರಿ ಸಾರ್ವಜನಿಕ ವಿಚಾರಣೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸಲ್ಲಿಸಬಹುದಾಗಿದೆ. ಕ.ವಿ.ನಿ.ಆ.ದ ವೆಬ್‌ಸೈಟ್ https://kerc.karnataka.gov.in ನಲ್ಲಿ ಮೇಲೆ ತಿಳಿಸಿರುವ ಚರ್ಚಾಪತ್ರವು ಲಭ್ಯವಿರುತ್ತದೆ.
ಸಹಿ/– ಕಾರ್ಯದರ್ಶಿ
DIPR/CP/YC/303/2026-27 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

“ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಬಳ್ಳಾರಿ–583101”
Gmail: ka.ballari.dudc@gmail.com
ಸಂ.ಜಿನಕೋಬ/ತಾಂತ್ರಿಕ/ಡಿ.ಎಂ.ಎಫ್/ಇ–ಆಕ್ಷನ್/ಟೆಂಡರ್/2026–27
ದಿನಾಂಕ : 16.04.2026
ಟೆಂಡರ್ ಪ್ರಕಟಣೆ
ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿಯಲ್ಲಿ 2026–27ನೇ ಸಾಲಿನ ಜಿಲ್ಲಾ ಖನಿಜನಿಧಿಯಡಿ ಲಭ್ಯವಿರುವ ಎಂಡೋಮೆಂಟ್ ಮೊತ್ತ ರೂ.2056.00 ಕೋಟಿಗಳನ್ನು Public Sector/ RRB ಬ್ಯಾಂಕ್ ಗಳಲ್ಲಿ ನಿಯಮಾನುಸಾರ ಸ್ಥಿರ ಠೇವಣಿ ಮಾಡಲು ನಿರ್ಧರಿಸಲಾಗಿದ್ದು, ಈ ಸಂಬಂಧ ಕೆ.ಪಿ.ಪಿ. ಪೋರ್ಟಲ್ ಮುಖಾಂತರ Auction Notice Number:DMA/2026-27/AUCTION6415 E-Auction ಆಹ್ವಾನಿಸಲಾಗಿದೆ.
ಆಸಕ್ತಿ Public Sector/ RRB ಬ್ಯಾಂಕ್‌ಗಳು ಸದರಿ E-Auction ನಲ್ಲಿ ಭಾಗವಹಿಸಲು ಕೋರಿದೆ. Auction Notice Number:DMA/2026-27/AUCTION6415 ದಸ್ತಾವೇಜುಗಳನ್ನು https://kppp.karnataka.gov.in/ ವೆಬ್‌ಸೈಟ್‌ನಲ್ಲಿ ದಿನಾಂಕ: 13.04.2026 ರಿಂದ 02.05.2026 ರ ಸಂಜೆ 5:30 ರವರೆಗೆ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
Events/Schedule: 1.E- Auction Published Date : **16.04.2026 11.30 AM.** 2.Date of uploading bid Documents in e-portal: **16.04.2026 11.30 AM.** 3.Pre auction Meeting @ DMFT Cell, New DC Office Bly: **27-04-2026 11.30 AM.** 4.Last Date And Time For Submit the Query: **24-04-2026 11.30 AM.** 5.Last date to upload the Declaration in Schedule A & B along with adhering documents as requested.: **05-05-2026 5.30 PM.** 6.Evaluation of documents: **07.05.2026 @ 10:00 AM.** 7.E-Auction Start & End Date: **08-05-2026 @ 10:00 AM TO 08-05-2026 03.00 PM.** 8.Probable date of Investment confirmation to selected bank: **2nd Week of May-2026**
E-Auction ಗೆ ಸಂಬಂಧಿಸಿದ ಹೆಚ್ಚಿನ ವಿವರ ಹಾಗೂ ಮಾಹಿತಿಗಾಗಿ ವಿಶೇಷಾಧಿಕಾರಿಗಳು, ಜಿಲ್ಲಾ ಖನಿಜ ಪ್ರತಿಷ್ಠಾನಟ್ರಸ್ಟ್, ಜಿಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಇವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ (ದೂರವಾಣಿಸಂಖ್ಯೆ: 08392–295468)
ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿಕೋಶ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/76

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–06/869/2026–27 ದಿನಾಂಕ: 22.04.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : 1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಹಂತ–1ರಲ್ಲಿ ರಸ್ತೆಗಳ ಬಲವರ್ಧನೆ, ಕಲ್ವರ್ಟ್‌ಗಳು ಹಾಗೂ ಚರಂಡಿಗಳ ನಿರ್ಮಾಣ ಮತ್ತು ನೀರು ಸರಬರಾಜು ವಿತರಣಾ ಜಾಲ ಸೇರಿದಂತೆ ಕೈಗಾರಿಕಾ ಬಡಾವಣೆಯ ಸುಧಾರಣೆ ಮಾಡುವ ಕಾಮಗಾರಿ.
2) ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಬೊಮ್ಮಸಂದ್ರ ಜಿಗಣಿ ಲಿಂಕ್ ರಸ್ತೆ ಕೈಗಾರಿಕಾ ಪ್ರದೇಶದಲ್ಲಿ 12 ಮೀ ಅಗಲ ಮತ್ತು 18 ಮೀ ಅಗಲದ ರಸ್ತೆಗಳು ಸೇರಿದಂತೆ ಫ್ಲೆಕ್ಸಿಬಲ್ ಪೇವ್‌ಮೆಂಟ್ ಪುನರ್‌ನಿರ್ಮಾಣ ಮತ್ತು ಮರು ಡಾಂಬರೀಕರಣ, ಆರ್‌ಸಿಸಿ ರಸ್ತೆ ಬದಿ ಚರಂಡಿ, ಆರ್‌ಸಿಸಿ ಅಡ್ಡ ಚರಂಡಿ ನಿರ್ಮಾಣ ಮತ್ತು ಹಾಲಿಯಿರುವ ಚರಂಡಿಗಳ ನಿರ್ವಹಣೆ ಸೇರಿದಂತೆ ಕೈಗಾರಿಕಾ ಬಡಾವಣೆಗೆ ಸುಧಾರಣೆ ಮಾಡುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11.05.2026 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/305/Zen/2026-27

ಕಲಬುರಗಿ ಮಹಾನಗರ ಪಾಲಿಕೆ
ದೂ.: 08472/ 278675 ಫ್ಯಾಕ್ಸ : 08472 / 260776 ಇ ಮೇಲ್– itstaff_ulb_gulbarga@yahoo.com
ಸಂಖ್ಯೆಃಕಮಪಾ/ಆಶಾ/ಎಸ್.ಡಬ್ಲ್ಯೂ.ಎಂ./2026–27 ದಿನಾಂಕಃ 22.04.2026
:: ಟೆಂಡರ ಪ್ರಕಟಣೆ ::
ವಿಷಯ ಃ~ ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿಯಲ್ಲಿ ಈ ಕೆಳಗಿನ ಕಾಮಗಾರಿಗಳ ಟೆಂಡರ ಆಹ್ವಾನಿಸಲಾಗಿರುತ್ತದೆ.
1) **ಕಾಮಗಾರಿ ವಿವರ:** 1. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ–1 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ DMA/2026-27/SE7626, ಇ.ಎಂ.ಡಿ. ಃ ರೂ. 6,73,198/–
2. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ–2 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ DMA/2026-27/SE7644, ಇ.ಎಂ.ಡಿ. ಃ ರೂ.6,46,881/–
3. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ–3 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ DMA/2026-27/SE7645 ಇ.ಎಂ.ಡಿ. ಃ ರೂ.6,47,486/–
4. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಇನ್ನಿತರ ವಾಹನಗಳಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ DMA/2026-27/SE7647, ಇ.ಎಂ.ಡಿ. ಃ ರೂ.4,69,434/–
2) ಟೆಂಡರ ಸ್ಪಷ್ಟೀಕರಣ ಅಂತಿಮ ದಿನಾಂಕಃ **08.05.2026**, ಸಮಯ ಃ ಸಾಯಂಕಾಲ 4.00 ಗಂಟೆಗೆ, 3) ಟೆಂಡರ ಸಲ್ಲಿಸಲು ಅಂತಿಮ ದಿನಾಂಕಃ **11.05.2026** ಸಮಯ ಃ ಸಾಯಂಕಾಲ 4.30 ಗಂಟೆಗೆ, 4) ತಾಂತ್ರಿಕ್ ಬಿಡ್ ತೆರೆಯುವ ದಿನಾಂಕ ಃ **12.05.2026** ಸಮಯ ಃ ಸಾಯಂಕಾಲ ಃ 4.35 ಗಂಟೆಗೆ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕಃ **14.05.2026** ಸಮಯ ಃ ಬೆಳಿಗ್ಗೆ 11.00 ಗಂಟೆಗೆ, 6) ಪ್ರಿ ಬಿಡ್ ಸಭೆ ವಿವರ: **ದಿನಾಂಕ ಃ 04.05.2026 ಸಮಯ ಃ ಬೆಳಿಗ್ಗೆ 11.00 ಗಂಟೆಗೆ** ಸ್ಥಳ ಃ ಕೋಣೆ ಸಂಖ್ಯೆಃ 44 ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ ಟ್ಯಾಂಕ ಬಂಡ್ ರೋಡ, ಜಗತ್ತ ಕಲಬುರಗಿ–585101, 7) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಸಹಾಯಕ ಕಾರ್ಯಪಾಲಕ ಅಭಿಯಂತರರು, (ಪರಿಸರ), ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ. 8) ಅಂತರಜಾಲ ತಾಣದ ವಿಳಾಸ: http://kppp.karnataka.gov.in
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/63/ಕೆ.ಎಸ್.ಎಂ.ಸಿ.&ಎ/2026–27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಒಳ್ಳೆಯ ಸಲಹೆ ಕೊಡುವವರಿಗೆ ಗಿರಾಕಿಗಳ ಅಭಾವ ಎಂದೂ ಇರುವುದಿಲ್ಲ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ನಿಯಮಗಳ ಚೌಕಟ್ಟಿಗೆ ಚಾರಣ ಶಿಸ್ತಿನೊಂದಿಗೆ ಸುರಕ್ಷತೆಗೆ ಒತ್ತು

ಚಾರಣಕ್ಕಾಗಿ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಜಾರಿಗೆ ತಂದಿರುವ ರಾಜ್ಯ ಸರ್ಕಾರದ ನಿರ್ಧಾರ, ಚಾರಣಿಗರ ಸುರಕ್ಷತೆ ಮತ್ತು ಪರಿಸರದ ಮೇಲಿನ ಒತ್ತಡವನ್ನು ನಿರ್ವಹಿಸುವ ದೃಷ್ಟಿಯಿಂದ ಅಗತ್ಯವಾಗಿದ್ದ ಕ್ರಮ. 'ಸಾಹಸ ಪ್ರವಾಸೋದ್ಯಮ'ವು ರಾಜ್ಯದಲ್ಲಿ ನಿಯಂತ್ರಣ ಮೀರಿ ಬೆಳೆದಿರುವ ಹಿನ್ನೆಲೆಯಲ್ಲಿ, ಅದಕ್ಕೊಂದು ನಿರ್ದಿಷ್ಟ ಕಾನೂನು ಚೌಕಟ್ಟು ಒದಗಿಸುವ ನಿಟ್ಟಿನಲ್ಲಿ ಎಸ್‌ಒಪಿಗೆ ಮಹತ್ವವಿದೆ. ಇದು, ನಿರ್ಲಕ್ಷ್ಯದಿಂದ ಕೂಡಿದ ಅನ್ವೇಷಣಾ ಪ್ರವೃತ್ತಿಯನ್ನು ಜವಾಬ್ದಾರಿಯುತ ಹಾಗೂ ಕ್ರಮಬದ್ಧಗೊಳಿಸಲಿದೆ. ಚಾರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತ್ವರಿತವಾಗಿ ಸುಧಾರಣಾ ಕ್ರಮಗಳನ್ನು ರೂಪಿಸಲು ಇತ್ತೀಚೆಗೆ ಸಂಭವಿಸಿದ ದುರ್ಘಟನೆಗಳು ಕಾರಣವಾಗಿವೆ. ಕೊಡಗಿನ ತಡಿಯಾಂಡಮೋಳ್ ಪರ್ವತ ಚಾರಣದ ವೇಳೆ ಕೇರಳದ ಯುವತಿ ನಾಪತ್ತೆಯಾಗಿ, ಮೂರು ದಿನಗಳ ನಂತರ ಪತ್ತೆಯಾಗಿದ್ದರು. ಚಿಕ್ಕಮಗಳೂರಿನ ಮಾಣಿಕ್ಯಧಾರಾ ಬಳಿ ಕಣ್ಮರೆಯಾಗಿದ್ದ ಬಾಲಕಿ, ಶವವಾಗಿ ಪತ್ತೆಯಾಗಿದ್ದಳು. ಈ ಘಟನೆಗಳು ಸುರಕ್ಷತೆಗೆ ಸಂಬಂಧಿಸಿದ ಶಿಷ್ಟಾಚಾರ ಮತ್ತು ಸಮನ್ವಯದಲ್ಲಿ ಇರುವ ಗಂಭೀರ ಲೋಪಗಳನ್ನು ಹಾಗೂ ಚಾರಣ ಮಾರ್ಗಗಳ ಮೇಲಿದ್ದ ಅತೀವ ಒತ್ತಡವನ್ನು ಸೂಚಿಸುವಂತಿದ್ದವು. ಪ್ರಸಕ್ತ ಎಸ್‌ಒಪಿ, 'ಮಾರ್ಗದರ್ಶಿ ಇಲ್ಲದೆ ಚಾರಣ ಇಲ್ಲ' ಎನ್ನುವ ಸರಳ ನಿಯಮದಿಂದ ಕೂಡಿದೆ. ಚಾರಣ ಕೈಗೊಳ್ಳುವ ವ್ಯಕ್ತಿ ಅಥವಾ ತಂಡ ಅರಣ್ಯ ಇಲಾಖೆಯ ಮಾನ್ಯತೆ ಹೊಂದಿರುವ ಮಾರ್ಗದರ್ಶಕನನ್ನು ಹೊಂದುವುದು ಕಡ್ಡಾಯವಾಗಿದ್ದು, ಪ್ರತಿ ಹತ್ತು ಚಾರಣಿಗರಿಗೆ ಓರ್ವ ಮಾರ್ಗದರ್ಶಕ ಎನ್ನುವ ಅನುಪಾತ ಗೊತ್ತುಪಡಿಸಲಾಗಿದೆ. ಅರಣ್ಯ ಇಲಾಖೆಯ ಅನುಮೋದಿತ ಪಥಗಳಲ್ಲಿ ದಿನಕ್ಕೆ 150 ಚಾರಣಿಗರಿಗಷ್ಟೇ ಚಾರಣ ಕೈಗೊಳ್ಳಲು ಅವಕಾಶ ನೀಡಿದ್ದು, 'ಅರಣ್ಯ ವಿಹಾರ' ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ. ಜಿಪಿಎಸ್ ಆಧಾರಿತ ಟ್ರ್ಯಾಕಿಂಗ್, ಮಾರ್ಗದರ್ಶಕರ ನೆರವು ಮತ್ತು ಬೇಸ್ ಕ್ಯಾಂಪ್‌ಗಳ ನಡುವೆ ನಿರಂತರ ಸಂಪರ್ಕದಂತಹ ಕ್ರಮಗಳು ಚಾರಣವನ್ನು ವೃತ್ತಿಪರಗೊಳಿಸಲು ಪೂರಕವಾಗಿವೆ. ಹೊಸ ನಿಯಮಗಳು ಪರಿಸರದಲ್ಲಿ ಪ್ಲಾಸ್ಟಿಕ್‌ನಂಥ ತ್ಯಾಜ್ಯ ಚೆಲ್ಲುವುದನ್ನು ತಪ್ಪಿಸುವುದರ ಜೊತೆಗೆ, ಕ್ಯಾಂಪ್‌ಫೈರ್ ಹಾಗೂ ಅನುಮತಿಯಿಲ್ಲದ ರಾತ್ರಿ ವಾಸ್ತವ್ಯಗಳನ್ನು ನಿರ್ಬಂಧಿಸಲಿದೆ.

ಸುರಕ್ಷಿತ ಚಾರಣಕ್ಕೆ 'ಎಸ್‌ಒಪಿ' ಜಾರಿಗೊಳಿಸಿರುವ ರಾಜ್ಯ ಸರ್ಕಾರದ ಕ್ರಮ, ಚಾರಣಕ್ಕೆ ವೃತ್ತಿಪರತೆ ತಂದು ಕೊಡುವುದರೊಂದಿಗೆ ಪರಿಸರ ಸಂರಕ್ಷಣೆ ದೃಷ್ಟಿಯಿಂದಲೂ ಮಹತ್ವದ್ದಾಗಿದೆ.

ಸಾಹಸ ಪ್ರವಾಸದ ಪ್ರಮುಖ ರಾಜ್ಯಗಳಲ್ಲೊಂದಾಗಿ ಕರ್ನಾಟಕವನ್ನು ಗುರ್ತಿಸಲಾಗಿರುವ ಸಂದರ್ಭದಲ್ಲಿ ಚಾರಣಕ್ಕೆ ಸಂಬಂಧಿಸಿದಂತೆ ಎಸ್‌ಒಪಿ ಜಾರಿಗೊಳಿಸುವುದು ಅನಿವಾರ್ಯವಾಗಿತ್ತು. ಕುದುರೆಮುಖ, ಕುಮಾರ ಪರ್ವತ, ಮುಳ್ಳಯ್ಯನಗಿರಿ ಸೇರಿದಂತೆ ಪಶ್ಚಿಮಘಟ್ಟದ ಹಲವು ತಾಣಗಳಲ್ಲಿ ವಾರಾಂತ್ಯದಲ್ಲಿ ಚಾರಣಿಗರ ದಟ್ಟಣೆ ಉಂಟಾಗುತ್ತದೆ. ಈ ಮೊದಲು ಅಷ್ಟೇನೂ ಜನಪ್ರಿಯವಲ್ಲದ ಈ ಚಾರಣಸ್ಥಳಗಳು ಈಗ ಹೆಚ್ಚಿನ ಜನರನ್ನು ಆಕರ್ಷಿಸುತ್ತಿವೆ. ಕುಮಾರ ಪರ್ವತಕ್ಕೆ ಭೇಟಿ ಕೊಡುವವರ ಸಂಖ್ಯೆ ಕೆಲವೊಮ್ಮೆ ಸಾವಿರಕ್ಕೂ ಹೆಚ್ಚಾಗುತ್ತಿದ್ದು, ಈ ದಟ್ಟಣೆ ಅಲ್ಲಿನ ಭೌಗೋಳಿಕ ಸಾಮರ್ಥ್ಯವನ್ನು ಮೀರಿದ್ದಾಗಿದೆ. ಪ್ರಸ್ತುತ ಸರ್ಕಾರ ಜಾರಿಗೆ ತಂದಿರುವ ನಿಯಮಗಳು, ಉತ್ಸಾಹಿ ಚಾರಣಿಗರನ್ನು ನಿರುತ್ಸಾಹಗೊಳಿಸಬಹುದು. ಆದರೆ, ಪರಿಸರದ ವಾಸ್ತವಗಳೊಂದಿಗೆ ಸಮತೋಲನ ಸಾಧಿಸುವ ಕಾರಣದಿಂದಾಗಿ ನಿಯಮಗಳಿಗೆ ಬದ್ಧರಾಗುವುದು ಅನಿವಾರ್ಯ. ಈಗ ಹೆಚ್ಚಿನ ದಟ್ಟಣೆ ಎದುರಿಸುತ್ತಿರುವ ಪ್ರದೇಶಗಳ ಮೇಲಿನ ಒತ್ತಡವನ್ನು ತಗ್ಗಿಸಲಿಕ್ಕಾಗಿ, ಚಾರಣಕ್ಕೆ ಹೊಸ ಮಾರ್ಗಗಳನ್ನು ತೆರೆಯಬೇಕೆನ್ನುವ ಚರ್ಚೆಯೂ ಇದೆ. ಚಾರಣಿಗರ ವಿಕೇಂದ್ರೀಕರಣದಿಂದ ಸ್ಥಳೀಯ ಆರ್ಥಿಕತೆಗೂ ಅನುಕೂಲ ಎಂದು ಹೇಳುವವರಿದ್ದಾರೆ. ಆದರೆ, ಈವರೆಗೂ ಜನರಿಗೆ ತೆರೆದುಕೊಳ್ಳದ ಪ್ರದೇಶಗಳ ಮೇಲೆ ಅನಪೇಕ್ಷಿತ ಒತ್ತಡ ಸೃಷ್ಟಿಸುವುದು ಸರಿಯಲ್ಲ ಹಾಗೂ ಅವುಗಳ ನಿರ್ವಹಣೆಯೂ ಸುಲಭವಲ್ಲ ಎಂದು ಪರಿಸರವಾದಿಗಳು ವಾದಿಸುತ್ತಾರೆ.

ಸುರಕ್ಷಿತ ಚಾರಣಕ್ಕೆ ಸಮತೋಲನದ ದೃಷ್ಟಿಕೋನ ಅಗತ್ಯ. ಹೊಸ ಚಾರಣ ಮಾರ್ಗಗಳನ್ನು ಪರಿಚಯಿಸುವುದಕ್ಕಿಂತಲೂ, ಇರುವ ಅನಧಿಕೃತ ಮಾರ್ಗಗಳನ್ನು ಅಧಿಕೃತಗೊಳಿಸಿ ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಿಯಂತ್ರಣ ಸಾಧಿಸುವುದರಲ್ಲಿ ಹೆಚ್ಚಿನ ಅನುಕೂಲಗಳಿವೆ. ಪಾರಿಸರಿಕ ಸಂವೇದನೆಯನ್ನು ಆಧರಿಸಿ ಋತುಮಾನಕ್ಕೆ ಅನುಸಾರ ಪ್ರವೇಶ ಕಲ್ಪಿಸುವುದು ಹಾಗೂ ಅಪಾಯದ ಆಧಾರದ ಮೇಲೆ ಮಾರ್ಗಗಳನ್ನು ಗುರ್ತಿಸುವ ಮೂಲಕ ಸುರಕ್ಷತಾ ಕ್ರಮಗಳೊಂದಿಗೆ ರಾಜಿಯಾಗದೆಯೇ ಚಾರಣಕ್ಕೆ ಉತ್ತೇಜನ ನೀಡಬಹುದಾಗಿದೆ. ಚಾರಣದಲ್ಲಿ ಸ್ವಲ್ಪ ಮಟ್ಟದ ಅಪಾಯ ಸದಾ ಇದ್ದೇ ಇರುತ್ತದೆ ಎನ್ನುವುದು ಸುರಕ್ಷತಾ ಕ್ರಮಗಳ ಕೊರತೆಗೆ ಸಮರ್ಥನೆ ಆಗಬಾರದು. ಸರ್ಕಾರ ಪರಿಚಯಿಸಿರುವ ಹೊಸ ಮಾರ್ಗಸೂಚಿಗಳು, ಜವಾಬ್ದಾರಿಯುತ ಪ್ರವಾಸೋದ್ಯಮಕ್ಕೆ ಪ್ರವೇಶ ದೊರಕಿಸಿಕೊಡುವಷ್ಟಕ್ಕೆ ಸೀಮಿತವಾಗಿಲ್ಲ. ಶಿಸ್ತು, ಸಿದ್ಧತೆ ಮತ್ತು ಸೂಕ್ಷ್ಮ ಪರಿಸರದ ಮೇಲಿನ ಗೌರವದೊಂದಿಗೆ ಇದು ತಳಕು ಹಾಕಿಕೊಂಡಿದೆ.

ಚಾಟಿ

ಅಂಕಗಳಿಗೆ ಹೊಣೆ ಯಾರು?

ತೃತೀಯ ಭಾಷಾ ಪರೀಕ್ಷೆಗೆ ಅಂಕಗಳ ಬದಲಿಗೆ 'ಗ್ರೇಡ್' ನೀಡಲಾಗುವುದೆಂದು ಸರ್ಕಾರ ಆದೇಶಿಸಿದ ಬಳಿಕ ಎಷ್ಟೋ ವಿದ್ಯಾರ್ಥಿಗಳು ಆ ಪರೀಕ್ಷೆಯನ್ನು ಗಂಭೀರವಾಗಿ ತೆಗೆದುಕೊಳ್ಳದೆ ಬರೆದಿರಬಹುದು. ಈಗ ನ್ಯಾಯಾಲಯವು ಅಂಕಗಳನ್ನೇ ನೀಡಬೇಕೆಂದು ಹೇಳಿದೆ. ವಿದ್ಯಾರ್ಥಿಗಳು ಕಳೆದುಕೊಳ್ಳುವ ಅಂಕಗಳಿಗೆ ಹೊಣೆ ಯಾರು?

ರಾಮಚಂದ್ರ ಎಂ., 'ಎಕ್ಸ್'ನಿಂದ

ಕಿಡಿನುಡಿ

ಸಾರಿಗೆ ಸಂಸ್ಥೆಯ ಇಂದಿನ ದುಃಸ್ಥಿತಿಗೆ ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿಯವರ ಕಾಲದ ಅದಕ್ಷ ಆಡಳಿತವೇ ಕಾರಣ. ಅಂದು ಅಧಿಕಾರದ ಅಮಲಿನಲ್ಲಿ ಬಿಜೆಪಿಯು ನೌಕರರ ಹೊಟ್ಟೆಯ ಮೇಲೆ ಹೊಡೆಯಿತು. ಈಗ ನಮ್ಮ ಸರ್ಕಾರಕ್ಕೆ ಉಪದೇಶ ಮಾಡುವ ನೈತಿಕತೆ ಇದೆಯೆ?

ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

25 ವರ್ಷಗಳ ಹಿಂದೆ
ಸೋಮವಾರ, 23-4-2001

ಯೋಧರ ಭೀಕರ ಹತ್ಯೆ: ವಿಷಾದ ವ್ಯಕ್ತಪಡಿಸಿದ ಬಾಂಗ್ಲಾ ಪ್ರಧಾನಿ

ನವದೆಹಲಿ, ಏ. 22 (ಪಿಟಿಐ)– ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಇಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಭಾರತ–ಬಾಂಗ್ಲಾದೇಶದ ಗಡಿಯಲ್ಲಿ ಹತ್ಯೆಗೀಡಾಗಿರುವ 16 ಮಂದಿ ಬಿಎಸ್‌ಎಫ್ ಯೋಧರಿಗೆ ಚಿತ್ರಹಿಂಸೆ ನೀಡಿರುವ ಬಗ್ಗೆ ಸಮಗ್ರ ತನಿಖೆ ನಡೆಸುವುದಾಗಿ ಭರವಸೆ ನೀಡಿದರು.

ಅವರಿಬ್ಬರ ಮಾತುಕತೆ 30 ನಿಮಿಷ ನಡೆಯಿತು. ಘಟನೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದ ಹಸೀನಾ ಅವರು, ಎಲ್ಲ ವಿಷಯಗಳ ಬಗ್ಗೆ ಸಮಗ್ರ ತನಿಖೆ ನಡೆಸುವ ಭರವಸೆ ನೀಡಿದರು ಎಂದು ಪ್ರಧಾನಿ ಕಚೇರಿಯ ಮೂಲಗಳು ತಿಳಿಸಿವೆ.

75 ವರ್ಷಗಳ ಹಿಂದೆ
ಸೋಮವಾರ, 23-4-1951

ನಿಷೇಧಾಜ್ಞೆ ವಿರುದ್ಧ ಪರ್ಷಿಯಾ ವಿದ್ಯಾರ್ಥಿಗಳ ಮೆರವಣಿಗೆ

ಟೆಹರಾನ್, ಏ. 22– ಸರ್ಕಾರದ ನಿಷೇಧಾಜ್ಞೆ ಎದುರಿಸಿ ಪರ್ಷಿಯಾ ವಿದ್ಯಾರ್ಥಿ ಪ್ರದರ್ಶಕರು ಮೈಲುದ್ದದ ಮೆರವಣಿಗೆಯಲ್ಲಿ ಟೆಹರಾನ್‌ನಲ್ಲಿರುವ ಮಜಿಲ್ಸ್ (ಪಾರ್ಲಿಮೆಂಟ್) ಕಟ್ಟಡದತ್ತ ನಡೆದರು.

ರಾಜಧಾನಿಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೋಗಿ, ಖುಜಿಸ್ತಾನ್ ಎಣ್ಣೆ ಪ್ರದೇಶದ ಮತ್ತು ಇಸಾಫಹಾನ್‌ಗಳಲ್ಲಿ ಈಚೆಗೆ ನಡೆದ ಮುಷ್ಕರಗಳಲ್ಲಿ ಹತರಾದ ಮುಷ್ಕರಕಾರರ ಉದ್ಯೋಗಾಭ್ಯಾಸಿಗಳೊಡನೆ ಸಹಾನುಭೂತಿ ವ್ಯಕ್ತಪಡಿಸಿದರು.

ಪ್ರದರ್ಶನ ನಿಷೇಧಿಸಿ ಒಳಾಡಳಿತ ಸಚಿವರ ಆಜ್ಞೆಯಿದ್ದರೂ ಸಹ ವಿದ್ಯಾರ್ಥಿಗಳು ಇಂದು ವಿಶ್ವವಿದ್ಯಾನಿಲಯದ ಬಳಿ ಸೇರಿ ಪ್ರಕಟಣೆ ಪತಾಕೆಗಳನ್ನು, ಏಪ್ರಿಲ್ 12ರಂದು ಮೃತರಾದ 12 ಮಂದಿಯಲ್ಲಿ ಕೆಲವರ ದೊಡ್ಡ ಚಿತ್ರಗಳನ್ನು ಹಿಡಿದುಕೊಂಡು ಹೊರಟರು. 'ತೈಲಕ್ಷೇತ್ರ ರಾಷ್ಟ್ರೀಕರಣವಾಗಲಿ', 'ಬ್ರಿಟಿಷ್ ಯುದ್ಧ ನೌಕೆ ಪರ್ಷಿಯಾ ತೀರ ಬಿಟ್ಟು ಹೋಗಲಿ' ಎಂಬ ಕೇಳಿಕೆಗಳು ಧ್ವನಿವರ್ಧಕಗಳಲ್ಲಿ ಮೊಳಗುತ್ತಿದ್ದವು.

ಹೊಸ ಒಡಂಬಡಿಕೆಯ ಕಾಲ

ವಿಶ್ಲೇಷಣೆ

ಯೋಗೇಂದ್ರ ಯಾದವ್

> ಭಾರತದ ಚುನಾವಣಾ ನಕಾಶೆ ಬದಲಿಸುವ ದುರುದ್ದೇಶದ ರಾಜಕೀಯ ಪ್ರಯತ್ನಕ್ಕೆ ಸೋಲಾಗಿರುವ ಸಂದರ್ಭದಲ್ಲಿ 'ಯಜಮಾನಿಕೆ ಇಲ್ಲದ ಒಡಂಬಡಿಕೆ' ಮುನ್ನೆಲೆಗೆ ಬರಬೇಕು. ಈ ಒಡಂಬಡಿಕೆ ಹಿಂದಿ ಪ್ರಾಬಲ್ಯವನ್ನು ಇಲ್ಲವಾಗಿಸುವುದರೊಂದಿಗೆ, ಸಾಂಸ್ಕೃತಿಕ ವೈವಿಧ್ಯವನ್ನು ಒಪ್ಪಿಕೊಂಡು ಗೌರವಿಸುವಂತಹದ್ದು.

ಮಹಿಳಾ ಮೀಸಲಾತಿ ಹೆಸರಿನಲ್ಲಿ ಚುನಾವಣಾ ನಕಾಶೆಯನ್ನು ತಿರುಚುವ ಸಿನಿಕ ನಡೆಗೆ ಸೋಲಾಗಿರುವ ಕುರಿತು ಇರುವ ನಿರಾಳಭಾವ ಸಮಂಜಸವೇ ಆಗಿದೆ. ಹಾಗಿದ್ದರೂ ಅಪಾಯ ಇನ್ನೂ ಇದೆ. ಈ ಪ್ರಹಸನದಂತಹ ಚರ್ಚೆಯಲ್ಲಿ ಒಳಗೊಂಡಿರುವ ಹೆಚ್ಚು ಗಾಢ ಮತ್ತು ಗಂಭೀರವಾದ ಸಮಸ್ಯೆಗಳನ್ನು ಬಹುಕಾಲ ಮುಂದೂಡಲು ಸಾಧ್ಯವಿಲ್ಲ ಎಂಬುದನ್ನು ನಾವು ಮರೆತುಬಿಡಬಹುದು. ಸುಹಾಸ್ ಪಳ್ಶೀಕರ್ ಅವರು ಸರಿಯಾಗಿಯೇ ಹೇಳುವಂತೆ– ಇಲ್ಲಿ ಒಕ್ಕೂಟವಾದ, ರಾಷ್ಟ್ರೀಯತಾವಾದ ಮತ್ತು ಭಾರತ ಎಂಬ ಪರಿಕಲ್ಪನೆಯು ಅಪಾಯದಲ್ಲಿದೆ.

ಸರಳವಾಗಿ ಹೇಳುವುದಾದರೆ, ಭಾರತ ಒಕ್ಕೂಟಕ್ಕೆ ಒಂದು ಹೊಸ ಒಡಂಬಡಿಕೆಯ ಅಗತ್ಯ ಇದೆ. ಇದು ಸಾಂಪ್ರದಾಯಿಕ ಪಾಶ್ಚಿಮಾತ್ಯ ಶೈಲಿಯ ಒಕ್ಕೂಟದ ಸಂವಿಧಾನದಲ್ಲಿ ವಿವರಿಸಲಾದ ಒಡಂಬಡಿಕೆ ಆಗಬೇಕಾಗಿಲ್ಲ. ಅಮೆರಿಕದಂತಹ 'ಒಟ್ಟಿಗೆ ಸೇರುವ' ಒಕ್ಕೂಟದಂತೆ (ಕೇಂದ್ರದ ಹಾಗೆ ರಾಜ್ಯಗಳಿಗೂ ಸಮಾನ ಅಧಿಕಾರ) ಅಲ್ಲದೆ, ಭಾರತದ 'ರಾಜ್ಯಗಳ ಒಕ್ಕೂಟ'ವು ಒಂದು ದೇಶದೊಳಗಿನ ರಾಜಕೀಯ ಘಟಕಗಳನ್ನು 'ಹಿಡಿದಿರಿಸಿಕೊಳ್ಳುವ ವ್ಯವಸ್ಥೆ'ಯಾಗಿದೆ (ರಾಜ್ಯಗಳಿಗಿಂತ ಪ್ರಬಲವಾದ ಕೇಂದ್ರ). ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿಯೇ ನಮ್ಮಲ್ಲಿ ಸೈದ್ಧಾಂತಿಕ ಸಹಮತ ಏರ್ಪಟ್ಟಿತ್ತು ಮತ್ತು ನಮ್ಮ ಸಂವಿಧಾನದಲ್ಲಿ ಈ ಕುರಿತ ಅಲಿಖಿತ ಒಡಂಬಡಿಕೆಯ ಇಂಗಿತವು ಇದೆ. ಈ ಒಡಂಬಡಿಕೆಯನ್ನು ಈಗ ಪರಿಷ್ಕರಿಸಬೇಕಿದೆ.

ಈ ಅಲಿಖಿತ ಒಡಂಬಡಿಕೆಗೆ ಮೂರು ತತ್ತ್ವಗಳು ಆಧಾರವಾಗಿವೆ. ಮೊದಲನೆಯದು, ಯಜಮಾನಿಕೆ ಇಲ್ಲದಿರುವುದು. ಅಂದರೆ, ಇದು ರಾಜ್ಯಗಳ ಜೊತೆಗೆ ಕೇಂದ್ರದ ಸಂಬಂಧ ಮತ್ತು ರಾಜ್ಯಗಳ ನಡುವೆ ಪರಸ್ಪರ ಸಂಬಂಧಕ್ಕೆ ಅನ್ವಯವಾಗುತ್ತದೆ. ಈ ಕೇಂದ್ರೀಯ ತತ್ತ್ವದ ಭಾಗವಾಗಿ ಇನ್ನೂ ಎರಡು ತತ್ತ್ವಗಳಿವೆ: ಭಾರತ ಒಕ್ಕೂಟದ ಘಟಕಗಳ ನಡುವೆ ಮತ್ತು ಘಟಕಗಳ ಒಳಗೆ ನ್ಯಾಯಯುತ ನಡವಳಿಕೆ ಮತ್ತು ಸ್ಥಳೀಯ ಪದ್ಧತಿಗಳು, ಆಚರಣೆಗಳು ಮತ್ತು ಅಗತ್ಯಗಳಿಗೆ ಗೌರವ.

ಹೊಸ ಒಡಂಬಡಿಕೆಯನ್ನು ಎಲ್ಲ ಆಯಾಮಗಳಲ್ಲಿಯೂ ಈ ಮೂರು ತತ್ತ್ವಗಳು ರೂಪಿಸಬೇಕು. ಈಗ ಕೈಬಿಡಲಾಗಿರುವ ಕ್ಷೇತ್ರ ಮರುವಿಂಗಡಣೆ ಚರ್ಚೆಯು ಒಂದು ಆಯಾಮವನ್ನು ಮಾತ್ರ ಹೊಂದಿದೆ. ಅದೆಂದರೆ, ಭಾರತ ಒಕ್ಕೂಟದ ರಾಜ್ಯಗಳ ನಡುವೆ ರಾಜಕೀಯ ಅಧಿಕಾರ ಹಂಚಿಕೆ. ಇಲ್ಲಿ ಇನ್ನೂ ಎರಡು ಆಯಾಮಗಳನ್ನು ಸೇರಿಸಿಕೊಳ್ಳಲೇ ಬೇಕಿದೆ, ಅವುಗಳೆಂದರೆ– ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಸಾಂಸ್ಕೃತಿಕ ಅಸ್ಮಿತೆಗೆ ಗೌರವ. ಈ ಎಲ್ಲ ಆಯಾಮಗಳನ್ನು ಒಳಗೊಂಡಿರುವ ಸಮಗ್ರವಾದ ಮತ್ತು ಒಂದೇ ಬಾರಿಗೆ ಎಲ್ಲವನ್ನು ಇತ್ಯರ್ಥ ಪಡಿಸುವ ವ್ಯವಸ್ಥೆ ನಮಗೆ ಬೇಕಾಗಿದೆ. ಶಶಿ ತರೂರ್ ಅವರು ಸರಿಯಾಗಿಯೇ ಗುರ್ತಿಸಿರುವಂತೆ ಇದಕ್ಕಾಗಿ 'ಮಹಾನ್ ರಾಷ್ಟ್ರೀಯ ಸಮಾಲೋಚನೆ' ಅಂದರೆ, ಎಲ್ಲೆಡೆಗಳಿಂದಲೂ ಕೊಡು–ಕೊಳುವಿಕೆ ಇರುವ ಸುದೀರ್ಘ ಸಂಧಾನವು ಬೇಕಾಗಿದೆ. ಇಂತಹ ಒಡಂಬಡಿಕೆ ಹೇಗಿರಬೇಕೆಂಬ ಸಲಹೆಯೊಂದು ಇಲ್ಲಿದೆ. ಎಲ್ಲರಿಗಾಗಿಯೂ ಕೊಡು–ಕೊಳುವಿಕೆ ಇರುವ ನ್ಯಾಯಯುತ ಮತ್ತು ಸುಸ್ಥಿರವಾದ ಚೌಕಾಶಿ ಇದು.

ರಾಜಕೀಯ ಪ್ರಾತಿನಿಧ್ಯದ ಕುರಿತು ಹೇಳುವುದಾದರೆ, ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಪ್ರಾಮಾಣಿಕತೆಯು ಎಳ್ಳಷ್ಟೂ ಇರಲಿಲ್ಲ. ಗೃಹ ಸಚಿವರು ಎರಡು ವಿರೋಧಾಭಾಸಕರ ವಿಚಾರಗಳ ನಡುವೆ ಓಲಾಡುತ್ತಿದ್ದರು. ಅವುಗಳೆಂದರೆ, ವಿವಿಧ ರಾಜ್ಯಗಳ ಕ್ಷೇತ್ರಗಳ ಪಾಲನ್ನು ಬದಲಾಯಿಸಬೇಕಾದ ಅಗತ್ಯ ಇದೆ ಮತ್ತು ಈಗ ಇರುವ ಅನುಪಾತವನ್ನು ಉಳಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ. ಲೋಕಸಭಾ ಕ್ಷೇತ್ರಗಳ ಮರುಹಂಚಿಕೆಯ ಪರವಾಗಿರುವ ವಾದವು ಇಂತಹ ಯಾವುದೇ ದ್ವಂದ್ವಗಳಿಲ್ಲದೆ ನೇರವಾಗಿ ಮತ್ತು ಪ್ರಾಮಾಣಿಕವಾಗಿ ಇರಬೇಕು. ಸಂವಿಧಾನದಲ್ಲಿ ಉಲ್ಲೇಖಿತವಾಗಿರುವ 'ಒಂದು ವ್ಯಕ್ತಿಗೆ ಒಂದು ಮತ ಮತ್ತು ಒಂದೇ ಮೌಲ್ಯ' ಎಂಬ ಪ್ರಜಾಸತ್ತಾತ್ಮಕ ತತ್ತ್ವವು ರಾಜ್ಯಗಳ ಕ್ಷೇತ್ರಗಳ ಸಂಖ್ಯೆ ಬದಲಾವಣೆಯಲ್ಲಿ ಜನಸಂಖ್ಯೆಯಲ್ಲಿನ ಬದಲಾವಣೆಗೆ ಅನುಗುಣವಾಗಿ ಪ್ರತಿಫಲಿಸಬೇಕು. ಈ ತತ್ತ್ವವು ಮೌಲಿಕವೇ ಅಲ್ಲವೇ ಎಂಬುದು ಇಲ್ಲಿನ ಪ್ರಶ್ನೆ ಅಲ್ಲ. ಈಗಿನ ಸಂದರ್ಭದಲ್ಲಿ ಈ ಒಂದು ತತ್ತ್ವ ಮಾತ್ರ ಮೌಲಿಕವೇ ಎಂಬುದು ನಿಜವಾದ ಪ್ರಶ್ನೆಯಾಗಿದೆ.

ಈ ತತ್ತ್ವವನ್ನು ಅನುಸರಿಸಿದರೆ, ಜನಸಂಖ್ಯಾ ಹೆಚ್ಚಳದ ಪ್ರಮಾಣವು ಕಡಿಮೆ ಇರುವ ಮತ್ತು ಕುಟುಂಬ ಯೋಜನೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ರಾಜ್ಯಗಳಿಗೆ ಶಿಕ್ಷೆ ನೀಡಿದಂತಾಗುತ್ತದೆ ಎಂಬ ಸುಲಭ ಮತ್ತು ಲೋಪದಿಂದ ಕೂಡಿದ ವಾದಕ್ಕೆ ವಿರೋಧ ಪಕ್ಷಗಳು ಜೋತುಬಿದ್ದವು. ವಾಸ್ತವಿಕವಾಗಿ ಇದು ದುರ್ಬಲ ವಾದ. ಏಕೆಂದರೆ, ಸರ್ಕಾರದ ನೀತಿಯು ಜನಸಂಖ್ಯೆ ಹೆಚ್ಚಳವನ್ನು ನಿರ್ಧರಿಸುವುದಿಲ್ಲ. ಇದಲ್ಲದೆ, ಯಾವುದೇ ಪ್ರದೇಶ ಅಥವಾ ಸಾಮಾಜಿಕ ಗುಂಪಿನ ಜನಸಂಖ್ಯೆಯ ವೇಗದ ಬೆಳವಣಿಗೆಯು ರಾಷ್ಟ್ರೀಯ ಹೊರೆ ಎಂದು ಪರಿಗಣಿಸುವುದು ಸಾಮಾಜಿಕ ನ್ಯಾಯದ ತತ್ತ್ವಕ್ಕೆ ವಿರುದ್ಧವಾದುದಾಗಿದೆ.

ಯಾರ ಮೇಲೆಯೂ ಯಜಮಾನಿಕೆ ಇಲ್ಲ ಎಂಬ ವಾದವು ಸರಳ ಮತ್ತು ಹೆಚ್ಚು ಪ್ರಾಮಾಣಿಕ. ಹಿಂದಿ ಭಾಷಿಕ ಪ್ರದೇಶಗಳು ಸಂಸತ್ತಿನಲ್ಲಿ ಈಗ ಹೊಂದಿರುವ ಪಾಲು ಅತಿಯಾಗಿದೆ. ಕ್ಷೇತ್ರಗಳ ಪಾಲಿನಲ್ಲಿ ಇನ್ನಷ್ಟು ಹೆಚ್ಚಳವಾದರೆ, ಸರಳ ಬಹುಮತಕ್ಕೆ ಹತ್ತಿರ ಬಂದಂತೆ ಆಗಬಹುದು ಮತ್ತು ರಾಜಕೀಯವಾಗಿ ಹಿಂದಿ ಭಾಷಿಕವಲ್ಲದ ಪ್ರದೇಶಗಳು ಅಪ್ರಸ್ತುತ ಆಗುತ್ತವೆ. ಇದರಿಂದಾಗಿ, ಭಾರತ ಒಕ್ಕೂಟದ ಅಲಿಖಿತ ಸಾಮಾಜಿಕ ಒಡಂಬಡಿಕೆಯನ್ನು ಕಡೆಗಣಿಸಿದಂತಾಗುತ್ತದೆ. ಹಾಗಾಗಿಯೇ ಈಗಿನ ಸನ್ನಿವೇಶದಲ್ಲಿ ಯಜಮಾನಿಕೆ ಇಲ್ಲ ಎಂಬ ತತ್ತ್ವದ ಮೂಲಕ ಸಾಮಾನ್ಯ ಪ್ರಜಾಸತ್ತಾತ್ಮಕ ತತ್ತ್ವವನ್ನು ಹಿಮ್ಮೆಟ್ಟಿಸಬೇಕು. 2001ರ ವಾಜಪೇಯಿ ಸೂತ್ರವನ್ನು ಕಾಯಂ ವ್ಯವಸ್ಥೆ ಎಂದು ಅಳವಡಿಸಿಕೊಂಡು ಜಾರಿಗೆ ತರಬಹುದು. ಇತ್ತೀಚಿನ ಜನಗಣತಿಗೆ ಅನುಗುಣವಾಗಿ ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳ ಗಡಿಗಳನ್ನು ಹೊಂದಿಸಿಕೊಳ್ಳುವಾಗ ಪ್ರತಿ ರಾಜ್ಯದ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಅಥವಾ ಕನಿಷ್ಠ ಪಕ್ಷ ಅದರ ಅನುಪಾತವನ್ನು ಕಾಯಂ ಆಗಿ ಸ್ಥಗಿತಗೊಳಿಸಬೇಕು.

ಈ ಚೌಕಾಶಿಯ ಎರಡನೇ ಭಾಗ ಆರ್ಥಿಕ ಸಂಪನ್ಮೂಲಗಳ ಹಂಚಿಕೆ. ದೇವೇಶ್ ಕಪೂರ್ ಮತ್ತು ಅರವಿಂದ್ ಸುಬ್ರಮಣ್ಯನ್ ಅವರು ಅಂತರ ರಾಜ್ಯ ಆರ್ಥಿಕ ಅಸಮಾನತೆಯು ಹೇಗೆ ಬೆಳೆದಿದೆ ಮತ್ತು ಅದರಲ್ಲೂ ವಿಶೇಷವಾಗಿ ಭಾರತದ ಆರ್ಥಿಕತೆಯನ್ನು 'ಉದಾರೀಕರಣ'ಗೊಳಿಸಿದ ನಂತರ ಅಸಮಾನತೆ ಹೇಗೆ ಉಂಟಾಗಿದೆ ಎಂಬುದನ್ನು ಅದ್ಭುತವಾಗಿ ದಾಖಲಿಸಿದ್ದಾರೆ. ಗುಜರಾತ್‌ನ ತಲಾ ಆದಾಯವು ಬಿಹಾರಕ್ಕೆ ಹೋಲಿಸಿದರೆ 6 ಪಟ್ಟು ಹೆಚ್ಚು. 'ರಾಜಕೀಯ ಅಧಿಕಾರ ಮತ್ತು ಬಹುಸಂಖ್ಯಾತ ಜನಸಮುದಾಯ ಆರ್ಥಿಕವಾಗಿ ವಂಚಿತವಾಗಿರುವ ಪ್ರದೇಶ'ದಲ್ಲಿ ನೆಲಸಿದ ದೊಡ್ಡ ದೇಶ ಭಾರತ ಮಾತ್ರ ಆಗಿರಬಹುದು' ಎಂದು ರಥಿನ್ ರಾಯ್ ಗುರ್ತಿಸಿದ್ದಾರೆ.

ರಾಷ್ಟ್ರೀಯ ಸಂಪನ್ಮೂಲಗಳ ದೊಡ್ಡ ಭಾಗವನ್ನು ಬಡತನ ಹೆಚ್ಚು ಇರುವ ರಾಜ್ಯಗಳಿಗೆ ಹಂಚಿಕೆ ಮಾಡುವುದಕ್ಕೆ ಈವರೆಗೆ ರಾಜಕೀಯ ಸಹಮತ ಇತ್ತು. ಇತ್ತೀಚೆಗೆ ಈ ನೀತಿಯ ಕುರಿತು ಆಕ್ಷೇಪಗಳು ಬಂದಿವೆ. ಕೇಂದ್ರದ ನಿಧಿಗಳನ್ನು ರಾಜ್ಯದಿಂದ ಸಂಗ್ರಹವಾಗುವ ತೆರಿಗೆಯ ವರಮಾನದ ಪಾಲಿಗೆ ಅನುಗುಣವಾಗಿ ಸಮತೋಲನದಿಂದ ಹಂಚಿಕೆ ಮಾಡಬೇಕು ಎಂಬ ಒತ್ತಾಯ ಕೇಳಿ ಬಂದಿದೆ. ಹೀಗಾದರೆ, ಶ್ರೀಮಂತ ರಾಜ್ಯಗಳಿಗೆ ಹೆಚ್ಚಿನ ನಿಧಿ ದೊರೆಯುತ್ತದೆ. ಇಂತಹ ಬೇಡಿಕೆಯು ನ್ಯಾಯತತ್ತ್ವಕ್ಕೆ ವಿರುದ್ಧವಾದುದು. ಈ ನೀತಿಯನ್ನು ಅನುಸರಿಸಿದರೆ ಹೆಚ್ಚು ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಅಗ್ಗದ ದರದಲ್ಲಿ ಕಾರ್ಮಿಕರು ದೊರೆಯುತ್ತಾರೆ ಮತ್ತು ಇತರ ರಾಜ್ಯಗಳಲ್ಲಿ ಮುಕ್ತ ಮಾರುಕಟ್ಟೆ ದೊರೆಯುತ್ತದೆ ಎಂಬುದನ್ನು ಇಲ್ಲಿ ನಿರ್ಲಕ್ಷಿಸಲಾಗಿದೆ. ಹಾಗೆಯೇ ಕನಿಷ್ಠ ಬೆಂಬಲ ಬೆಲೆ ಮತ್ತು ಸರಕು ಸಾಗಾಟ ಸಹಾಯಧನದ ರೂಪದಲ್ಲಿಯೂ ಹಣ ದೊರೆಯುತ್ತದೆ. ಹಾಗಾಗಿ, ಹೊಸ ಒಡಂಬಡಿಕೆಯ ಎರಡನೇ ಭಾಗದಲ್ಲಿ, ಮುಂದಿನ ಯಾವುದೇ ಹಣಕಾಸು ಆಯೋಗವು ನಿಧಿ ಹಂಚಿಕೆಗೆ ಜನಸಂಖ್ಯೆ ಮತ್ತು ಅಭಿವೃದ್ಧಿಯ ಪ್ರಮಾಣವನ್ನು ಪ್ರಮುಖ ಮಾನದಂಡವಾಗಿ ಉಳಿಸಿಕೊಳ್ಳಬೇಕು ಎಂಬ ಈಗಿನ ನೀತಿ ಎತ್ತಿ ಹಿಡಿಯುವ ಕಾನೂನನ್ನು ರಚಿಸಬೇಕು.

ಅಂತಿಮವಾಗಿ, ಗಾಢವಾದ ಸಾಂಸ್ಕೃತಿಕ ವೈವಿಧ್ಯಗಳನ್ನು ಒಪ್ಪಿ ಗೌರವಿಸುವ ಸ್ವಾತಂತ್ರ್ಯ ಹೋರಾಟ ಕಾಲದ ಸಹಮತವನ್ನು ಹೊಸ ಒಡಂಬಡಿಕೆಯು ಪುನರುಚ್ಚರಿಸಬೇಕು. ಅಂದರೆ, ಹಿಂದಿ ಹೇರಿಕೆ ಇಲ್ಲವಾಗಬೇಕು ಮತ್ತು ಎಂಟನೇ ಪರಿಚ್ಛೇದದಲ್ಲಿ ಇರುವ ಎಲ್ಲ ಭಾಷೆಗಳಿಗೆ ಸಮಾನ ಗೌರವ ದೊರೆಯಬೇಕು ಹಾಗೂ ಈ ಪರಿಚ್ಛೇದದಲ್ಲಿ ಇಲ್ಲದ ಎಲ್ಲ ಭಾಷೆಗಳಿಗೂ ರಕ್ಷಣೆ ದೊರೆಯಬೇಕು ಎಂಬ ದೃಢವಾದ ಭರವಸೆ ನೀಡಬೇಕು. ಹಿಂದಿ ಹೇರಿಕೆ ಇಲ್ಲ ಎನ್ನುವುದರ ಅರ್ಥ ಇಂಗ್ಲಿಷ್ ಹೇರಿಕೆ ಎಂದಲ್ಲ. ಬದಲಿಗೆ, ನಮ್ಮ ನಾಗರಿಕತೆಯನ್ನು ಪ್ರತಿಬಿಂಬಿಸುವ ಬಹುಭಾಷಿಕತೆಗೆ ಆಯಾ ರಾಜ್ಯಗಳು ಮನ್ನಣೆ ನೀಡುವಂತಿರಬೇಕು. ಭಾಷಾನೀತಿ ಮಾತ್ರವಲ್ಲದೆ, ಶಿಕ್ಷಣನೀತಿಯಲ್ಲಿಯೂ ಇದು ಒಳಗೊಳ್ಳಬೇಕಾದ ಅಗತ್ಯ ಇದೆ. ಈಗ, ಭಾರತ ದೇಶದ ಎಲ್ಲ ಲಾಂಛನಗಳೂ ಅಧಿಕಾರಯುತ ಮತ್ತು ಕೃತಕವಾದ ಹಿಂದಿಯತ್ತ ವಾಲಿವೆ.

ಈ ದಿಸೆಯಲ್ಲಿ ಒಂದು ಹೊಸ ಒಡಂಬಡಿಕೆಯು ಐಚ್ಛಿಕ ಆಯ್ಕೆ ಆಗಿ ಉಳಿದಿಲ್ಲ. ಗಾಢವಾಗಿ ಅತಿಯಾದ ವೈವಿಧ್ಯಗಳನ್ನು ಹೊಂದಿದ್ದೂ ಏಕೀಕೃತ ರಾಜಕೀಯ ಒಕ್ಕೂಟವಾಗಿ ಉಳಿದಿರುವ ಕೆಲವೇ ದೇಶಗಳಲ್ಲಿ ಭಾರತವೂ ಒಂದು ಎಂಬುದನ್ನು ನಾವು ಮರೆಯಬಾರದು. ನಮ್ಮಲ್ಲಿ ಮೂರು ಬಿರುಕುಗಳನ್ನು ಗುರ್ತಿಸಬಹುದು: ಭೌಗೋಳಿಕ, ಭಾಷಿಕ ಮತ್ತು ಈಗ ಆರ್ಥಿಕ. ಇವು ಬಹುವಾಗಿ ಒಂದರ ಮೇಲೆ ಒಂದು ವ್ಯಾಪಿಸಿವೆ. ಈಗಾಗಲೇ ಇರುವ ಬಿರುಕುಗಳ ಜೊತೆಗೆ ನಾಲ್ಕನೆಯದಾದ ರಾಜಕೀಯ ಬಿರುಕು ಸುಮ್ಮನೆ ಬಂದು ಸೇರಿಕೊಳ್ಳಲು ನಾವು ಅವಕಾಶ ಕೊಡಬಾರದು. ಭಾರತ ಒಕ್ಕೂಟಕ್ಕೆ ಹೊಸದೊಂದು ಒಡಂಬಡಿಕೆಯನ್ನು ನಾವು ಮುಂದೂಡಿಕೊಂಡು ಹೋಗಬಾರದು.



ವಾಚಕರ ವಾಣಿ

ದಕ್ಷಿಣಕ್ಕೆ 'ನ್ಯಾಯದ ಬಾಗಿಲು' ಹತ್ತಿರವಾಗಲಿ

'ನ್ಯಾಯ'ವು ಕೇವಲ ಶ್ರೀಮಂತರಿಗಷ್ಟೇ ಸೀಮಿತವಾಗಬಾರದು; ಅದು ಸಾಮಾನ್ಯ ಜನರಿಗೂ ಕೈಗೆಟುಕುವಂತಿರಬೇಕು. ದೆಹಲಿಯಲ್ಲಿರುವ ಸುಪ್ರೀಂ ಕೋರ್ಟ್ ತಲಪಲು ದಕ್ಷಿಣ ಭಾರತದ ಸಾಮಾನ್ಯ ಪ್ರಜೆಯೊಬ್ಬ ಎದುರಿಸುವ ಸಂಕಷ್ಟಗಳು ಅಸಂಖ್ಯ. ಸಾವಿರಾರು ಕಿಲೋಮೀಟರ್ ದೂರ, ಭಾಷೆಯ ಅಡೆತಡೆ ಮತ್ತು ಆರ್ಥಿಕ ಹೊರೆಯು ನ್ಯಾಯದ ಹಾದಿಯಲ್ಲಿ ಮುಳ್ಳಾಗುತ್ತಿವೆ. ದಕ್ಷಿಣ ಭಾರತದಲ್ಲಿ ಸುಪ್ರೀಂ ಕೋರ್ಟ್‌ನ ಪೀಠ ಸ್ಥಾಪನೆಯಾಗಬೇಕೆಂಬ ಬೇಡಿಕೆ ಬರೀ ಭೌಗೋಳಿಕ ಹಕ್ಕಲ್ಲ; ಅದು ಜನಸಾಮಾನ್ಯರ 'ಸಮಾನ ನ್ಯಾಯ'ದ ಕನಸು. ಸಂವಿಧಾನದ ಆಶಯದಂತೆ ನ್ಯಾಯ ಪ್ರತಿಯೊಬ್ಬರ ಮನೆ ಬಾಗಿಲಿಗೆ ತಲಪಬೇಕಾದರೆ ವಿಕೇಂದ್ರೀಕರಣ ಅತ್ಯಗತ್ಯ. ನ್ಯಾಯಪೀಠಗಳು ಹತ್ತಿರವಿದ್ದರೆ ಅನ್ಯಾಯಕ್ಕೊಳಗಾದವರು ಭರವಸೆಯಿಂದ ಕಣ್ಣೀರು ಒರೆಸಿಕೊಳ್ಳಲು ಸಾಧ್ಯ. ಇದು ವ್ಯವಸ್ಥೆಯ ಬದಲಾವಣೆಯಲ್ಲ; ಜನರ ಆತ್ಮಗೌರವದ ಪ್ರಶ್ನೆ.

ಸಿ.ಕೆ. ಪ್ರಗತಿ, ಚಿಕ್ಕನಲ್ಲೂರು

ವಾಮಾಚಾರ: ಮೂಗಿನ ನೇರಕ್ಕೆ ಹೇಳಿಕೆ

'ಸಿ.ಎಂ ಮೌನ: ಮಾಟ-ಮಂತ್ರ ಶಂಕೆ' ಸುದ್ದಿ (ಪ್ರ.ವಾ., ಏ. 22) ಓದಿ ಅಚ್ಚರಿ ಆಯಿತು. ಶಾಸಕ ಕೆ.ಎನ್. ರಾಜಣ್ಣನವರ ಈ ಹೇಳಿಕೆಯು ಅವರಲ್ಲಿರುವ ಮೌಢ್ಯತೆಗೆ ಕನ್ನಡಿ ಹಿಡಿದಿದೆ. ಶಾಸಕರೇನು ಅಶಿಕ್ಷಿತರಲ್ಲ; ಜವಾಬ್ದಾರಿಯುತ ಜನಪ್ರತಿನಿಧಿ. ಮಾಟ–ಮಂತ್ರದಿಂದ ವಿರೋಧಿಗಳನ್ನು ಮಟ್ಟ ಹಾಕಲು ಸಾಧ್ಯವಾಗಿದ್ದರೆ ದೇಶದಲ್ಲಿ ಏನೇನೊ ನಡೆದುಹೋಗುತ್ತಿತ್ತು. ಕೊಲ್ಲಿ ಯುದ್ಧವನ್ನೂ ನಿಲ್ಲಿಸಬಹುದಿತ್ತು. ಅಷ್ಟೇ ಏಕೆ, ರಾಜಣ್ಣ ಅವರು ಸಚಿವ ಸ್ಥಾನದಿಂದ ವಜಾಗೊಳ್ಳುವ ಪ್ರಮೇಯವೇ ಬರುತ್ತಿರಲಿಲ್ಲ. ವಾಮಾಚಾರ ಎನ್ನುವುದು ಮೌಢ್ಯದ ತಂತ್ರಗಾರಿಕೆ ಅಷ್ಟೆ. ವಿರೋಧಿಗಳನ್ನು ಭಯಪಡಿಸಲು ಆ ತಂತ್ರಗಾರಿಕೆ ಬಳಸಲಾಗುತ್ತದೆ. ಜನರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸುವುದು ಜನಪ್ರತಿನಿಧಿಗಳ ಹೊಣೆಯಾಗಬೇಕಿದೆ.

ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ನಾಲಿಗೆ ಹರಿಬಿಡುವ ಚಾಳಿ ಸರಿಯಲ್ಲ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಿ ಮೋದಿಯವರನ್ನು 'ಟೆರರಿಸ್ಟ್' ಎಂದು ಕರೆದಿರುವ ಬಗ್ಗೆ ಚರ್ಚೆಯಾಗುತ್ತಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಆ ಪಕ್ಷದ ನಾಯಕರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವುದು ಸರಿ. ಆದರೆ, ಕಮಲ ಪಾಳಯದ ನಾಯಕರು ರಾಹುಲ್ ಗಾಂಧಿ ಅವರನ್ನು 'ಪಪ್ಪು' ಎಂದು ಕರೆದು ಅವರ ಘನತೆಗೆ ಚ್ಯುತಿ ತಂದಿಲ್ಲವೆ? ರಾಜಕೀಯ ನಾಯಕರು ಸಾರ್ವಜನಿಕವಾಗಿ ಮಾತನಾಡುವಾಗ ಅಸಂಬದ್ಧ ಪದಗಳನ್ನು ಬಳಸುವುದು ಸರಿಯಲ್ಲ. ದೇಶವೊಂದರ ಗೌರವವು ಆ ದೇಶದ ರಾಜಕಾರಣಿಗಳು ಮಾತನಾಡುವ ಶೈಲಿ ಮತ್ತು ನಡವಳಿಕೆಯಿಂದ ನಿರ್ಧಾರವಾಗುತ್ತದೆ. ಈ ಸತ್ಯವನ್ನು ಎಲ್ಲಾ ರಾಜಕಾರಣಿಗಳು ಅರಿಯಬೇಕಿದೆ.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಎನ್‌ಒಸಿ ವಿಳಂಬ: ಸಾಲಗಾರರ ಸಂಕಟ

ರಾಜ್ಯದಲ್ಲಿ ಬಹಳಷ್ಟು ಸವಾರರು ಖಾಸಗಿ ಫೈನಾನ್ಸ್ ಕಂಪನಿಗಳಿಂದ ವಾಹನ ಸಾಲ ಪಡೆದಿದ್ದಾರೆ. ಈ ಸಾಲಕ್ಕೆ ಹೆಚ್ಚಿನ ಬಡ್ಡಿದರವಿದ್ದರೂ ಸಕಾಲದಲ್ಲಿ ಮಾಸಿಕ ಕಂತು ಪಾವತಿಸುತ್ತಾರೆ. ಸಾಲ ಪೂರ್ಣಗೊಂಡ ಬಳಿಕ ವಾಹನದ ಮಾಲೀಕರಿಗೆ ನಿರಾಕ್ಷೇಪಣಾ ಪತ್ರ ಹಾಗೂ ಹೈಪೋಥಿಕೇಷನ್ ರದ್ದತಿ ಪತ್ರ ನೀಡಬೇಕಿದೆ. ಆದರೆ, ಕಂಪನಿಗಳು ಸಕಾಲದಲ್ಲಿ ಈ ಪ್ರಮಾಣಪತ್ರ ನೀಡುತ್ತಿಲ್ಲ. ಕಂಪನಿಗಳ ಮುಖ್ಯ ಕಚೇರಿ ಎಲ್ಲಿದೆ ಎನ್ನುವುದೇ ಸಾಲಗಾರರಿಗೆ ಗೊತ್ತಾಗುವುದಿಲ್ಲ. ಇದರಿಂದ ತೊಂದರೆಯಾಗಿದೆ. ಸರ್ಕಾರ ಈ ಬಗ್ಗೆ ಮಾರ್ಗಸೂಚಿ ರೂಪಿಸಬೇಕಿದೆ.

ವಿನಯ್ ಚಂದ್ರಮೌಳಿ, ಬೆಂಗಳೂರು

ಪಟಾಕಿ ದುರಂತ: ಶವದ ಮುಂದೆ ಮೌನ

ತಮಿಳುನಾಡಿನ ಕಟ್ಟನಾರಪಟ್ಟಿ ಪ್ರದೇಶದ ಪಟಾಕಿ ತಯಾರಿಕಾ ಘಟಕದಲ್ಲಿ ಸ್ಫೋಟ ಸಂಭವಿಸಿ 25 ಕಾರ್ಮಿಕರು ಮೃತಪಟ್ಟಿರುವ ಘಟನೆ ಮನ ಕಲಕುವಂತಹದ್ದು. ಕೇರಳದಲ್ಲಿನ ಪಟಾಕಿ ದುರಂತದಲ್ಲಿ 13 ಮಂದಿ ಅಸುನೀಗಿದ್ದಾರೆ. ಪಟಾಕಿ ತಯಾರಿಕಾ ಘಟಕಗಳಲ್ಲಿ ಅಸುರಕ್ಷಿತ ವಾತಾವರಣವಿರುತ್ತದೆ. ಬಡತನದಿಂದಾಗಿ ಈ ವಾತಾವರಣದಲ್ಲಿಯೇ ಜೀವದ ಹಂಗು ತೊರೆದು ಕಾರ್ಮಿಕರು ಕೆಲಸ ಮಾಡುತ್ತಾರೆ. ಈ ದುರಂತಗಳನ್ನು ನೋಡಿದಾಗ ಸತ್ತ ಕಾರ್ಮಿಕರ ಸಮಾಧಿಗಳ ಮೇಲೆ ನಾವು ಹಬ್ಬ, ಜಾತ್ರೆ, ಮದುವೆಯಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸುತ್ತೇವೆ ಎಂದು ಅನಿಸದೆ ಇರದು. ಪಟಾಕಿ ಹಚ್ಚುವಾಗ ಸುಟ್ಟು ಕರಕಲಾದ ಕಾರ್ಮಿಕರ ದೇಹಗಳು ಕಣ್ಮುಂದೆ ಬಂದರೆ ನಾವೆಂದಿಗೂ ಪಟಾಕಿ ಸಿಡಿಸಿ ಸಂಭ್ರಮಿಸುವುದಿಲ್ಲ. ನಮ್ಮ ಸಂಭ್ರಮ ಎನ್ನುವುದೇ ಅಮಾನವೀಯ; ಅದು ಶವಗಳ ಮುಂದೆ ಮೌನಾಚರಣೆಯ ಕಣ್ಣೀರು ಯಾತ್ರೆಯೇ ಸರಿ.

ಅಶೋಕ ಪ. ಹೊನಕೇರಿ, ಧಾರವಾಡ

ರಸ್ತೆ ಅಪಘಾತ ತಡೆ: ನಿಯಮ ಬಿಗಿಗೊಳಿಸಿ

ರಸ್ತೆ ಅಪಘಾತಗಳು ನಸುಕಿನ ವೇಳೆಯಲ್ಲಿ ಸಂಭವಿಸುವ ಸಾಧ್ಯತೆ ಹೆಚ್ಚು. ಇದಕ್ಕೆ ಚಾಲಕರಿಗೆ ಆವರಿಸುವ ನಿದ್ರೆ ಮಂಪರು ಕಾರಣ. ರಾತ್ರಿವೇಳೆ ಸಂಚರಿಸುವ ಅನೇಕ ವಾಹನಗಳಲ್ಲಿ ಒಬ್ಬರೇ ಚಾಲಕರಿರುತ್ತಾರೆ. ಬೇಗನೇ ಊರು ತಲಪಬೇಕೆಂಬ ಧಾವಂತದಿಂದ ರಾತ್ರಿಯಿಡೀ ವಾಹನ ಚಲಾಯಿಸುವ ಇವರಿಗೆ ನಸುಕಿನಲ್ಲಿ ನಿದ್ರೆಯ ಮಂಪರು ಆವರಿಸಿ ವಾಹನ ಅಪಘಾತಕ್ಕೀಡಾಗುತ್ತದೆ. ಸರ್ಕಾರವು ಕೆಲವು ಸರಳ ತಪಾಸಣೆ ಮೂಲಕ ಇಂತಹ ಅಪಘಾತ ತಪ್ಪಿಸಬಹುದಾಗಿದೆ. ವಿಶೇಷವಾಗಿ ರಾತ್ರಿ 12ಗಂಟೆಯಿಂದ ಬೆಳಗ್ಗೆ 6ಗಂಟೆವರೆಗೆ ಸಂಚರಿಸುವ ವಾಹನಗಳಲ್ಲಿ ಇಬ್ಬರು ಚಾಲಕರಿರುವುದನ್ನು ಕಡ್ಡಾಯಗೊಳಿಸಬೇಕು. ಚಾಲಕರು ಮದ್ಯಪಾನ ಮಾಡಿಲ್ಲದೆ ಇರುವ ಕುರಿತು ತಪಾಸಣೆ ಕೈಗೊಳ್ಳಬೇಕು. ಆಗಷ್ಟೆ ಅಪಘಾತಗಳು ತಗ್ಗಲಿವೆ, ಜೀವ ಹಾನಿ ತಪ್ಪಲಿದೆ.

ಆರ್.ಕೆ. ಉಮೇಶ್, ಹಾವೇರಿ

ಚುರುಮುರಿ

ಹಿಂದಿ ಮೀಸಲಾತಿ!

• ಗುರು ಪಿ.ಎಸ್.

'ಏನ್ ಮೇಡಂನೋರು, ಖಾದಿ ಸೀರೆ ಉಟ್ಕೊಂಡು ಒಳ್ಳೆ ರಾಜಕಾರಣಿ ಥರ ರೆಡಿ ಆಗ್ತಿದ್ದೀರಿ' ಎಂದು ಕಿಚಾಯಿಸುವ ದನಿಯಲ್ಲಿ ಹೆಂಡತಿಗೆ ಕೇಳಿದೆ.

'ರಾಜಕಾರಣಿ ಥರ ಏನು, ರಾಜಕಾರಣಿಯೇ ಅಂದ್ಕೊಳ್ಳಿ' ಗತ್ತಿನಿಂದ ಹೇಳಿದಳು ಹೆಂಡತಿ.

'ಅಬ್ಬಬ್ಬಾ, ಈ ಮಹತ್ವದ ಬೆಳವಣಿಗೆಗೆ ಏನು ಕಾರಣ' ಅಚ್ಚರಿಯಿಂದ ಕೇಳಿದೆ.

'ಅಯ್ಯಯ್ಯ... ಪೇಪರ್ ಗೀಪರ್ ಓದಲ್ವೇನ್ರೀ ನೀವು, ಮಹಿಳೆಯರಿಗೆ 33 ಪರ್ಸೆಂಟ್ ಮೀಸಲಾತಿ ಕೊಡ್ತಿದಾರಲ್ವ, ಅದಕ್ಕೆ ನಾನೂ ಎಲೆಕ್ಷನ್‌ಗೆ ನಿಲ್ಲೋಕೆ ಈಗನಿಂದಲೇ ಸಿದ್ಧತೆ ಮಾಡಿಕೊಳ್ತಿದೀನಿ'.

'ಹೇಗೆ ಭಾಷಣ ಮಾಡ್ತೀಯ, ಮಾಡು ನೋಡೋಣ'.

'ಆಯ್ತು, ನೀವೇ ಒಂದು ವಿಷಯ ಕೊಡಿ'.

'ಹಿಂದಿ ಭಾಷಾ ಶಿಕ್ಷಣದ ಬಗ್ಗೆ ಮಾತಾಡು'.

'ರಾಜ್ಯದಲ್ಲಿ ನಮ್ ಪಕ್ಷದ ಸರ್ಕಾರ ಇದ್ದು, ಕೇಂದ್ರದಲ್ಲಿ ಬೇರೆ ಪಕ್ಷದ ಸರ್ಕಾರ ಇದ್ದರೆ, ನಮಗೆ ಹಿಂದಿ ಬೇಡ, ಕನ್ನಡಕ್ಕೆ ದೊಡ್ಡ ಹೊಡೆತ ಬೀಳುತ್ತೆ ಅಂತೀನಿ'.

'ಕೇಂದ್ರದಲ್ಲಿ ನಿಮ್ಮ ಪಕ್ಷದ್ದೇ ಸರ್ಕಾರ ಇದ್ದರೆ?'

'ಮಕ್ಕಳು ಹೆಚ್ಚು ಭಾಷೆ ಕಲಿತಷ್ಟೂ ಒಳ್ಳೆಯದು, ಹಿಂದಿ ರಾಷ್ಟ್ರಪ್ರೇಮ ಮೂಡಿಸುತ್ತೆ, ಹಿಂದಿಯೂ ಪಠ್ಯದಲ್ಲಿರಲಿ ಅಂತೀನಿ'.

'ಎರಡೂ ಕಡೆ ನಿಮ್ಮದೇ ಪಾರ್ಟಿ ಅಧಿಕಾರದಲ್ಲಿದ್ದರೆ?'

'ಆಗ, ಭಾಷೆ ಬಿಟ್ಟು ಮಕ್ಕಳ ಕಡೆಗೆ ಬೆರಳು ಮಾಡಿಬಿಡ್ತೀನಿ. ಮೊದಲಿಂದ ತ್ರಿಭಾಷಾ ಕಲಿಕೆಗೆ ಮಕ್ಕಳು ಒಗ್ಗಿಕೊಂಡಿದ್ದಾರೆ. ಈಗ ಬದಲಿಸಿದರೆ ಮಕ್ಕಳಿಗೆ ತೊಂದರೆಯಾಗುತ್ತೆ. ಹೇಗಿತ್ತೋ ಹಂಗೆ ಇರಲಿ ಅಂತ ಪ್ಲೇಟ್‌ನ ದಬ್ಬಾಕಿಬಿಡ್ತೀನಿ' ಎಂದು ನಕ್ಕಳು.

'ಹಾಗೇ ಪಾರ್ಲಿಮೆಂಟ್‌ನಲ್ಲೂ ನಿನ್ನ ಮಹಿಳಾ ಮೀಸಲಾತಿ ಮಸೂದೆ ದಬ್ಬಾಕಿಕೊಂಡಿರೋದು ಗೊತ್ತು ತಾನೆ?'

'ಅಯ್ಯೋ ಹೌದೇನ್ರೀ... ಮತ್ತೆ ಯಾವಾಗ ಈ ಕಾನೂನು ಜಾರಿಗೆ ಬರೋದು?'

'ಜಾರಿಗೆ ಬರುತ್ತೋ ಇಲ್ಲವೋ ಗೊತ್ತಿಲ್ಲ. ಆದರೆ, ಮುಂದೆ ಯಾವುದಾದರೂ ರಾಜ್ಯಗಳ ಅಸೆಂಬ್ಲಿ ಎಲೆಕ್ಷನ್ ಅಥವಾ ಲೋಕಸಭಾ ಎಲೆಕ್ಷನ್ ಸಂದರ್ಭದಲ್ಲಿ ಚರ್ಚೆಗೆ ಬರಬಹುದಷ್ಟೇ' ನಗುತ್ತಾ ಹೊರಗಡಿಯಿಟ್ಟೆ.

ಸಂಗತ

ವಿಶ್ವಕ್ಕೆ ಬೇಕೀಗ ಹೃದಯವಂತಿಕೆಯ ನಾಯಕತ್ವ

ಅತಿ ಬುದ್ಧಿವಂತಿಕೆಯ ಹಾದಿಯಲ್ಲಿ ವಿವೇಕ ಕಳೆದುಕೊಂಡವರು ಘೋರ ಯುದ್ಧ ಸೃಷ್ಟಿಸಿದ್ದಾರೆ. ಪ್ರಸ್ತುತ ವಿಶ್ವಕ್ಕೆ ಅಗತ್ಯ ಇರುವುದು ಜಾಣರಲ್ಲ, ಹೃದಯವಂತರು!

• ಡಾ. ಲಕ್ಷ್ಮಣ ವಿ.ಎ.

'ಸಂಘರ್ಷದ ಜಗತ್ತಿಗೆ ಬೇಕಿರುವುದು ಹೃದಯವಂತಿಕೆಯ ನಾಯಕತ್ವ. ಕಣ್ಣು ಮುಚ್ಚಿ ಯೋಚಿಸು; ಅದೊಂದೇ ಕಣ್ಣು ಪಡೆಯುವ ಮಾರ್ಗ'. ಲಂಕೇಶರ ಪ್ರಸಿದ್ಧ ನಾಟಕ 'ಗುಣಮುಖ'ದಲ್ಲಿನ ಸಾಲುಗಳಿವು. ಅಲಾವಿ ಖಾನ್ ಎಂಬ ಬಡ ಹಕೀಮ, ಕಾಯಿಲೆಯಿಂದ ಬಳಲುತ್ತಿದ್ದ ದಿಲ್ಲಿಯ ಚಕ್ರವರ್ತಿ ನಾದಿರ್ ಷಾನಿಗೆ ಹೇಳುವ ಈ ಮಾತುಗಳು, ಯುದ್ಧದಾಹದಿಂದ ದೃಷ್ಟಿ ಕಳೆದುಕೊಂಡಿರುವ ವರ್ತಮಾನಕ್ಕೆ ಅಗತ್ಯವಾದ ಔಷಧಿಯನ್ನು ಕಾಣಿಸುವಂತಿದೆ.

ಪರ್ಷಿಯಾ ದೇಶದ ಸಾಮಾನ್ಯ ಸೈನಿಕನಾಗಿದ್ದ ನಾದಿರ್, ತನ್ನ ಪ್ರಚಂಡ ಶಕ್ತಿ ಸಾಮರ್ಥ್ಯದಿಂದ ಸಣ್ಣ ವಯಸ್ಸಿನಲ್ಲಿಯೇ ಒಂದೂವರೆ ಲಕ್ಷ ಯೋಧರ ಸೈನ್ಯ ಕಟ್ಟಿದ್ದ. ಭಾರತದ ಮೇಲೆ ದಾಳಿ ಮಾಡುವ ಮುನ್ನ, ಇರಾನ್, ಟರ್ಕಿ, ರಷ್ಯಾದ ಮೇಲೆ ದಂಡೆತ್ತಿ ಹೋಗಿ, ಸಂಪತ್ತನ್ನು ದೋಚಿ ದೌರ್ಜನ್ಯವೆಸಗಿ, ಅಲ್ಲಿನ ಜನರಲ್ಲಿ ಭೀತಿ ಹುಟ್ಟಿಸಿದ್ದ. ಇದೇ ನಾದಿರ್ ಷಾ, ಮೊಗಲರನ್ನು ಸೋಲಿಸಿ ದಿಲ್ಲಿಯ ಚಕ್ರವರ್ತಿಯಾಗಿದ್ದ.

ಅಧಿಕಾರದ ಹಸಿವಿನಲ್ಲಿ ರಕ್ತದ ರುಚಿ ಅಂಟಿಸಿಕೊಂಡಿದ್ದ ನಾದಿರ್, ಕೊಂದು ತಿನ್ನುವ ಆಟದಲ್ಲಿ ನಿರತನಾಗಿ ಇಂದ್ರಿಯಗಳನ್ನೇ ಕಳೆದುಕೊಳ್ಳತೊಡಗಿದ್ದ. ಕಣ್ಣು, ಕಿವಿ, ಮೂಗು ಕಳೆದುಕೊಂಡು ತನ್ನ ಖಡ್ಗದ ಮೂಲಕ ಅಸ್ತಿತ್ವ ಕಂಡುಕೊಳ್ಳಲು ಹೆಣಗಾಡುತ್ತಿದ್ದ. ಯುದ್ಧದ ಕ್ರೌರ್ಯ ಅವನನ್ನು ರೋಮಾಂಚನಗೊಳಿಸುತ್ತಿತ್ತು. ಆದರೆ, ನಿರಂತರ ಗೆಲುವು ತಂದೊಡ್ಡಿದ ಆಯಾಸದಿಂದ ಮಾನಸಿಕವಾಗಿ, ದೈಹಿಕವಾಗಿ ಅಸ್ವಸ್ಥನಾಗಿದ್ದ ನಾದಿರ್, ಭಾರತಕ್ಕೆ ಬರುವ ಹೊತ್ತಿಗೆ ಅಕ್ಷರಶಃ ಹುಚ್ಚನಂತೆ ಆಡುತ್ತಿದ್ದ.

ಹಿಟ್ಲರ್ ನೇತೃತ್ವದ ನಾಜಿ ಆಡಳಿತದಲ್ಲಿ ನಡೆದ ವ್ಯವಸ್ಥಿತ ಜನಾಂಗೀಯ ಹಿಂಸೆ ಮತ್ತು ಮಾನವೀಯ ಮೌಲ್ಯಗಳ ಧ್ವಂಸ ಕೃತ್ಯಗಳ ಹಿಂದೆಯೂ ಅಧಿಕಾರದ ಕ್ರೌರ್ಯವಿದೆ. ಈ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು 'ನ್ಯೂರೆಂಬರ್ಗ್ ವಿಚಾರಣೆಗಳು' ಸಹಾಯಕವಾಗಿವೆ.

ನ್ಯೂರೆಂಬರ್ಗ್ ವಿಚಾರಣೆಯೆಂಬುದು ಮಾನವನ ಇತಿಹಾಸದಲ್ಲಿ ಕಾನೂನು, ನೈತಿಕತೆ ಮತ್ತು ಮನೋವಿಜ್ಞಾನವನ್ನು ಪುನರ್ ವ್ಯಾಖ್ಯಾನಿಸಿದ ಮುಖ್ಯ ಘಟನೆ. ಈ ವಿಚಾರಣೆಗಳು ಯುದ್ಧ ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದಕ್ಕೆ ಮಾತ್ರ ಸೀಮಿತವಾಗದೆ, ನಾಜಿ ನಾಯಕರ ಮನೋವೈಜ್ಞಾನಿಕ ಸ್ಥಿತಿಯನ್ನು ವಿಶ್ಲೇಷಿಸುವ ಅಪೂರ್ವ ಪ್ರಯತ್ನಗಳೂ ಆಗಿವೆ.

ಹರ್ಮನ್, ರುಡಾಲ್ಫ್ ಹೆಸ್ ಮುಂತಾದ ಜನರಲ್‌ಗಳ ವಿಶ್ಲೇಷಣೆಗಳಿಂದ 'ಕೆಟ್ಟತನ' ಎಂಬುದು ಮಾನಸಿಕ ರೋಗ ಆಗಿರದೆ, ಅದು ಸಂದರ್ಭ, ಸಿದ್ಧಾಂತ ಮತ್ತು ಅಧಿಕಾರದ ಪ್ರಭಾವದಿಂದ ರೂಪುಗೊಳ್ಳುವ ಸಂಕೀರ್ಣ ಮನೋವೈಜ್ಞಾನಿಕ ಪ್ರಕ್ರಿಯೆಯಾಗಿದೆ ಎಂಬುದು ಸ್ಪಷ್ಟವಾಯಿತು.

ಕ್ರೌರ್ಯ ಮತ್ತು ಅಧಿಕಾರದ ಹಿಂದಿನ ಕಾರಣಗಳನ್ನು ವಿಶ್ಲೇಷಿಸುವ ನ್ಯೂರೆಂಬರ್ಗ್ ವಿಚಾರಣೆಗಳು, ಅಪರಾಧ ಮನೋವೃತ್ತಿಯ ಮೂಲಗಳನ್ನು ಅರಿಯುವ ವೈಜ್ಞಾನಿಕ ಪ್ರಯತ್ನಗಳಾಗಿವೆ. ಜಗತ್ತಿನ ದೃಷ್ಟಿಗೆ ಮಹಾನ್ ಕ್ರೂರಿಗಳಂತೆ ಕಾಣಿಸಿರುವ ಯಾರೂ ತಲೆ ತಿರುಕರಲ್ಲ, ದಡ್ಡರಲ್ಲ! ಅವರೆಲ್ಲ ಉತ್ತಮ ಶಿಕ್ಷಣ ಪಡೆದಂತಹ ಮೇಧಾವಿಗಳು. ಸಮಸ್ಯೆ ಇದ್ದದ್ದು ಅವರ ಸಾಮಾಜಿಕ ವರ್ತನೆಯಲ್ಲಿ.



ಹಿಂದಿನ ಕಾಲದಲ್ಲಿ ಆರೋಗ್ಯವನ್ನು ರೋಗವಿಲ್ಲದ ಸ್ಥಿತಿಯೆಂದು ಪರಿಗಣಿಸಲಾಗುತ್ತಿತ್ತು. ಆದರೆ, ಆಧುನಿಕ ವೈದ್ಯಕೀಯ ವಿಜ್ಞಾನವು ಆರೋಗ್ಯವನ್ನು ಸಮಗ್ರ ಮತ್ತು ಚಲನೆಯಲ್ಲಿರುವ ಸ್ಥಿತಿ ಎಂದು ಪರಿಗಣಿಸುತ್ತದೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, 'ಆರೋಗ್ಯವೆಂದರೆ ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾಗಿ ಸಂಪೂರ್ಣ ಸುಖಕರ ಸ್ಥಿತಿ; ಬರೀ ರೋಗದ ಅನುಪಸ್ಥಿತಿ ಅಲ್ಲ'. ಆದರೆ, ವೈದ್ಯಕೀಯ ಕ್ಷೇತ್ರವು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಿದ್ದರೂ, ವ್ಯಕ್ತಿಯ ಸಾಮಾಜಿಕ ಆರೋಗ್ಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಂತಿಲ್ಲ.

'ಗುಣಮುಖ' ನಾಟಕದ ನಾದಿರ್ ಹಾಗೂ ಸರ್ವಾಧಿಕಾರಿ ಹಿಟ್ಲರ್ ಮನಃಸ್ಥಿತಿಯನ್ನು ಈಗ ಎಲ್ಲೆಲ್ಲೂ ಕಾಣಬಹುದು. ನಾದಿರ್ ಗುಣಮುಖನಾದ. ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡ. ಪ್ರಸ್ತುತ, ವಿಶ್ವದಾದ್ಯಂತ ಅಪರಾಧಿಗಳಿಗೆ ಕಾನೂನು ಶಿಕ್ಷೆಯಿದೆ. ಆದರೆ, ಅಪರಾಧಿ ನಡವಳಿಕೆಯ ಅನಾರೋಗ್ಯಕಾರಿ ಮನಃಸ್ಥಿತಿಗೂ ಬೇರುಮಟ್ಟದ ಚಿಕಿತ್ಸೆ ಬೇಕಾಗಿದೆ.

ಇಂದಿನ ಆಧುನಿಕ ಯುಗದಲ್ಲಿ ತಾಂತ್ರಿಕ ಪ್ರಗತಿಯೊಂದಿಗೆ ಮಾನವನ ಜೀವನಶೈಲಿಯೂ ಬದಲಾಗುತ್ತಿದೆ. ಆದರೆ, ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಈ ವೈರುಧ್ಯವು ಮಾನಸಿಕ ಒತ್ತಡ, ಸಾಮಾಜಿಕ ಅಸಮತೋಲನ ಮತ್ತು ಅಸ್ವಸ್ಥ ವರ್ತನೆಗಳಿಗೆ ಕಾರಣವಾಗುತ್ತಿದೆ. ಆರೋಗ್ಯಕರ ವ್ಯಕ್ತಿತ್ವ ನಿರ್ಮಾಣದಲ್ಲಿ ನೈತಿಕ ಶಿಕ್ಷಣದ ಅಗತ್ಯವನ್ನು ಅರಿಯುವುದು ಅತ್ಯಂತ ಮುಖ್ಯ.

ನಾದಿರ್ ಷಾನ ಕಾಯಿಲೆಯನ್ನು ಗುಣಪಡಿಸಲು ಬರುವ ಹಕೀಮ, ಅಂಗಿಯನ್ನು ಬಿಚ್ಚುವಂತೆ ಚಕ್ರವರ್ತಿಗೆ ಹೇಳುತ್ತಾನೆ. ಅಂಗಿ ಬಿಚ್ಚಿಡುವುದೆಂದರೆ, ಎಲ್ಲ ಅಹಂಕಾರ, ಮೇಲರಿಮೆ ಹಾಗೂ ಒಳಗಿನ ರಾಕ್ಷಸನನ್ನು ಕಳಚಿ ಪಕ್ಕಕ್ಕಿಡುವುದು. ಈ ಪ್ರಕ್ರಿಯೆ ಈಗಿನ ಸಮಾಜಕ್ಕೆ ಅಗತ್ಯವಾಗಿದೆ. ಉನ್ನತ ಶಿಕ್ಷಣ ಮತ್ತು ತಂತ್ರಜ್ಞಾನ ನಮ್ಮ ಕಣ್ಣು ಮಾತ್ರ ತೆರೆಸುತ್ತವೆ. ಸಹಾನುಭೂತಿ, ಅನುಕಂಪ ಮತ್ತು ಪ್ರೀತಿಯು ಜಗತ್ತನ್ನು ವಿಶಾಲವಾದ ಒಳಗಣ್ಣಿನಿಂದ ನೋಡಲು ಕಲಿಸುತ್ತವೆ.

ಅತಿ ಬುದ್ಧಿವಂತನಾಗುವ ಪ್ರಕ್ರಿಯೆಯಲ್ಲಿ ಮನುಷ್ಯ ತನ್ನ ವಿವೇಕ ಕಳೆದುಕೊಳ್ಳುತ್ತಾ ಹೋಗುತ್ತಿದ್ದಾನೆ ಎನ್ನುವುದಕ್ಕೆ ಗಡಿಯ ಒಳಗೂ ಗಡಿಯ ಹೊರಗೂ ನಡೆಯುತ್ತಿರುವ ಯುದ್ಧಗಳೇ ಸಾಕ್ಷಿ. ಈ ಬೆಳವಣಿಗೆಯನ್ನು ಗಮನಿಸಿದಾಗ, ಜಗತ್ತನ್ನು ಜಾಣರು ಆಳಿದ್ದು ಸಾಕು, ಇನ್ನು ಹೃದಯವಂತರು ಆಳಲಿ ಅನ್ನಿಸುತ್ತದೆ. ಮಾನವೀಯ ಸಮಾಜದ ನಿರ್ಮಾಣಕ್ಕೆ ಬೇಕಾದುದು ಅಂತಃಕರಣ; ಅಣುಬಾಂಬ್ ಅಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇ85 ಇಂಧನ ಬಿಕ್ಕಟ್ಟಿಗೆ ಪರಿಹಾರವಾಗುವುದೇ?

ಶೇ 85ರಷ್ಟು ಎಥನಾಲ್ ಬಳಕೆಗೆ ಕೇಂದ್ರದಿಂದ ಕರಡು ನಿಯಮ ಸಾಧ್ಯತೆ

ಶೇ 85ರಿಂದ 90ರಷ್ಟು ಕಚ್ಚಾ ತೈಲ, ಅನಿಲವನ್ನು ಆಮದು ಮಾಡಿಕೊಳ್ಳುವ ಭಾರತದ ಇಂಧನ ಭದ್ರತೆಗೆ ಪಶ್ಚಿಮ ಏಷ್ಯಾದ ಬಿಕ್ಕಟ್ಟು ಹೊಡೆತ ನೀಡಿದೆ. ಕಚ್ಚಾ ತೈಲದಿಂದ ಉತ್ಪಾದಿಸುವ ಇಂಧನಗಳಿಗೆ ಪರ್ಯಾಯವಾದ ಮತ್ತು ಪರಿಸರಸ್ನೇಹಿಯಾದ ಇಂಧನಗಳ ಬಳಕೆಯ ಬಗ್ಗೆ ದೇಶವು ಯೋಚನೆ ಮಾಡುವಂತೆ ಆಗಿದೆ. ಈಗಾಗಲೇ ಬಳಕೆಯಲ್ಲಿರುವ ಶೇ20ರಷ್ಟು ಎಥೆನಾಲ್ ಮಿಶ್ರಣ ಮಾಡಿರುವ ಪೆಟ್ರೋಲ್ ಮಾದರಿಯಲ್ಲಿ ಶೇ 85ರಷ್ಟು ಎಥೆನಾಲ್ ಬೆರೆಸಿರುವ ಪೆಟ್ರೋಲ್ (ಇ85 ಪೆಟ್ರೋಲ್) ಬಳಕೆಗೆ ಪೂರಕವಾದ ಕರಡು ನಿಯಮಗಳನ್ನು ಕೇಂದ್ರ ಸರ್ಕಾರ ಶೀಘ್ರದಲ್ಲಿ ಪ್ರಕಟಿಸಲಿದೆ ಎಂದು ಹೇಳಲಾಗಿದೆ. ಇದು ಪಳೆಯುಳಿಕೆ ಇಂಧನದ ಬಳಕೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಿ, ಇಂಧನಕ್ಕಾಗಿ ವಿದೇಶಗಳ ಅವಲಂಬನೆಯನ್ನು ತಗ್ಗಿಸಬಹುದು ಎಂಬ ನಿರೀಕ್ಷೆಯಲ್ಲಿ ಸರ್ಕಾರ ಇದೆ

ಈಡೇರುವುದೇ ಉದ್ದೇಶ?

ಭಾರತ ಪ್ರತಿ ವರ್ಷ ₹22 ಲಕ್ಷ ಕೋಟಿ ಮೌಲ್ಯದ ಇಂಧನವನ್ನು ಆಮದು ಮಾಡಿಕೊಳ್ಳುತ್ತದೆ. ಎಥೆನಾಲ್ ನೀತಿಯಿಂದ 10 ವರ್ಷಗಳಲ್ಲಿ (2015–2025) ₹1.06 ಲಕ್ಷ ಕೋಟಿ ಮೌಲ್ಯದ ಕಚ್ಚಾ ತೈಲ ಆಮದು ಕಡಿಮೆಯಾಗಿದೆ ಮತ್ತು 5.44 ಕೋಟಿ ಟನ್ ಇಂಗಾಲ ಹೊರಸೂಸುವಿಕೆ ತಪ್ಪಿಸಲಾಗಿದೆ ಎಂದು ಕೇಂದ್ರ ಹೇಳಿದೆ.

ಆದರೆ, ಈ ಅವಧಿಯಲ್ಲಿ ಎಥೆನಾಲ್ ತಯಾರಿಕೆಗಾಗಿ ಜನ–ಜಾನುವಾರುಗಳಿಗೆ ಬಳಕೆ ಆಗಬೇಕಿದ್ದ ದಾಖಲೆ ಪ್ರಮಾಣದ ಕಬ್ಬು, ಜೋಳ ಮತ್ತು ಅಕ್ಕಿ ಬಳಸಲಾಗಿದೆ. ಧಾನ್ಯ ಬೆಳೆಯಲು ಬಳಕೆಯಾಗುತ್ತಿದ್ದ ಭೂಮಿಯನ್ನು ಅದಕ್ಕಾಗಿ ಬಳಸಲಾಗಿದೆ ಎನ್ನುವ ವಿಶ್ಲೇಷಣೆಯೂ ಇದೆ.

ಎಥೆನಾಲ್ ತಯಾರಿಕೆಗಾಗಿ ಬಳಸುವ ಕಚ್ಚಾ ವಸ್ತುಗಳನ್ನು ಬೆಳೆಯುವುದು ಮತ್ತು ಅವುಗಳನ್ನು ಬಳಸಿ ಎಥೆನಾಲ್ ತಯಾರಿಸುವ ಪ್ರಕ್ರಿಯೆಯಲ್ಲಿ ಇಂಗಾಲದಂಥ ವಸ್ತುಗಳು ಹೆಚ್ಚು ಹೊರಸೂಸುತ್ತವೆ. ಅವುಗಳ ಪ್ರಮಾಣವು ವಾಹನಗಳಲ್ಲಿ ತೈಲ ಬಳಸಿದಾಗ ಹೊರಸೂಸುವ ಇಂಗಾಲದ ಪ್ರಮಾಣಕ್ಕಿಂತಲೂ ಹೆಚ್ಚು ಎಂದು ಅಮೆರಿಕದ ಕೃಷಿ ಇಲಾಖೆಯ ಧನಸಹಾಯದೊಂದಿಗೆ ನಡೆದ ಅಧ್ಯಯನ ಮತ್ತು ರಾಯಲ್ ಸೊಸೈಟಿಯ ಅಧ್ಯಯನಗಳು ತಿಳಿಸಿವೆ.

ಬದಲಾಗಬೇಕು ಮೂಲಸೌಕರ್ಯ

ದೇಶದಲ್ಲಿ ಇ85 ಪೆಟ್ರೋಲ್ ಬಳಕೆ ಆರಂಭಿಸಬೇಕಾದರೆ, ವಾಹನಗಳು ಮತ್ತು ಇಂಧನ ಕ್ಷೇತ್ರದ ಮೂಲಸೌಕರ್ಯಗಳಲ್ಲಿ ಆಮೂಲಾಗ್ರ ಬದಲಾವಣೆ ತರುವ ಅಗತ್ಯವಿದೆ. ಹಾಗಾಗಿ, ಈಗ ನೀತಿ ರೂಪಿಸಿದರೂ ಅದರ ಜಾರಿಗೆ ಕೆಲವು ವರ್ಷಗಳು ಬೇಕಾಗುತ್ತವೆ.

ನಮ್ಮ ದೇಶದಲ್ಲಿ ಈಗ ತಯಾರಾಗುತ್ತಿರುವ ವಾಹನಗಳು ಇ85 ಪೆಟ್ರೋಲ್ ಬಳಸುವ ಸಾಮರ್ಥ್ಯ ಹೊಂದಿಲ್ಲ. ಅದಕ್ಕಾಗಿ ಪ್ರತ್ಯೇಕ ಎಂಜಿನ್‌ಗಳನ್ನೇ ವಾಹನ ಕಂಪನಿಗಳು ತಯಾರಿಸಬೇಕು. ಇಂಧನ ಶ್ರೇಣಿಯ ಎಥೆನಾಲ್ ತಯಾರಿಕಾ ಘಟಕಗಳು, ಪೆಟ್ರೋಲ್‌ಗೆ ಮಿಶ್ರಣ ಮಾಡುವ ಘಟಕಗಳ ಮೂಲಸೌಕರ್ಯಗಳನ್ನೂ ಬದಲಿಸಬೇಕಾಗುತ್ತದೆ. ಆಲ್ಕೋಹಾಲ್ ಪ್ರಮಾಣ ಹೆಚ್ಚಾಗಿರುವುದರಿಂದ ಪೆಟ್ರೋಲ್ ಬಂಕ್‌ಗಳಲ್ಲಿ ಅದರ ದಾಸ್ತಾನು, ಸಾಗಣೆ, ಸುರಕ್ಷತಾ ವ್ಯವಸ್ಥೆ ಸೇರಿದಂತೆ ಬಹುತೇಕ ಎಲ್ಲ ಮೂಲಸೌಕರ್ಯಗಳನ್ನೂ ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ.

ರೈತರ ವಿರೋಧ

ಪೆಟ್ರೋಲ್‌ನಲ್ಲಿ ಎಥೆನಾಲ್ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾವಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರಸ್ತಾವಿತ ಎಥೆನಾಲ್ ತಯಾರಿಕೆಯು ನೀರು, ಭೂಮಿ ಮತ್ತು ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ರೈತರು ವಾದಿಸುತ್ತಿದ್ದಾರೆ.

ರಾಜಸ್ಥಾನದ ಟಿಬ್ಬಿಯಲ್ಲಿ ಎಥೆನಾಲ್ ತಯಾರಿಕಾ ಘಟಕ ಆರಂಭಿಸಲು ಸರ್ಕಾರ ಮುಂದಾಗಿದ್ದು, ರೈತರು ಅದಕ್ಕೆ ಭಾರಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಎಥೆನಾಲ್ ತಯಾರಿಕಾ ಘಟಕವು ಅಪಾರ ಪ್ರಮಾಣದಲ್ಲಿ ನೀರನ್ನು ಬಳಸುವುದಲ್ಲದೇ, ಅಂತರ್ಜಲವನ್ನೂ ಮಲಿನಗೊಳಿಸುತ್ತದೆ ಎಂದು ರೈತರು ಆರೋಪಿಸಿದ್ದಾರೆ. ರೈತರ ನಿಯೋಗವು ಪಂಜಾಬ್‌ಗೆ ಹೋಗಿ ಅಲ್ಲಿದ್ದ ಎಥೆನಾಲ್ ತಯಾರಿಕಾ ಘಟಕದಿಂದ ಆಗುತ್ತಿರುವ ಪರಿಣಾಮಗಳನ್ನು ಅಧ್ಯಯನ ಮಾಡಿದ್ದರು. ಪಂಜಾಬ್‌ನಲ್ಲಿ ರೈತರ ಪ್ರತಿಭಟನೆಗಳಿಗೆ ಮಣಿದು ಎಥೆನಾಲ್ ತಯಾರಿಕಾ ಘಟಕವನ್ನು ಬಂದ್ ಮಾಡಲಾಗಿತ್ತು. ಅದೇ ರೀತಿ ರಾಜಸ್ಥಾನದಲ್ಲಿಯೂ ಘಟಕವನ್ನು ಮುಚ್ಚಬೇಕೆಂದು ರೈತರು ಆಗ್ರಹಿಸುತ್ತಿದ್ದಾರೆ.

• ಸೂರ್ಯನಾರಾಯಣ ವಿ., ಶ್ರೀನಾಥ್ ಬಿ.ವಿ.

ಪಶ್ಚಿಮ ಏಷ್ಯಾದಲ್ಲಿ ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಿಂದಾಗಿ ಭಾರತದ ಇಂಧನ ಭದ್ರತೆಗೆ ದೊಡ್ಡ ಸವಾಲು ಎದುರಾಗಿರುವ ಬೆನ್ನಲ್ಲೇ ಕೇಂದ್ರ ಸರ್ಕಾರವು ಸಸ್ಯಜನ್ಯವಾದ ಎಥೆನಾಲ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಬೆರೆಸಿರುವ ಪೆಟ್ರೋಲ್ ಬಳಕೆಗೆ ಉತ್ತೇಜನ ನೀಡಲು ಮುಂದಾಗಿದೆ. ಈಗಾಗಲೇ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡಿದ ಪೆಟ್ರೋಲ್ (ಇ20) ದೇಶದಲ್ಲಿ ಬಳಕೆಯಲ್ಲಿದ್ದು, ಎಥೆನಾಲ್ ಮಿಶ್ರಣವನ್ನು ಶೇ 85ಕ್ಕೆ ಏರಿಸಲು ಕೇಂದ್ರ ಸರ್ಕಾರ ಯೋಚಿಸುತ್ತಿದೆ. ಇ85 ಪೆಟ್ರೋಲ್‌ಗೆ ಸಂಬಂಧಿಸಿದಂತೆ ಕರಡು ನಿಯಮಗಳನ್ನು ಅದು ಶೀಘ್ರದಲ್ಲಿ ಪ್ರಕಟಿಸಲಿದೆ ಎಂದು ವರದಿಯಾಗಿದೆ.

ಇಂಧನಕ್ಕಾಗಿ ವಿದೇಶಿ ಅವಲಂಬನೆಯನ್ನು ಕಡಿಮೆ ಮಾಡುವುದರ ಜೊತೆಗೆ, ದೇಶದಲ್ಲಿ ಪರಿಸರಸ್ನೇಹಿ ಇಂಧನ ಬಳಕೆಗೆ ಪ್ರೋತ್ಸಾಹ ನೀಡುವುದು ಕೇಂದ್ರದ ಉದ್ದೇಶ. ಇದಕ್ಕೆ ಪೂರಕ ಎಂಬಂತೆ ನವದೆಹಲಿಯಲ್ಲಿ ಮಂಗಳವಾರ ಮಾತನಾಡಿದ್ದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು, ‘ಇಂಧನ ಕ್ಷೇತ್ರದಲ್ಲಿ ಭಾರತವು ಸ್ವಾವಲಂಬಿಯಾಗುವ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಶೇ 100ರಷ್ಟು ಎಥೆನಾಲ್ ಬಳಕೆಯತ್ತ ದೇಶ ಗಮನಹರಿಸಬೇಕು’ ಎಂದು ಹೇಳಿದ್ದಾರೆ.

> ಇ85 ಪೆಟ್ರೋಲ್ ಎಂದರೆ, ಅದರಲ್ಲಿ ಪೆಟ್ರೋಲ್ ಶೇ 15ರಷ್ಟು ಇದ್ದರೆ, ಉಳಿದ ಶೇ 85ರಷ್ಟು ಎಥೆನಾಲ್ ಇರುತ್ತದೆ. ಕೇಂದ್ರ ಸರ್ಕಾರವು ಇ20 ಮಾದರಿಯಲ್ಲಿ, ಇ85 ಪೆಟ್ರೋಲ್ ಅನ್ನು ಪ್ರತ್ಯೇಕ ವರ್ಗವಾಗಿ ಮಾರಾಟ ಮಾಡಲು ಯೋಚಿಸುತ್ತಿದೆ ಎಂದು ಹೇಳಲಾಗಿದೆ

ಇ20 ಪೆಟ್ರೋಲ್

ಕೇಂದ್ರದ ರಾಷ್ಟ್ರೀಯ ಜೈವಿಕ ಇಂಧನ ನೀತಿಯು ಸಸ್ಯಜನ್ಯ ಎಥೆನಾಲ್ ಅನ್ನು ಪೆಟ್ರೋಲ್‌ನೊಂದಿಗೆ ಬೆರೆಸುವುದಕ್ಕೆ ಪ್ರೋತ್ಸಾಹ ನೀಡುತ್ತಿದೆ. ದೇಶದಲ್ಲಿ ಎರಡು ದಶಕಗಳಿಂದ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಸಲಾಗುತ್ತಿದೆ. ಮಿಶ್ರಣದ ಪ್ರಮಾಣವನ್ನು ಹಂತ ಹಂತವಾಗಿ (ಶೇ 5, ಶೇ 10) ಹೆಚ್ಚಿಸಲಾಗಿದೆ. 2008–09ರಿಂದ ಈ ಪ್ರಕ್ರಿಯೆ ಆರಂಭವಾಗಿದ್ದು, ಕಳೆದ ವರ್ಷದಿಂದ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡಿದ ಪೆಟ್ರೋಲ್ ಅನ್ನೇ ದೇಶದಾದ್ಯಂತ ಪೂರೈಸಲಾಗುತ್ತಿದೆ. ಇ20 ಪೆಟ್ರೋಲ್ ನೀತಿ 2022ರಿಂದ ಜಾರಿಗೆ ಬಂದಿದೆ.

2023ರಲ್ಲಿ ಇ20 ಪೆಟ್ರೋಲ್‌ಗೆ ಚಾಲನೆ ನೀಡಲಾಗಿದೆ (ಆರಂಭದಲ್ಲಿ ಎಥೆನಾಲ್ ಮಿಶ್ರಣದ ಪ್ರಮಾಣ ಶೇ 14.06 ಇತ್ತು). ಈ ತಿಂಗಳ 1ರಿಂದ ದೇಶದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೆಟ್ರೋಲ್ ಬಂಕ್‌ಗಳಲ್ಲಿ ಇ20 ಪೆಟ್ರೋಲ್ ಮಾತ್ರ ಲಭ್ಯವಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ನೀತಿಯ ಪ್ರಕಾರ, ಪೆಟ್ರೋಲ್‌ಗೆ ಬೆರೆಸುವ ಎಥೆನಾಲ್ ಪ್ರಮಾಣವನ್ನು ಶೇ 27ರವರೆಗೂ ಹೆಚ್ಚಿಸಬಹುದು.

ಭಾರತವು 2030ರ ಒಳಗೆ ಶೇ 20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಸುವ ಗುರಿಯನ್ನು ಹೊಂದಿತ್ತು. ಐದು ವರ್ಷ ಮುಂಚಿತವಾಗಿಯೇ ಅದನ್ನು ಸಾಧಿಸಿದೆ.

ಕಾರ್ಯಕ್ಷಮತೆಗೆ ಹೊಡೆತ

ಇ20 ಪೆಟ್ರೋಲ್ ಬಳಕೆ ಆರಂಭಗೊಂಡ ನಂತರ ಹಳೆಯ ಪೆಟ್ರೋಲ್ ವಾಹನಗಳ ಕಾರ್ಯಕ್ಷಮತೆ ಕುಸಿದಿರುವ, ಎಂಜಿನ್‌ಗಳಿಗೆ ಹಾನಿಯಾಗುತ್ತಿರುವ ಬಗ್ಗೆ ಈಗಲೂ ಚರ್ಚೆ ನಡೆಯುತ್ತಿದೆ. ಎಂಜಿನ್‌ನಲ್ಲಿ ಬಳಸುವ ಗ್ಯಾಸ್ಕೆಟ್ ಹಾಗೂ ಕೆಲವು ರಬ್ಬರ್ ಬಿಡಿ ಭಾಗಗಳನ್ನು ಬದಲಿಸಿದರೆ, ಈ ಸಮಸ್ಯೆಯನ್ನು ಬಗೆಹರಿಸಬಹುದು ಎಂದು ಕೇಂದ್ರ ಸರ್ಕಾರ ಹೇಳಿದರೂ, 2023ಕ್ಕಿಂತಲೂ ಮೊದಲು ತಯಾರಾದ ವಾಹನಗಳ ಮಾಲೀಕರು, ಚಾಲಕರು ಈಗಲೂ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. 2023ರ ನಂತರ ತಯಾರಾದ ವಾಹನಗಳು, ಇ20 ಪೆಟ್ರೋಲ್ ಬಳಕೆಗೆ ಅರ್ಹವಾಗಿವೆ.

ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಬೆರೆಸಿರುವ ಪೆಟ್ರೋಲ್ ಬಳಸಬೇಕಾದರೆ, ಅದಕ್ಕೆ ಸರಿ ಹೊಂದುವ ಎಂಜಿನ್‌ಗಳ ಅಗತ್ಯವಿದೆ. ಶೇ 5, ಶೇ 10ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಲಭ್ಯವಿದ್ದಾಗ ಕಾರುಗಳ ಮೈಲೇಜ್ ಕಡಿಮೆಯಾಗುವುದಾಗಲೀ, ಎಂಜಿನ್‌ಗೆ ತುಕ್ಕು ಹಿಡಿಯುವುದಾಗಲಿ ಮುಂತಾದ ತೊಂದರೆ ಕಂಡುಬಂದಿರಲಿಲ್ಲ. ಆದರೆ, ಎಥೆನಾಲ್ ಮಿಶ್ರಣದ ಪ್ರಮಾಣವನ್ನು ಶೇ 20ಕ್ಕೆ ಏರಿಸಿದಾಗ ಈ ಸಮಸ್ಯೆ ಉಂಟಾಗಿತ್ತು. ಇ20 ಪೆಟ್ರೋಲ್ ಪೂರೈಕೆ ಆರಂಭವಾಗಿ ವರ್ಷ ಕಳೆದರೂ ಇದಕ್ಕೆ ಪೂರ್ಣ ಪರಿಹಾರ ಸಿಕ್ಕಿಲ್ಲ.

ಇ85 ಹೊಸದಲ್ಲ

ಶೇ 85ರಷ್ಟು ಎಥೆನಾಲ್ ಮಿಶ್ರಣದ ಪೆಟ್ರೋಲ್‌ನ ಪರಿಕಲ್ಪನೆ ಹೊಸದೇನಲ್ಲ. ಅಮೆರಿಕ, ಯುರೋಪಿನ ಹಲವು ರಾಷ್ಟ್ರಗಳಲ್ಲಿ ಇದು ಈಗಾಗಲೇ ಬಳಕೆಯಲ್ಲಿದೆ. ಶೇ 100ರ ಎಥೆನಾಲ್ ಮಿಶ್ರಿತ, ಅಂದರೆ ಇ100 ಪೆಟ್ರೋಲ್ ಅನ್ನು ಬಳಸುವ ರಾಷ್ಟ್ರಗಳಿವೆ. ಬ್ರೆಜಿಲ್‌ನಲ್ಲಿ ಇ100 ಪೆಟ್ರೋಲ್ ಬಳಸುವ ಕಾರುಗಳು ದೊಡ್ಡ ಸಂಖ್ಯೆಯಲ್ಲಿವೆ.

ಆದರೆ, ಸಾಮಾನ್ಯ ಪೆಟ್ರೋಲ್ ಎಂಜಿನ್ ಹೊಂದಿರುವ ಕಾರುಗಳಲ್ಲಿ ಈ ಪೆಟ್ರೋಲ್ ಅನ್ನು ಬಳಸಲು ಸಾಧ್ಯವಿಲ್ಲ. ಈ ಇಂಧನವನ್ನು ಬಳಸಲು ಪ್ರತ್ಯೇಕ ಎಂಜಿನ್‌ಗಳು ಬೇಕು. ಇವುಗಳನ್ನು ಫ್ಲೆಕ್ಸ್–ಫ್ಯುಯಲ್ ಎಂಜಿನ್‌ಗಳು ಎನ್ನಲಾಗುತ್ತದೆ. ಇವುಗಳು ಪೆಟ್ರೋಲ್, ಇ85, ಇ100 ಪೆಟ್ರೋಲ್ ಬಳಸುವ ಸಾಮರ್ಥ್ಯವನ್ನು ಹೊಂದಿವೆ.

ಆಧಾರ: ಪಿಟಿಐ, ರಾಯಿಟರ್ಸ್, ಪಿಐಬಿ, ಮಾಧ್ಯಮ ವರದಿಗಳು

ತಯಾರಿಕೆ ಹೇಗೆ?

ಎಥೆನಾಲ್ ಅನ್ನು ಮುಖ್ಯವಾಗಿ ಜೋಳ, ಧಾನ್ಯಗಳು ಮತ್ತು ಕಬ್ಬಿನಿಂದ ತಯಾರಿಸಲಾಗುತ್ತದೆ; ವಿವಿಧ ಆಹಾರ ಧಾನ್ಯಗಳು, ಕಾಳು, ಮನುಷ್ಯರು ಸೇವನೆ ಮಾಡಲು ಅರ್ಹವಲ್ಲದ ಅಕ್ಕಿ, ಜೋಳ, ಕಬ್ಬಿನ ಹಾಲು, ಕಾಕಂಬಿ, ಕೃಷಿ ತ್ಯಾಜ್ಯವನ್ನು ಬಳಸಿ ಎಥೆನಾಲ್ ತಯಾರಿಸಲಾಗುತ್ತದೆ.

ಪೆಟ್ರೋಲ್‌ಗೆ ಹೋಲಿಸಿದರೆ ಎಥೆನಾಲ್ ತಯಾರಿಕಾ ವೆಚ್ಚವೂ ಹೆಚ್ಚು. ಜೋಳದಿಂದ ಒಂದು ಲೀಟರ್ ಎಥೆನಾಲ್ ತಯಾರಿಸಲು ₹71ರವರೆಗೂ ವೆಚ್ಚವಾಗುತ್ತದೆ.

ಪೆಟ್ರೋಲ್ ಜತೆಗೆ ಎಥೆನಾಲ್ ಅನ್ನು ಬೆರೆಸುವುದನ್ನು ನಿರಂತರವಾಗಿ ಮುಂದುವರಿಸಲು ಹೆಚ್ಚು ಜೋಳ ಬೆಳೆಯಬೇಕು. ಅದಕ್ಕಾಗಿ 2030ರ ಹೊತ್ತಿಗೆ ದೇಶದಲ್ಲಿ ಹೆಚ್ಚುವರಿಯಾಗಿ 40 ಲಕ್ಷ ಹೆಕ್ಟೇರ್‌ನಿಂದ 80 ಲಕ್ಷ ಹೆಕ್ಟೇರ್‌ಗಳಷ್ಟು ಹೆಚ್ಚುವರಿ ಭೂಮಿಯಲ್ಲಿ ಜೋಳ ಬೆಳೆಯಬೇಕು ಎಂದು ಬೆಂಗಳೂರಿನ ಸೆಂಟರ್ ಫಾರ್ ಸೈನ್ಸ್, ಟೆಕ್ನಾಲಜಿ ಮತ್ತು ಪಾಲಿಸಿ ಎನ್ನುವ ಚಿಂತಕರ ಚಾವಡಿ ಹೇಳಿದೆ.

ರಾಷ್ಟ್ರೀಯ

ಮಾನದಂಡಗಳ ವ್ಯಾಖ್ಯಾನ ಕಷ್ಟ: ಸುಪ್ರೀಂ ಕೋರ್ಟ್

ಧಾರ್ಮಿಕ ಆಚರಣೆಗಳು ಅಗತ್ಯವೇ?

ನವದೆಹಲಿ (ಪಿಟಿಐ): ಯಾವುದೇ ಒಂದು ನಿರ್ದಿಷ್ಟ ವಿಧಿ, ಧಾರ್ಮಿಕ ಆಚರಣೆಗಳ ಅಗತ್ಯ ಅಥವಾ ಅನಗತ್ಯ ಭಾಗ ಎಂಬುದಾಗಿ ಗುರುತಿಸುವುದಕ್ಕೆ ಬೇಕಾದ ಮಾನದಂಡಗಳ ವ್ಯಾಖ್ಯಾನವು ನ್ಯಾಯಾಂಗಕ್ಕೆ ಅಸಾಧ್ಯವಲ್ಲದಿದ್ದರೂ, ಬಹಳ ಕಷ್ಟಕರ ಸಂಗತಿ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

‘ಹಿಂದೂಗಳ ಒಂದು ನಿರ್ದಿಷ್ಟ ಧಾರ್ಮಿಕ ಪಂಗಡ ಕೆಲವು ಸಂಪ್ರದಾಯಗಳನ್ನು ಪಾಲನೆ ಮಾಡುತ್ತಿದ್ದಲ್ಲಿ ಹಾಗೂ ಅವುಗಳು ನೈತಿಕತೆ, ಸಾರ್ವಜನಿಕ ವ್ಯವಸ್ಥೆ ಹಾಗೂ ಆರೋಗ್ಯಕ್ಕೆ ಧಕ್ಕೆ ತರುವಂತಿದ್ದಲ್ಲಿ ಅಂತಹ ಆಚರಣೆಗಳನ್ನು ಅಗತ್ಯ ಧಾರ್ಮಿಕ ವಿಧಿಗಳೆಂದು ಹೇಳಲಾಗದು’ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಒಂಬತ್ತು ಸದಸ್ಯರ ಸಂವಿಧಾನ ಪೀಠ ಹೇಳಿದೆ.

ಯಾವುದೇ ಒಂದು ಧರ್ಮದವರು ಅನುಸರಿಸುವ ಧಾರ್ಮಿಕ ಆಚರಣೆಗಳು ನೈತಿಕತೆ, ಸಾರ್ವಜನಿಕ ವ್ಯವಸ್ಥೆ ಹಾಗೂ ಆರೋಗ್ಯಕ್ಕೆ ಹಾನಿ ಉಂಟು ಮಾಡದೇ ಇದ್ದರೆ, ಅಂತಹ ಆಚರಣೆಗಳಿಗೆ ಸಂವಿಧಾನದಡಿ ರಕ್ಷಣೆ ಇದೆ. ಆದರೆ, ಯಾವುದೇ ಆಚರಣೆಯು ‘ಅಗತ್ಯ’ ಎಂಬ ಉಲ್ಲೇಖ ಸಂವಿಧಾನದಲ್ಲಿಲ್ಲ ಎಂದೂ ಪೀಠ ಹೇಳಿದೆ.

ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನ ಸೇರಿ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರನ್ನು ತಾರತಮ್ಯದಿಂದ ನೋಡಲಾಗುತ್ತಿದೆ ಎಂಬುದಕ್ಕೆ ಸಂಬಂಧಿಸಿದ ಅರ್ಜಿಗಳ ಕುರಿತು ಏಳನೇ ದಿನವೂ ನಡೆದ ವಿಚಾರಣೆ ವೇಳೆ ಪೀಠ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದ್ರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ ಕುಮಾರ್, ಆಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ.ವರಾಳೆ, ಆರ್.ಮಹಾದೇವನ್ ಹಾಗೂ ಜಾಯ್‌ಮಾಲ್ಯಾ ಬಾಗ್ಚಿ ಈ ಪೀಠದಲ್ಲಿದ್ದಾರೆ.

ಮಧ್ಯಸ್ಥಿಕೆದಾರರ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ, ‘ಒಂದು ಪಂಗಡ ಅನುಸರಿಸುವ ಸಿದ್ಧಾಂತ ಅಥವಾ ನಂಬಿಕೆಗಳ ಆಧಾರದಲ್ಲಿ ಧರ್ಮವನ್ನು ವ್ಯಾಖ್ಯಾನಿಸಲಾಗದು. ಹೇಗೆ ಪೂಜಿಸಬೇಕು ಮತ್ತು ಯಾವಾಗ ಪೂಜಿಸಬೇಕು ಎಂಬುದನ್ನು ಆ ಧಾರ್ಮಿಕ ಆಚರಣೆಗಳಲ್ಲಿ ನಂಬಿಕೆವುಳ್ಳವರೇ ನಿರ್ಧರಿಸಬೇಕು. ಹೀಗಾಗಿ, ದಯವಿಟ್ಟು ಈ ವಿಷಯದಲ್ಲಿ ಹೊಸ ವಿಚಾರಗಳನ್ನು ತರಬಾರದು ಅಥವಾ ಹಳೆಯದನ್ನು ಬದಲಾಯಿಸಬಾರದು’ ಎಂದು ಪೀಠಕ್ಕೆ ಅರುಹಿದರು.

‘ಇಂತಹ ವಿಚಾರವನ್ನು ಒಂದು ಸಾಧನವನ್ನಾಗಿ ಬಳಸಬಾರದು. ಹೀಗಾಗದಲ್ಲಿ ಅದು ಭವಿಷ್ಯದಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ದೇವರನ್ನು ಹೇಗೆ ಆರಾಧಿಸಬೇಕು ಎಂಬ ಬಗ್ಗೆ ನಿರ್ಧಾರ ಕೈಗೊಳ್ಳುವುದನ್ನು ಆಯಾ ಧಾರ್ಮಿಕ ಪಂಗಡಗಳಿಗೇ ಬಿಟ್ಟುಬಿಡಿ’ ಎಂದು ಕೋರಿದರು.

ವಾದ–ಪ್ರತಿವಾದಗಳನ್ನು ಆಲಿಸಿದ ಪೀಠ, ವಿಚಾರಣೆಯನ್ನು ಗುರುವಾರವೂ ಮುಂದುವರಿಸುವುದಾಗಿ ಹೇಳಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸೇನಾ ವಾಹನಗಳು ಒಂದರ ಹಿಂದೆ ಒಂದು ಸಾಲುಗಟ್ಟಿ ಸಾಗುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಿಜೆಪಿ ಬೆಂಬಲಿತ ಇನ್‌ಫ್ಲುಯೆನ್ಸರ್ ಓಶನ್ ಜೈನ್ ಎನ್ನುವವರು ವಿಡಿಯೊ ಅನ್ನು ಹಂಚಿಕೊಂಡು, ‘ಇನ್ನು ಮಾತುಕತೆ ಇರುವುದಿಲ್ಲ. ನೇರ, ನಿರಂತರ ಸೇನಾ ಕಾರ್ಯಾಚರಣೆ ಆರಂಭವಾಗಿದೆ. ಬಂಗಾಳದಲ್ಲಿ ಮುಸ್ಲಿಂ ಆಡಳಿತ ಅಂತ್ಯವಾಗಿದೆ. ಹಿಂದೂಗಳ ಆಡಳಿತ ಅಸ್ತಿತ್ವಕ್ಕೆ ಬರಲಿದೆ’ ಎಂದು ಪ್ರತಿಪಾದಿಸಿದ್ದಾರೆ. ಹಲವರು ಈ ಪೋಸ್ಟ್ ಹಂಚಿಕೊಂಡಿದ್ದು, ರಾಜ್ಯದಲ್ಲಿ ಹಿಂದೂಗಳ ರಕ್ಷಣೆಗಾಗಿ ಸೇನೆಯನ್ನು ನಿಯೋಜಿಸಲಾಗಿದೆ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಈಶಾನ್ಯ ಭಾರತದ ಯೂಟ್ಯೂಬರ್ ನೇಹಾ ಗುರುಂಗ್ ಅವರು ವಿಡಿಯೊ ಅನ್ನು 2025ರ ಫೆಬ್ರುವರಿಯಲ್ಲಿ ಎಕ್ಸ್‌ನಲ್ಲಿ ಹಂಚಿಕೊಂಡಿದ್ದು ಕಂಡಿತು. ಭಾರತೀಯ ಸೇನೆಯು ಮಣಿಪುರದ ಇಂಫಾಲ್‌ನಲ್ಲಿ ಧ್ವಜವಂದನೆ ಸಲ್ಲಿಸಿದ ಸಂದರ್ಭದ ವಿಡಿಯೊ ಇದು ಎಂದು ಅವರು ಉಲ್ಲೇಖಿಸಿದ್ದಾರೆ. ವಿಡಿಯೊದಲ್ಲಿ ಕಾಣುವ ರಸ್ತೆ ಪಕ್ಕದ ಫಲಕವೊಂದರಲ್ಲಿ ಸೌಗೈಜಮ್ ಲೈರಕ್ ಎನ್ನುವ ಹೆಸರಿದ್ದು, ಇದು ಇಂಫಾಲ್‌ನ ಭಾಗವಾಗಿದೆ. ಇಂಫಾಲ್‌ನಲ್ಲಿ ಸೇನಾ ವಾಹನಗಳು ಓಡಾಡುವ ವಿಡಿಯೊ ಅನ್ನು ಹಂಚಿಕೊಂಡು, ಅದನ್ನು ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಗೆ ತಳಕು ಹಾಕಿ, ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಒಳಿತು-ಕೆಡುಕು

ನುಡಿ ಬೆಳಗು

ಪಿ.ಚಂದ್ರಿಕಾ

ಒಮ್ಮೆ ಹೀಗಾಯಿತು. ಒಂದು ಮಧ್ಯಾಹ್ನ ರಾಮಕೃಷ್ಣ ಪರಮಹಂಸರಿಗೆ ಶಾರದಾದೇವಿಯ ಬದಲಾಗಿ ಒಬ್ಬ ಹೆಂಗಸು ಅತ್ಯಂತ ಭಕ್ತಿಯಿಂದ ಊಟವನ್ನು ತಂದಿಟ್ಟು ಹೋಗುತ್ತಾಳೆ. ತಮ್ಮ ಮುಂದೆ ಊಟ ಇಟ್ಟು ಹೋದ ಹೆಂಗಸಿನ ಬಗ್ಗೆ ಗೊತ್ತಿದ್ದುದರಿಂದ ಪರಮಹಂಸರಿಗೆ ಮುಜುಗರವಾಯಿತು. ಇಂಥಾ ಹೆಂಗಸಿನ ಕೈ ಸೋಕಿದ ಆಹಾರವನ್ನು ತಿನ್ನಲು ಸಾಧ್ಯವೇ ಎಂದು ಚಿಂತಿತರಾದರು. ಅವರ ಮನಸ್ಸು ಊಟದ ಬದಲಿಗೆ ಆ ಹೆಂಗಸಿನ ಬಗ್ಗೆ ಯೋಚಿಸುತ್ತಿತ್ತು. ಯಾಕೆಂದರೆ ಆಕೆ ಸಮಾಜ ನಿರೀಕ್ಷಿಸುವಂಥ ಒಳ್ಳೆಯ ಹೆಂಗಸಾಗಿರಲಿಲ್ಲ. ಪತ್ನಿಯನ್ನು ಕರೆದು ‘ನಿನಗೆ ಸ್ವಲ್ಪವಾದರೂ ನನ್ನ ಬಗ್ಗೆ ಯೋಚನೆಯಿಲ್ಲ, ಅಂಥಾ ಹೆಂಗಸಿನ ಕೈ ಮುಟ್ಟಿದ ಊಟವನ್ನು ನಾನು ಮಾಡಲೇ?’ ಎಂದು ಪ್ರಶ್ನಿಸಿದರು. ಶಾರದಾಮಾತೆ, ‘ಊಟಕ್ಕೆ ಅವಳ ಕೆಟ್ಟತನ ಅಂಟಿಲ್ಲ ತಿನ್ನಬಹುದು’ ಎಂದರು. ಆದರೆ ಪರಮಹಂಸರಿಗೆ ಮಾತ್ರ ಊಟವನ್ನು ಮುಟ್ಟುವ ಮನಸ್ಸಾಗದೆ, ‘ನೀನು ಎಂಥಾ ಕೆಲಸ ಮಾಡಿಬಿಟ್ಟೆ ಅವಳ ವಿಚಾರ ಗೊತ್ತಿದ್ದೂ ನೀನು ಅವಳ ಕೈಲಿ ಯಾಕೆ ಊಟ ಕಳಿಸಿದೆ?’ ಎಂದು ಖಿನ್ನರಾದರು.

ಶಾರದಾದೇವಿ, ‘ನನಗೆ ಎಲ್ಲವೂ ಗೊತ್ತಿದೆ. ನಿಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ತೆಗೆದು ಪಕ್ಕಕ್ಕಿಟ್ಟು ಊಟ ಮಾಡಿರಿ’ ಎಂದು ಪರಮಹಂಸರಲ್ಲಿ ಬೇಡಿಕೊಳ್ಳುತ್ತಾರೆ. ಆದರೆ ಪರಮಹಂಸರದ್ದು ಒಂದೇ ಹಟ, ‘ಇನ್ನು ಮುಂದೆ ನೀನಲ್ಲದೆ ಬೇರೆಯವರ ಕೈಲಿ ಊಟ ಕಳಿಸುವುದಿಲ್ಲ ಅಂತ ನನಗೆ ಪ್ರಮಾಣ ಮಾಡು’ ಎನ್ನುತ್ತಾರೆ. ಶಾರದಾದೇವಿ, ಅತ್ಯಂತ ವಿನಮ್ರವಾಗಿ ಕೈಜೋಡಿಸಿ, ‘ದಯವಿಟ್ಟು ಇದೊಂದನ್ನು ಮಾತ್ರ ಕೇಳಬೇಡಿ ನನ್ನಿಂದ ಸಾಧ್ಯವಿಲ್ಲ’ ಎನ್ನುತ್ತಾರೆ. ಪರಮಹಂಸರಿಗೆ ಅಚ್ಚರಿ, ತನ್ನ ಯಾವ ಮಾತನ್ನೂ ತೆಗೆದುಹಾಕದ ಶಾರದಾದೇವಿ ಇವತ್ತು ಯಾಕೆ ಹೀಗೆ ಮಾತಾಡುತ್ತಿದ್ದಾರೆಂದು. ಆದರೂ ಹಟ ಬಿಡದೆ ಮತ್ತೆ ಕೇಳುತ್ತಾರೆ. ಶಾರದಾದೇವಿ, ‘ಇಲ್ಲ ಇದು ನನ್ನಿಂದ ಸಾಧ್ಯವಿಲ್ಲ, ನಾನು ನಿಮಗೆ ಊಟವನ್ನು ತರುವಾಗ ಯಾರೋ ಎದುರಾಗುತ್ತಾರೆ. ಅಮ್ಮಾ ನಾವು ಗುರುಗಳಿಗೆ ಕೊಡುತ್ತೇವೆ ಕೊಡಿ ಎನ್ನುತ್ತಾರೆ. ಅಮ್ಮಾ ಎನ್ನುವ ಪದ ಕಿವಿಗೆ ಬಿದ್ದ ತಕ್ಷಣ ನಿಮ್ಮ ಹೆಂಡತಿ ಎನ್ನುವುದನ್ನು ಮರೆಯುತ್ತೇನೆ. ನೀವು ನನಗೆ ಮಾತ್ರ ಸೇರಿದವರು ಎನ್ನುವುದು ಅಳಿದುಹೋಗುತ್ತದೆ. ನನ್ನೊಳಗಿನ ತಾಯ್ತನಕ್ಕೆ ಅಮ್ಮ ಎಂದು ಕರೆದ ಅವರ ಪ್ರೀತಿಯಷ್ಟೇ ಕಾಣುತ್ತದೆ. ಅವರ ಕೈಲಿ ಕಳಿಸಿಕೊಡುತ್ತೇನೆ’ ಎನ್ನುತ್ತಾರೆ.

ಪರಮಹಂಸರು ಮತ್ತೆ ಆಕ್ಷೇಪಿಸುತ್ತಾ, ‘ಸಿಕ್ಕವರು ಕೇಳಿದರೆ ನೀನು ಕೊಟ್ಟುಬಿಡುವುದೇ ಅವರು ಯಾರು ಏನು ಎಂದು ವಿವೇಚಿಸಬೇಕಲ್ಲವೇ?’ ಎನ್ನುತ್ತಾರೆ. ಶಾರದಾದೇವಿ ನಗುತ್ತಾರೆ, ‘ನೀವು ಎಲ್ಲರಿಗೂ ಸೇರಿದವರು-ಕೆಟ್ಟವರು ಒಳ್ಳೆಯವರು ಎಂದು ನೋಡಿ ಆಗಿರುವುದಲ್ಲ ಇದು. ಅವಳೂ ಒಬ್ಬ ತಾಯಿ. ತಾಯಿ ಎಂದರೆ ದೈವಸ್ವರೂಪಿ. ಅವಳು ಜಗತ್ತು ಬಯಸದ ಕೆಲಸ ಮಾಡಿದ್ದಾಳೆ ಅಂದರೆ ಅನಿವಾರ್ಯ ಏನಿತ್ತೋ ನಾವು ನೋಡುವ ನೋಟ ಸರಿಯಾಗಿದ್ದರೆ ಜಗತ್ತೆಲ್ಲಾ ಒಳಿತಾಗೇ ಕಾಣುತ್ತದೆ’ ಎನ್ನುತ್ತಾರೆ. ಶಾರದಾಮಾತೆಯ ಮಾತಿನ ಮಹತ್ವವನ್ನು ಮನಗೊಂಡ ಪರಮಹಂಸರು ಮಡಿ- ಮೈಲಿಗೆ, ಶುದ್ಧ- ಅಶುದ್ಧ, ಶೀಲ- ಕುಲಟೆ ಎನ್ನುವ ಎಲ್ಲವನ್ನೂ ಮರೆತು ಉಣ್ಣಲಾರಂಭಿಸುತ್ತಾರೆ.

ಎಂಥಾ ಜ್ಞಾನಿಯೇ ಆದರೂ ಮಾತೃತ್ವದ ಸ್ಪರ್ಶ ಸಿಗದೇ ಹೋದರೆ ಅದು ಪರಿಪೂರ್ಣ ಆಗಲಾರದು ಅಲ್ಲವೇ. ಶಾರದಾಮಾತೆ ಪರಮಹಂಸರ ಅಧ್ಯಾತ್ಮಕ್ಕೆ ಮಾತೃಸ್ವರೂಪಿಣಿಯಾಗಿ ದಕ್ಕಿದ್ದರು.

ಪದಬಂಧ 6382

ಎಡದಿಂದ ಬಲಕ್ಕೆ
2. ಕಪಟವನ್ನು ತಿಳಿಯದವನು (2)
3. ನೆಲ ಅಗೆಯುವ ಸಾಧನ (3)
5. ಹೂವಿನಲ್ಲಿರುವ ಸಿಹಿ ರಸ (4)
7. ಕೆಂಪು ಲೋಹವಿಲ್ಲಿ ಉಲ್ಟಾ ಆಗಿದೆ (2)
9. ಗುಣವನ್ನು ಗ್ರಹಿಸುವವನು (4)
10. ಅಲೆಯುತ್ತಿರುವಾಗ ತರಂಗ ಕಾಣಿಸಿತಲ್ಲಾ! (2)
11. ನಿಧಾನ ಎಂದು ಹೀಗೆ ಹೇಳಿ (2)
12. ಅಂತರಂಗ ಪ್ರೇರಣೆಯಿದು (4)
13. ಸಮುದ್ರದಲ್ಲಿ ಸಿಗುವ ಒಂದು ಬಗೆಯ ಚಿಪ್ಪು (2)
14. ಮಲಯ ಪರ್ವತದಲ್ಲಿರುವ ಶ್ರೀಗಂಧ (4)
16. ವರ ತೋರಿಸಿದ ವ್ಯಾಯಾಮದ ಪಟ್ಟು! (3)
17. ಚಪ್ಪಡಿ ಕಲ್ಲಿನ ಹತ್ತಿರವೇ ಬೆತ್ತವಿದೆ (2)

ಮೇಲಿಂದ ಕೆಳಕ್ಕೆ
1. ಪ್ರೀತಿಗೊಂದು ಪರ್ಯಾಯ ಪದ (2)
2. ಮುನಿದವನಲ್ಲಿ ಸಂತೋಷ ಕಾಣುತ್ತಿದೆಯೇ? (2)
3. ತಂದೆಯ ತಾಯಿ (4)
4. ಸಂಪದ್ಯುಕ್ತವಾದ ಕನ್ನಡ ಭಾಷೆ (5)
6. ಕಲೆಯಿಂದ ಕೂಡಿರುವ ಆಹ್ವಾನ (4)
8. ಕೆಲಸಕ್ಕೆ ಬಾರದ ಮಾತು (5)
10. ಒಂದನ್ನೊಂದು ಅಗಲದೇ ಇರುವಿಕೆ (5)
11. ಬುನಾದಿಯನ್ನು ಹೀಗೂ ಹೇಳುವರು (4)
12. ಇದು ಆತ್ಮಪ್ರಶಂಸೆ (4)
14. ಒಗೆದು ಶುಭ್ರ ಮಾಡಿದ ಬಟ್ಟೆ (2)
15. ಜರತಾರಿಯಲ್ಲಿ ಲಕ್ಷ್ಮೀ ಚೇಳು ಕಾಣುತ್ತಿದೆ (2)



6381ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮನೆತನ 3.ಅನುಕೂಲ 5.ಕಲರವ 7.ಸಹಜ 8.ನಿರಪರಾಧಿ 12.ಸಮೀಕ್ಷೆ 13.ಸಹಕಾರ 15.ನವನೀತ 16.ವನಚರ

ಮೇಲಿಂದ ಕೆಳಕ್ಕೆ: 1.ಮಧುಕರಿ 2.ತವರ 4.ಲವಾಜಮೆ 6.ವಕ್ತಾರ 7.ಸಮಾಧಿ 8.ನಿರೀಕ್ಷೆ 9.ರಾಯಸ 10.ವಾಸಸ್ಥಾನ 11.ಪುರಸ್ಕಾರ 14.ಹವನ

ಸುಡೊಕು 6765

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		5	8	7		4	1	
2								
		4			2	8		6
3		6	7		8	5		9
	7						8	
8		1				3		7
4			6		1		9	
	3				5	7		8
6		8	2	3			5	

6764 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಏಪ್ರಿಲ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು, ತಿಥಿ: ವೈಶಾಖ ಶುಕ್ಲ ಸಪ್ತಮಿ ಗಂ. 20-50, **ನಕ್ಷತ್ರ:** ಪುನರ್ವಸು 20-58, **ಯೋಗ:** ಸುಕರ್ಮ ಗಂ. 6-08 ನಂತರ ಧೃತಿ ಗಂ. 27-33, **ಕರಣ:** ಗರ ಗಂ. 9-46 ಮೇಷ ಮಾಸದ 10 ನೇ ದಿನ. **ಮಳೆ ನಕ್ಷತ್ರ:** ಅಶ್ವಿನಿ 3 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00, **ಸೂರ್ಯೋದಯ:** 06-17, **ಸೂರ್ಯಾಸ್ತ:** 06-41, **ಮುಸ್ಲಿಂ ದಿನಾಂಕ:** 4 ಜುಲ್ಕಾದಾ, **ಅದೃಷ್ಟ ಸಂಖ್ಯೆ:** 10, 5

ಮೇಷ: ಏಕಮುಖ ಪ್ರತಿಭೆಯನ್ನು ಹೊರತುಪಡಿಸಿ, ಇತರ ವಿಷಯಗಳಿಗೂ ಪ್ರಾಮುಖ್ಯ ನೀಡಿ. ಕೃಷಿ ಮತ್ತು ಹೈನು ಉತ್ಪನ್ನಗಳಲ್ಲಿನ ವ್ಯಾಪಾರಗಳಿಂದ ಹೇರಳ ಲಾಭವಿದೆ. ಸ್ವಪ್ರಯತ್ನದಿಂದ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ.

ವೃಷಭ: ವಿದೇಶಿ ಸ್ನೇಹಿತರಿಂದ ವ್ಯಾವಹಾರಿಕ ಸಲಹೆಯನ್ನು ಪಡೆಯುವಂತಾಗಲಿದೆ. ಕನಸುಗಳು ನನಸಾಗುವ ಲಕ್ಷಣಗಳೂ ಕಂಡು ಬರುವವು. ವಾಣಿಜ್ಯ ಸಂಸ್ಥೆಯಲ್ಲಿ ಕೆಲಸ ಸಂಪಾದಿಸಿಕೊಳ್ಳುವ ಪ್ರಯತ್ನ ಮಾಡಬಹುದು.

ಮಿಥುನ: ಇತರರು ನಿಮ್ಮ ವಿಶ್ವಾಸವನ್ನು ದುರುಪಯೋಗಪಡಿಸಿಕೊಳ್ಳದಂತೆ ಜಾಗರೂಕತೆ ವಹಿಸಿ. ಲೇವಾದೇವಿ ವ್ಯವಹಾರಗಳನ್ನು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ಸಂಜೆಯ ವೇಳೆ ಪ್ರೀತಿ ಪಾತ್ರರೊಡನೆ ಕಾಲ ಕಳೆಯುವಿರಿ.

ಕರ್ಕಾಟಕ: ರಾತ್ರಿಯ ಸಮಯದಲ್ಲಿ ಪ್ರಯಾಣ ಮಾಡಿದ ಕಾರಣದಿಂದಾಗಿ ಹಗಲು ಹೊತ್ತಿನಲ್ಲಿ ದೇಹಾಯಾಸ ಉಂಟಾಗಬಹುದು. ವಾದ ಮಾಡುವ ಬದಲು ಕುಟುಂಬದ ನೆಮ್ಮದಿಗಾಗಿ ಸೋಲನ್ನು ಒಪ್ಪಿಕೊಳ್ಳುವುದು ಉತ್ತಮ.

ಸಿಂಹ: ನಿಮ್ಮ ಮನಸ್ಸಿನ ಭಾವನೆಗಳಿಗೆ ಕಿವಿಗೊಡುವುದು ಇಂದಿನ ಪಾಲಿಗೆ ಬುದ್ಧಿವಂತಿಕೆಯ ನಡೆ. ಬೇಕರಿ ವ್ಯಾಪಾರಿಗಳಿಗೆ ಸಿಹಿ ಪದಾರ್ಥಗಳ ಮಾರಾಟದಿಂದ ಅಧಿಕ ಲಾಭ. ಗೃಹಿಣಿಯರಿಗೆ ಇಷ್ಟಾರ್ಥಗಳು ಸಿದ್ಧಿಯಾಗುವುವು.

ಕನ್ಯಾ: ಕೌಟುಂಬಿಕ ವಿಷಯಗಳಲ್ಲಿ ಸಹೋದರ ಸಹೋದರಿಯರ ವಿಶ್ವಾಸದಿಂದ ಖುಷಿ ಸಿಗುವುದು. ಆಸ್ತಿ ಮಾರಾಟಗಳ ವಹಿವಾಟುಗಳಲ್ಲಿ ಲಾಭವನ್ನು ಕಾಣುವಿರಿ. ಮನೆಯ ವಿಷಯಗಳ ಕಡೆಗೆ ಹೆಚ್ಚಿನ ಗಮನಹರಿಸಿ.

ತುಲಾ: ನಿಮ್ಮ ಮಕ್ಕಳನ್ನು ಹೊರಗಿನ ಅನನುಕೂಲಕರ ಪರಿಸ್ಥಿತಿಗಳಿಂದ ರಕ್ಷಣೆ ಮಾಡಲು ಸರ್ವಪ್ರಯತ್ನಗಳನ್ನು ಮಾಡುವಿರಿ. ನಿಮ್ಮ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಹುಡುಕುವ ಸಲುವಾಗಿ ವಿದ್ವಾಂಸರನ್ನು ಭೇಟಿಯಾಗುವಿರಿ.

ವೃಶ್ಚಿಕ: ಎಣ್ಣೆಯಲ್ಲಿ ಕರಿದ ವಸ್ತುಗಳ ಮಾರಾಟಗಾರರಿಗೆ ವ್ಯವಹಾರ ವಿಸ್ತಾರಕ್ಕೆ ಅವಕಾಶವಿದೆ. ಪುಸ್ತಕ ವ್ಯಾಪಾರಿಗಳಿಗೆ ಅಥವಾ ಪ್ರಕಾಶಕರಿಗೆ ನಿರೀಕ್ಷಿತ ಲಾಭ. ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳವಿರಲಿದೆ.

ಧನು: ನಾಟಕ ಹಾಗೂ ಸಿನಿಮಾ ರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಇಂದು ಯಶಸ್ಸು ಇದ್ದು, ಹೆಚ್ಚಿನ ಪ್ರೋತ್ಸಾಹಗಳು ದೊರೆತು ಸಮಾಜದಲ್ಲಿನ ಉತ್ತಮ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ತಲುಪುವಂತಾಗಲಿದೆ.

ಮಕರ: ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಲಭಿಸಲಿವೆ. ಸಮಯಕ್ಕೆ ಸರಿಯಾಗಿ ಕಾರ್ಯ ಸಾಧಿಸಲು ಪರಿಶ್ರಮ ಅಗತ್ಯ.

ಕುಂಭ: ಸ್ವಂತ ವಿಚಾರವನ್ನು ಮುಚ್ಚಿಟ್ಟ ಕಾರಣ ಹಿನ್ನಡೆಯನ್ನು ಅನುಭವಿಸಬೇಕಾಗಲಿದೆ. ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಸಹಾಯ ಮಾಡುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಿ. ಆರ್ಥಿಕ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿ ಇರುವುದಿಲ್ಲ.

ಮೀನ: ಎಲ್ಲ ವಿಚಾರದಲ್ಲಿಯೂ ಇತರರ ಅಭಿಪ್ರಾಯವನ್ನು ಕೇಳದೇ ನಿಮ್ಮದೇ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಅಭ್ಯಸಿಸಿ. ದ್ವಿಚಕ್ರ ವಾಹನಗಳ ಮಾರಾಟಗಾರರು ಇಂದು ಜೋರಿನ ವಹಿವಾಟು ನಡೆಸುವರು.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,576
ಇಂದಿನ ಅಂತ್ಯ: 24,378
ದಿನದ ಕನಿಷ್ಠ: 24,352
198

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹575
12 ಕ್ಕೆ ₹78
ಮೈಸೂರು: 100 ಕ್ಕೆ ₹580

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹300-700
ದ್ವಿತಳಿ (ಬಿ.ವಿ) ₹378-815

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹230
ಆರ್‌ಎಸ್‌ಎಸ್-5 ₹224.50
ಗುಡ್ ಲಾಟ್ ₹202

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹23100
ಎಸಿ ₹13850
ಆರ್‌ಪಿ ₹18100
ಆರ್‌ಸಿ ₹9700

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1650 (1660)
ಸೋಯಾ (ರಿಫೈನ್ಡ್) ₹1530 (1520)
ಸೂರ್ಯಕಾಂತಿ (ರಿಫೈನ್ಡ್) ₹1670 (1670)
ಪಾಮೋಲೀನ್ ₹1445 (1420)

ಅಡಿಕೆ ಧಾರಣೆ

ಕುಮಟಾ		ಬಿಳಿಗೋಟು	26900-38619	ಸಿಪ್ಪೆಗೋಟು	13500-14000
ಬೆಟ್ಟೆ	43699-44009	ಚಾಲಿ	40029-48399	**ಪುತ್ತೂರು**	
ಚಿಪ್ಪು	31099-36299	ಕೋಕ	23899-33569	ಕೋಕ	20000-34500
ಕೋಕ	16509-34009	ಕೆಂಪುಗೋಟು	30089-35600	ಹೊಸತು	30000-48500
ಫ್ಯಾಕ್ಟರಿ	12509-28900	ರಾಶಿ	49099-53929	**ಶಿವಮೊಗ್ಗ**	
ಹಳೆ ಚಾಲಿ	47999-49119	ತಟ್ಟಿಬೆಟ್ಟೆ	39200-47299	ಬೆಟ್ಟೆ	53199-65001
ಹೊಸ ಚಾಲಿ	43029-47099	**ಕುಂದಾಪುರ**		ಗೊರಬಲು	19000-42489
ಭದ್ರಾವತಿ		ಹಳೆ ಚಾಲಿ	40000-55000	ರಾಶಿಇಡಿ	42116-56059
ಇತರೆ	27000-27000	ಹೊಸ ಚಾಲಿ	40000-47500	ಸರಕು	54099-97899
ಸಿಪ್ಪೆಗೋಟು	11000-12000	**ತೀರ್ಥಹಳ್ಳಿ**			
ಸಿದ್ದಾಪುರ		ರಾಶಿ	53328-53328		

ಗೋದ್ರೆಜ್: ₹5 ಲಕ್ಷ ಕೋಟಿ ಬಂಡವಾಳ ಮೌಲ್ಯದ ಗುರಿ

ಮುಂಬೈ (ಪಿಟಿಐ): ಗೋದ್ರೆಜ್ ಇಂಡಸ್ಟ್ರೀಸ್ ಸಮೂಹವು ತನ್ನ ಒಡೆತನದ ಇನ್ನೆರಡು ಕಂಪನಿಗಳ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ ಹಾಗೂ ಸಮೂಹದ ಮಾರುಕಟ್ಟೆ ಬಂಡವಾಳ ಮೌಲ್ಯವನ್ನು ₹5 ಲಕ್ಷ ಕೋಟಿಗಿಂತ ಹೆಚ್ಚು ಮಾಡುವ ಉದ್ದೇಶ ಹೊಂದಿದೆ.

ಸಮೂಹವು ಮುಂದಿನ ಐದು ವರ್ಷಗಳಲ್ಲಿ ₹7 ಸಾವಿರ ಕೋಟಿವರೆಗೆ ಹೂಡಿಕೆ ಮಾಡಲಿದೆ. ಹೊಸ ವಹಿವಾಟುಗಳಿಗೆ ಪ್ರವೇಶಿಸುವ ಬದಲು ಸಮೂಹವು ತಾನು ಈಗಾಗಲೇ ವಹಿವಾಟು ನಡೆಸುತ್ತಿರುವ ಉದ್ಯಮಗಳನ್ನು ಇನ್ನಷ್ಟು ಬಲಪಡಿಸಲಿದೆ.

ಸಮೂಹವು ಲಾಭದ ಕಡೆ ಗಮನ ನೀಡಲಿದೆ ಎಂದು ಅದರ ನಿಯೋಜಿತ ಅಧ್ಯಕ್ಷ ಪಿರೋಜ್‌ಶಾ ಗೋದ್ರೆಜ್ ಅವರು ಹೇಳಿದ್ದಾರೆ. ಸಮೂಹದ ಮೂರು ಕಂಪನಿಗಳು (ಗೋದ್ರೆಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್, ಗೋದ್ರೆಜ್ ಪ್ರಾಪರ್ಟೀಸ್ ಮತ್ತು ಗೋದ್ರೆಜ್ ಆ್ಯಗ್ರೊವೆಟ್) ಈಗ ಷೇರುಪೇಟೆಯಲ್ಲಿ ನೋಂದಾಯಿತ ಆಗಿವೆ, ಅವುಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ₹1.60 ಲಕ್ಷ ಕೋಟಿಯಷ್ಟಾಗುತ್ತದೆ ಎಂದು ತಿಳಿಸಿದ್ದಾರೆ.

ಪಿರೋಜ್‌ಶಾ ಗೋದ್ರೆಜ್

ಸಮೂಹವು ಸಹಜವಾದ ಬಗೆಯಲ್ಲಿ ಬೆಳವಣಿಗೆ ಸಾಧಿಸಲು ಬಯಸುತ್ತದೆ, ಸ್ವಾಧೀನದ ಮೂಲಕ ಬೆಳವಣಿಗೆ ಸಾಧಿಸುವ ಇರಾದೆ ಇಲ್ಲ ಎಂದು ಹೇಳಿದ್ದಾರೆ.

ಸಮೂಹವು ಹೊಸ ವಹಿವಾಟುಗಳಿಗೆ ಪ್ರವೇಶಿಸುವುದಿಲ್ಲ. ಅದರ ಬದಲಿಗೆ ಈಗಾಗಲೇ ಇರುವ ವಹಿವಾಟುಗಳನ್ನು ಇನ್ನಷ್ಟು ಬಲಪಡಿಸಿ, ಆ ವಲಯದಲ್ಲಿ ನಾಯಕತ್ವದ ಸ್ಥಾನಕ್ಕೆ ಬರಲು ಯತ್ನಿಸಲಾಗುತ್ತದೆ ಎಂದಿದ್ದಾರೆ.

ತಂಬಾಕು ಬೆಳೆಗೆ ಮಿತಿ ನಿಗದಿ

ರಾಜ್ಯದ ಮಿತಿಯನ್ನು 9 ಕೋಟಿ ಕೆ.ಜಿಯಿಂದ 5.6 ಕೋಟಿ ಕೆ.ಜಿಗೆ ಇಳಿಸಿದ ಮಂಡಳಿ

• ಎಚ್.ಎಸ್.ಸಚ್ಚಿತ್

ಮುಖ್ಯಾಂಶಗಳು
- ತಂಬಾಕು ಮಂಡಳಿ ಹೊಸ ತೀರ್ಮಾನ
- ಬೆಳೆಗಾರರ ಅಸಮಾಧಾನ

ಹುಣಸೂರು (ಮೈಸೂರು ಜಿಲ್ಲೆ): ಕೇಂದ್ರ ತಂಬಾಕು ಮಂಡಳಿಯು 2026-27ನೇ ಸಾಲಿನಲ್ಲಿ 5.6 ಕೋಟಿ ಕೆ.ಜಿ ತಂಬಾಕನ್ನಷ್ಟೇ ರಾಜ್ಯದಲ್ಲಿ ಉತ್ಪಾದಿಸಬೇಕೆಂದು ನಿಗದಿ ಪಡಿಸಿದ್ದು, 66 ಸಾವಿರ ತಂಬಾಕು ಬೆಳೆಗಾರರಲ್ಲಿ ಆತಂಕ ಸೃಷ್ಟಿಯಾಗಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ 9.9 ಕೋಟಿ ಕೆ.ಜಿ ತಂಬಾಕು ಉತ್ಪಾದಿಸಲು ಅವಕಾಶವಿತ್ತು.

ಹಳೆ ಮೈಸೂರು ಭಾಗದ ಪ್ರಮುಖ ವಾಣಿಜ್ಯ ಬೆಳೆ ವರ್ಜೀನಿಯ ತಂಬಾಕು. ಆಂಧ್ರಪ್ರದೇಶದ ಗುಂಟೂರಿನಲ್ಲಿ ತಂಬಾಕು ಖರೀದಿ ಕಂಪನಿಗಳೊಂದಿಗೆ ಇತ್ತೀಚೆಗೆ ನಡೆಸಿದ ಸಭೆಯಲ್ಲಿ ತಂಬಾಕು ಬೆಳೆ ಮೇಲೆ ಮಿತಿ ಹೇರಲು ತೀರ್ಮಾನಿಸಲಾಗಿದೆ.

ವಿಶ್ವದಲ್ಲಿ ಅತಿ ಹೆಚ್ಚು ತಂಬಾಕು ಬೆಳೆಯುವ ಬ್ರೆಜಿಲ್, ಜಿಂಬಾಬ್ವೆ, ನೈಜೀರಿಯಾ ದೇಶಗಳಲ್ಲಿ ಬೆಳೆ ಜಾಸ್ತಿ ಆಗಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಕುಸಿದಿದೆ. ರಾಜ್ಯದಲ್ಲಿಯೂ ಉತ್ಪಾದನೆ ಹೆಚ್ಚಿದರೆ, ಬೇಡಿಕೆಯು ಮತ್ತಷ್ಟು ತಗ್ಗಿ ದರ ಕುಸಿಯಬಹುದು ಎಂದು ಕಂಪನಿಗಳು ನೀಡಿದ ಸಲಹೆಯನ್ನು ಮಂಡಳಿ ಗಂಭೀರವಾಗಿ ಪರಿಗಣಿಸಿದೆ.

‘ಕಳೆದ ಸಾಲಿನಲ್ಲಿ ಹವಾಮಾನ ವೈಪರೀತ್ಯದಿಂದ ಉತ್ಪಾದನೆ ಕುಸಿದರೂ, ಉತ್ತಮ ದರ ಸಿಗದೆ ರೈತರು ಬೀದಿಗಿಳಿದು ಹೋರಾಟ ನಡೆಸಿದ್ದರು. ಈ ಸಮಸ್ಯೆ ಮರುಕಳಿಸಬಾರದು ಎಂಬ ಉದ್ದೇಶದಿಂದ ಮಿತಿ ಹೇರಲಾಗಿದೆ’ ಎಂದು ತಂಬಾಕು ಮಂಡಳಿಯ ಮೈಸೂರು ಪ್ರಾದೇಶಿಕ ವ್ಯವಸ್ಥಾಪಕ ಗೋಪಾಲ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸಿಂಗಲ್ ಬ್ಯಾರನ್‌ಗೆ 0.85 ಹೆಕ್ಟೇರ್: ‘ಮುಂಬರುವ ಸಾಲಿನಲ್ಲಿ ಸಿಂಗಲ್ ಬ್ಯಾರನ್‌ಗೆ 0.85 ಹೆಕ್ಟೇರ್ ಪ್ರದೇಶದಲ್ಲಿ ಗರಿಷ್ಠ 1,017 ಕೆ.ಜಿಯಷ್ಟೇ ತಂಬಾಕು ಉತ್ಪಾದಿಸಬೇಕೆಂದು ನಿಗದಿಗೊಳಿಸಲಾಗಿದೆ. ಇಷ್ಟು ವರ್ಷ 2.5 ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ಬೆಳೆಯಲು ಅವಕಾಶವಿತ್ತು. ಅನಧಿಕೃತವಾಗಿ ಬೆಳೆಯುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಇದು ನೆರೆಯ ಆಂಧ್ರಪ್ರದೇಶಕ್ಕೂ ಅನ್ವಯಿಸುವಂತೆ ಮಂಡಳಿ ಕ್ರಮ ವಹಿಸಬೇಕು. ಇಲ್ಲದಿದ್ದರೆ, ರಾಜ್ಯದ ಬೆಳೆಗಾರರ ಪರವಾನಗಿಯನ್ನು ಹಿಂಪಡೆದು ವೈಜ್ಞಾನಿಕವಾಗಿ ಪರಿಹಾರ ನೀಡಬೇಕು. ಆಗ ಪರ್ಯಾಯ ಬೆಳೆ ಬೆಳೆಯುತ್ತೇವೆ’ ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್ ಹೇಳಿದರು.

ಹುಣಸೂರು ತಾಲ್ಲೂಕಿನ ಕಟ್ಟೆಮಳಲವಾಡಿಯಲ್ಲಿರುವ ತಂಬಾಕು ಹರಾಜು ಮಾರುಕಟ್ಟೆ ಚಿತ್ರ: ಅನೂಪ್ ರಾಘ ಟಿ.

> ಕಡಿಮೆ ಪ್ರದೇಶದಲ್ಲಿ ಕಡಿಮೆ ಇಳುವರಿ ಎಂಬ ನೀತಿಯನ್ನು ತಂಬಾಕಿಗೆ ಅನ್ವಯಿಸುವುದು ಕಷ್ಟಕರ
> **ಎಸ್.ರಾಮಕೃಷ್ಣನ್**, ಎನ್‌ಐಆರ್‌ಸಿಎ ಮುಖ್ಯಸ್ಥ

> ತಂಬಾಕು ಮಂಡಳಿ ಅವೈಜ್ಞಾನಿಕ ತೀರ್ಮಾನ ಕೈಗೊಂಡಿದೆ. ಅದು ನಿಗದಿಗೊಳಿಸಿರುವ ಪ್ರಮಾಣದಲ್ಲಿ ಬೆಳೆದರೆ ಉತ್ಪಾದನಾ ವೆಚ್ಚ ದುಪ್ಪಟ್ಟಾಗಲಿದೆ
> **ವಿಷಕಂಠಪ್ಪ**, ತಂಬಾಕು ಬೆಳೆಗಾರ, ಕಲ್ಲಹಳ್ಳಿ

ಸುದ್ದಿ 2 ನಿಮಿಷ

ಎಪಿವೈ: 9 ಕೋಟಿ ದಾಟಿದ ಚಂದಾದಾರರ ಸಂಖ್ಯೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ರೂಪಿಸಿದ ಪಿಂಚಣಿ ಯೋಜನೆಗಳಲ್ಲಿ ಒಂದಾಗಿರುವ ‘ಅಟಲ್ ಪಿಂಚಣಿ ಯೋಜನೆ’ಯು ಈಗ ಒಂಬತ್ತು ಕೋಟಿ ಚಂದಾದಾರರನ್ನು ಹೊಂದಿದೆ.

2025-26ನೆಯ ಹಣಕಾಸು ವರ್ಷದಲ್ಲಿ ಈ ಯೋಜನೆಗೆ ಚಂದಾದಾರ ಆದವರ ಒಟ್ಟು ಸಂಖ್ಯೆಯು 1.35 ಕೋಟಿಯನ್ನು ದಾಟಿದೆ. ಈ ಯೋಜನೆಯು ಜಾರಿಗೆ ಬಂದ ನಂತರದಲ್ಲಿ ಒಂದು ವರ್ಷದ ಅವಧಿಯಲ್ಲಿ ಆಗಿರುವ ಅತಿಹೆಚ್ಚಿನ ಸಂಖ್ಯೆಯ ನೋಂದಣಿ ಇದಾಗಿದೆ.

ಬಡವರು, ದುರ್ಬಲರು, ಅಸಂಘಟಿತ ವಲಯದ ಕಾರ್ಮಿಕರನ್ನು ಗುರಿಯಾಗಿಸಿಕೊಂಡ ಯೋಜನೆ ಇದು. 2015ರಲ್ಲಿ ಇದನ್ನು ಜಾರಿಗೆ ತರಲಾಯಿತು.

ಚಂದಾದಾರರಿಗೆ 60 ವರ್ಷ ವಯಸ್ಸು ಆದಾಗ ಈ ಯೋಜನೆಯ ಅಡಿ ಕನಿಷ್ಠ ₹1,000ದಿಂದ ₹5,000ವರೆಗೆ ನಿಶ್ಚಿತ ಪಿಂಚಣಿ ಲಭ್ಯವಾಗುತ್ತದೆ. 18 ವರ್ಷದಿಂದ 40 ವರ್ಷ ವಯಸ್ಸಿನವರೆಗಿನ ಎಲ್ಲ ಭಾರತೀಯರಿಗೆ ಈ ಯೋಜನೆ ಮುಕ್ತವಾಗಿದೆ. ಆದರೆ ಆದಾಯ ತೆರಿಗೆ ಪಾವತಿದಾರರಿಗೆ, ಹಿಂದೆ ಆದಾಯ ತೆರಿಗೆ ಪಾವತಿ ಮಾಡಿದ್ದವರಿಗೆ ಯೋಜನೆ ಸೇರಲು ಅವಕಾಶವಿಲ್ಲ.

Atal Pension Yojana

ವಿತ್ತೀಯ ಕೊರತೆ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕೆಟ್ಟ ಪರಿಣಾಮ ಕಡಿಮೆ ಮಾಡಲು ಕೇಂದ್ರ ಸರ್ಕಾರ ತೆಗೆದುಕೊಂಡ ಕೆಲವು ಕ್ರಮಗಳ ಪರಿಣಾಮವಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ವಿತ್ತೀಯ ಕೊರತೆಯು ಅಲ್ಪ ಹೆಚ್ಚಳ ಕಾಣಬಹುದು ಎಂದು ಸಂಶೋಧನಾ ಸಂಸ್ಥೆ ಬಿಎಂಐ ಬುಧವಾರ ಹೇಳಿದೆ.

ವಿತ್ತೀಯ ಕೊರತೆ ಪ್ರಮಾಣವು ದೇಶದ ಜಿಡಿಪಿಯ ಶೇ 4.3ರಷ್ಟು ಆಗಬಹುದು ಎಂದು ಈ ಬಾರಿಯ ಬಜೆಟ್‌ನಲ್ಲಿ ಅಂದಾಜು ಮಾಡಲಾಗಿದೆ. ಆದರೆ ಅದು ಆ ಅಂದಾಜನ್ನು ಮೀರಿ ಶೇ 4.5ರಷ್ಟು ಆಗಬಹುದು ಎಂದು ಬಿಎಂಐ ಹೇಳಿದೆ.

ಬಹಳ ವಿರಳವಾದ ಸಂಪನ್ಮೂಲಗಳಾದ ಹಾಗೂ ಸೆಮಿಕಂಡಕ್ಟರ್ ಚಿಪ್‌ಗಳ ಉತ್ಪಾದನೆಯಲ್ಲಿ ಬಳಕೆ ಮಾಡುವ ಹೀಲಿಯಂ ಮತ್ತು ಗಂಧಕದ ರಫ್ತಿನ ಮೇಲೆ ಕೇಂದ್ರ ಸರ್ಕಾರವು ನಿರ್ಬಂಧ ವಿಧಿಸುವ ಸಾಧ್ಯತೆ ಇದೆ ಎಂದು ಅದು ಹೇಳಿದೆ.

ಗಂಧಕವನ್ನು ರಸಗೊಬ್ಬರಗಳ ತಯಾರಿಕೆಯಲ್ಲಿ ಕೂಡ ಬಳಕೆ ಮಾಡಲಾಗುತ್ತದೆ. ಕೃಷಿ ವಲಯದಲ್ಲಿ ಯಾವುದೇ ಅಡ್ಡಿಗಳು ಸೃಷ್ಟಿಯಾಗದಂತೆ ನೋಡಿಕೊಳ್ಳಲು ಕೇಂದ್ರವು ಶ್ರಮಿಸಲಿದೆ ಎಂದಿದೆ.

ತೆಂಗಿನ ನಾರಿನ ಉತ್ಪನ್ನ ಸರಬರಾಜಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವತಿಯಿಂದ ತೆಂಗಿನ ನಾರಿನ ಮ್ಯಾಟ್ ಮತ್ತು ಇತರೆ ಉತ್ಪನ್ನಗಳನ್ನು ದೆಹಲಿಗೆ ಸರಬರಾಜು ಮಾಡುವ ವಾಹನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಚಾಲನೆ ನೀಡಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಈ ಬಗ್ಗೆ ವಿವರ ಬುಧವಾರ ನೀಡಿ, ‘ಒಂದು ಟ್ರಕ್ ಬೆಂಗಳೂರಿನಿಂದ ದೆಹಲಿಗೆ ಇವತ್ತು ಕಳುಹಿಸಲಾಗುತ್ತಿದೆ. ಹೊರರಾಜ್ಯಗಳಿಗೆ ಪ್ರತಿ ತಿಂಗಳು ಎರಡು-ಮೂರು ಲೋಡ್ ಕಳುಹಿಸುವ ಗುರಿ ಇದೆ. ಆಗ ತಿಂಗಳಿಗೆ ಸುಮಾರು ₹3 ಕೋಟಿ ವ್ಯವಹಾರ ಆಗಲಿದೆ’ ಎಂದು ತಿಳಿಸಿದರು.

ತೆಂಗಿನ ನಾರು ಉದ್ಯಮವನ್ನು ಸುಮಾರು 50 ಸಾವಿರ ಜನರು ನಂಬಿ ಜೀವಿಸುತ್ತಿದ್ದಾರೆ. ನಾರು ತಯಾರಾಗುವ ಮೊದಲೇ ಸಿಪ್ಪೆ ಬೇರೆ ರಾಜ್ಯಗಳಿಗೆ ಸರಬರಾಜಾಗುತ್ತಿದೆ. ಇದರಿಂದ ಪ್ರತಿ ಲೋಡ್‌ನಿಂದ ₹5 ಸಾವಿರಕ್ಕೂ ಅಧಿಕ ಜಿಎಸ್‌ಟಿ ನಷ್ಟ ಉಂಟಾಗುತ್ತದೆ. ಈಗಾಗಲೇ ತೆಂಗಿನ ನಾರಿನ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಇದೆ. ಮಾರುಕಟ್ಟೆ ಜೊತೆಗೆ ಸಂಪರ್ಕ ಏರ್ಪಡಿಸುವ ಕೆಲಸವನ್ನು ನಿಗಮ ಮಾಡುತ್ತಿದೆ ಎಂದು ವಿವರಿಸಿದರು.

‘ಮಾಲ್ಗುಡಿ ಡೇಸ್‌ನ 85 ಘಟಕಗಳಲ್ಲಿ ತೆಂಗಿನ ನಾರಿನ ಉತ್ಪನ್ನಗಳನ್ನು ಪ್ರದರ್ಶಿಸುವ ಮೂಲಕ ಗ್ರಾಹಕರನ್ನು ಆಕರ್ಷಿಸುವ ಕೆಲಸ ಮಾಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ತೆಂಗಿನ ನಾರಿನ ಅಭಿವೃದ್ಧಿ ನಿಗಮದ ಅಧ್ಯಕ್ಷ ನಟರಾಜ್ ಜಾನಕಿರಾಮ್ ಮತ್ತು ಡೀಲರ್‌ಗಳು ಉಪಸ್ಥಿತರಿದ್ದರು.

ತೆಂಗಿನ ನಾರಿನ ಮ್ಯಾಟ್‌ಗಳು ಮತ್ತು ಇತರೆ ಉತ್ಪನ್ನಗಳನ್ನು ದೆಹಲಿಗೆ ಸರಬರಾಜು ಮಾಡುವ ವಾಹನಕ್ಕೆ ಸಿದ್ದರಾಮಯ್ಯ ಹಸಿರು ನಿಶಾನೆ ತೋರಿದರು. ನಟರಾಜ್ ಜಾನಕಿರಾಮ್, ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಟಿಸಿಎಸ್ ಪ್ರಕರಣ: ಮಧ್ಯಂತರ ರಕ್ಷಣೆಗೆ ಕೋರ್ಟ್ ನಿರಾಕರಣೆ

ನಾಸಿಕ್ (ಪಿಟಿಐ): ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರದ ಆರೋಪಕ್ಕೆ ಸಂಬಂಧಿಸಿದ ಮತ್ತೊಂದು ಪ್ರಕರಣದಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಉದ್ಯೋಗಿ ಡ್ಯಾನಿಶ್ ಶೇಖ್ ಅವರಿಗೆ ಬಂಧನದಿಂದ ಮಧ್ಯಂತರ ರಕ್ಷಣೆ ನೀಡಲು ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ನ್ಯಾಯಾಲಯವು ನಿರಾಕರಿಸಿದೆ.

ಇಂಥದ್ದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಫ್ಟ್‌ವೇರ್ ಉದ್ಯೋಗಿ ಡ್ಯಾನಿಶ್ ಅವರನ್ನು ಬಂಧಿಸಲಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಮುಂಬೈನ ನಾಕಾ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಅವರು ಮಧ್ಯಂತರ ಜಾಮೀನು ಕೋರಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ಡ್ಯಾನಿಶ್ ಅವರಿಗೆ ಮಧ್ಯಂತರ ರಕ್ಷಣೆ ನೀಡಲು ನಿರಾಕರಿಸಿತು. ಏಪ್ರಿಲ್ 27ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್ ಪರ ವಕೀಲರಿಗೆ ಸೂಚಿಸಿತು.

ಟಿಸಿಎಸ್‌ನ ನಾಸಿಕ್ ಕಚೇರಿಯಲ್ಲಿನ ಕಿರಿಯ ಮಹಿಳಾ ಉದ್ಯೋಗಿಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಮತ್ತು ಬಲವಂತದ ಮತಾಂತರಕ್ಕೆ ಯತ್ನಿಸಲಾಗಿದೆ ಎಂಬ ಆರೋಪದಡಿ ದಾಖಲಾಗಿರುವ 9 ಪ್ರಕರಣಗಳ ಕುರಿತು ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ.

ಎಟಿಎಫ್‌ನಲ್ಲಿ ಎಥೆನಾಲ್ ಮಿಶ್ರಣಕ್ಕೆ ಅನುಮತಿ

ನವದೆಹಲಿ (ಪಿಟಿಐ): ವಿಮಾನ ಇಂಧನದಲ್ಲಿ (ಎಟಿಎಫ್) ಎಥೆನಾಲ್ ಮಿಶ್ರಣಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆದರೆ ಕಡ್ಡಾಯವಾಗಿ ಇಂತಿಷ್ಟೇ ಪ್ರಮಾಣದಲ್ಲಿ ಅದರ ಮಿಶ್ರಣ ಇರಬೇಕು ಎಂಬ ಗುರಿ ನಿಗದಿ ಮಾಡಿಲ್ಲ.

ವಿಮಾನ ಇಂಧನ (ಮಾರುಕಟ್ಟೆ ನಿಯಂತ್ರಣ) ಆದೇಶ 2001ಕ್ಕೆ ತಿದ್ದುಪಡಿ ತಂದ ನಂತರದಲ್ಲಿ ಈ ಹೆಜ್ಜೆ ಇರಿಸಲಾಗಿದೆ. ಇಂಗಾಲದ ಹೊರಸೂಸುವಿಕೆಯನ್ನು ತಗ್ಗಿಸಿ, ತೈಲದ ಆಮದು ಕಡಿಮೆ ಮಾಡುವ ಉದ್ದೇಶದಿಂದ ಹೀಗೆ ಮಾಡಲಾಗಿದೆ.

ಮುಂಬೈ ಧಾರಣೆ (ಶೇಂಗಾ) 22-04-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1660 (1670)
ಒಂದು ವಾರದ ಡೆಲಿವರಿ	1655(1665)
ಪಾಮ್ ವಾರದ ಡೆಲಿವರಿ	1443(1418)
ಸೂರ್ಯಕಾಂತಿ ಎಣ್ಣೆ ಕಚ್ಚಾ	1565(1560)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,000 (1,51,400)
ಬೆಳ್ಳಿ ಕೆ.ಜಿಗೆ	2,48,000 (2,49,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಫ್ಲೈ91 ವಿಮಾನ: ತಡವಾಗಿ ಭೂ ಸ್ಪರ್ಶ

ಹುಬ್ಬಳ್ಳಿ: ಬೆಂಗಳೂರಿನಿಂದ ಹುಬ್ಬಳ್ಳಿಗೆ ಮಂಗಳವಾರ ಸಂಜೆ 6.45ಕ್ಕೆ ಹೊರಟಿದ್ದ ಫ್ಲೈ-91 ಸಂಸ್ಥೆ ವಿಮಾನವು ಹವಾಮಾನ ವೈಪರೀತ್ಯದಿಂದ ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಒಂದೂವರೆ ಗಂಟೆ ತಡವಾಗಿ ಭೂಸ್ಪರ್ಶ ಮಾಡಿದೆ.

‘ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ರಾತ್ರಿ 8.15ಕ್ಕೆ ಬರಬೇಕಿತ್ತು. ಪ್ರಕ್ಷುಬ್ಧ ಹವಾಮಾನದಿಂದ ರಾತ್ರಿ 9.40ಕ್ಕೆ ಸುರಕ್ಷಿತವಾಗಿ ಭೂ ಸ್ಪರ್ಶ ಮಾಡಿದೆ. 21 ಮಂದಿ ಪ್ರಯಾಣಿಕರು ಇದ್ದರು’ ಎಂದು ಹುಬ್ಬಳ್ಳಿ ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕರು ತಿಳಿಸಿದ್ದಾರೆ.

ಏಪ್ರಿಲ್ 19ರಂದು ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಹೊರಟಿದ್ದ ಫ್ಲೈ91 ವಿಮಾನವು ಸಹ, ಹವಾಮಾನ ವೈಪರೀತ್ಯದಿಂದ ಮೂರು ಗಂಟೆಗೂ ಹೆಚ್ಚು ಸಮಯ ಆಕಾಶದಲ್ಲೇ ಹಾರಾಡಿ, ನಂತರ ಬೆಂಗಳೂರಿನಲ್ಲಿ ಸುರಕ್ಷಿತವಾಗಿ ಭೂ ಸ್ಪರ್ಶ ಮಾಡಿತ್ತು.

ಮಾಲೆಗಾಂವ್ ಸ್ಫೋಟ ಪ್ರಕರಣ: ನಾಲ್ವರು ಖುಲಾಸೆ

ಮುಂಬೈ (ಪಿಟಿಐ): ಮಾಲೆಗಾಂವ್ ಸ್ಫೋಟ ಪ್ರಕರಣದ ನಾಲ್ವರು ಆರೋಪಿಗಳನ್ನು ಬಾಂಬೆ ಹೈಕೋರ್ಟ್ ಬುಧವಾರ ಖುಲಾಸೆಗೊಳಿಸಿದೆ. ಅವರ ವಿರುದ್ಧ ದೋಷಾರೋಪ ನಿಗದಿಗೆ ಸೂಚಿಸಿದ್ದ ವಿಶೇಷ ನ್ಯಾಯಾಲಯದ ಆದೇಶವನ್ನು ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್ ಮತ್ತು ನ್ಯಾಯಮೂರ್ತಿ ಶ್ಯಾಮ್ ಚಂದಕ್ ಅವರನ್ನು ಒಳಗೊಂಡ ನ್ಯಾಯಪೀಠವು, ಆರೋಪಿಗಳು ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿತು.

ರಾಜೇಂದ್ರ ಚೌಧರಿ, ಧಾನ್ ಸಿಂಗ್, ಮನೋಹರ್ ರಾಮ್ ಸಿಂಗ್ ನರವಾಡಿಯಾ ಮತ್ತು ಲೋಕೇಶ್ ಶರ್ಮಾ ಖುಲಾಸೆಗೊಂಡವರು. ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಈ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

2006ರ ಸೆಪ್ಟೆಂಬರ್ 8ರಂದು ನಾಸಿಕ್ ಜಿಲ್ಲೆಯ ಮಾಲೆಗಾಂವ್ ನಗರದಲ್ಲಿ ನಾಲ್ಕು ಬಾಂಬ್‌ಗಳನ್ನು ಸ್ಫೋಟಿಸಲಾಗಿತ್ತು. ಈ ಪೈಕಿ ಮೂರು ಬಾಂಬ್‌ಗಳು ಹಮೀದಿಯಾ ಮಸೀದಿ ಆವರಣ ಮತ್ತು ಬಡಾ ಖಬರಸ್ತಾನದಲ್ಲಿ ಸ್ಫೋಟಗೊಂಗೊಂಡಿದ್ದವು. ಶುಕ್ರವಾರದ ಮಧ್ಯಾಹ್ನದ ನಮಾಜ್ ಮುಗಿದ ಬೆನ್ನಲ್ಲೇ ಸ್ಫೋಟ ಸಂಭವಿಸಿತ್ತು. ಪರಿಣಾಮವಾಗಿ 31 ಮಂದಿ ಮೃತಪಟ್ಟು, 312 ಮಂದಿ ಗಾಯಗೊಂಡಿದ್ದರು.

ಆರಂಭದಲ್ಲಿ ಈ ಪ್ರಕರಣದ ತನಿಖೆ ನಡೆಸಿದ್ದ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳದ ಪೊಲೀಸರು, ಒಂಬತ್ತು ಮಂದಿ ಮುಸ್ಲಿಮರನ್ನು ಬಂಧಿಸಿದ್ದರು. ನಂತರ ಈ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನಡೆಸಿತ್ತು. ಹಿಂದುತ್ವವಾದಿ ಬಲಪಂಥೀಯ ಸಂಘಟನೆಯೇ ಸ್ಫೋಟದ ಹಿಂದಿದೆ ಎಂದಿದ್ದ ಎನ್‌ಐಎ, ನಾಲ್ವರನ್ನು ಬಂಧಿಸಿತ್ತು. ಆ ಬಳಿಕ ಮೊದಲು ಭಯೋತ್ಪಾದನಾ ನಿಗ್ರಹ ದಳದಿಂದ ಬಂಧಿತರಾಗಿದ್ದ ಒಂಬತ್ತು ಮಂದಿಯನ್ನು ಪ್ರಕರಣದಿಂದ ಬಿಡುಗಡೆ ಮಾಡಲಾಗಿತ್ತು.

‘ಜಾಗತಿಕ ದಕ್ಷಿಣಕ್ಕೆ ಹೇಗೆ ನೆರವಾಗುವಿರಿ?’

ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಹುದ್ದೆಯ ಅಭ್ಯರ್ಥಿಗೆ ಭಾರತ ಪ್ರಶ್ನೆ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರೆ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಸ್ತರಣೆ ಮತ್ತು ಜಗತ್ತಿನ ದಕ್ಷಿಣ ಭಾಗದ ಅಭಿವೃದ್ಧಿಯ ಗುರಿಗಳನ್ನು ಹೇಗೆ ಈಡೇರಿಸುವಿರಿ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ ಅಭ್ಯರ್ಥಿ ಹಾಗೂ ಚಿಲಿಯ ಮಾಜಿ ಅಧ್ಯಕ್ಷೆ ಮಿಚೆಲ್ ಬ್ಯಾಚೆಲೆಟ್ ಅವರನ್ನು ಭಾರತ ಪ್ರಶ್ನಿಸಿದೆ.

ಭಾರತದ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ (ಪಶ್ಚಿಮ) ರಾಯಭಾರಿ ಸಿಬಿ ಜಾರ್ಜ್ ಅವರು ಬ್ಯಾಚೆಲೆಟ್ ಅವರೊಂದಿಗೆ ಎರಡು ವಿಷಯಗಳನ್ನು ಎತ್ತಿ ಅವರ ದೃಷ್ಟಿಕೋನವೇನು ಎಂದು ಪ್ರಶ್ನಿಸಿದ್ದಾರೆ.

ಮಂಗಳವಾರ ಇಲ್ಲಿ ಮೂರು ಗಂಟೆ ನಡೆದ ಸಂವಾದದ ವೇಳೆ, ಬ್ಯಾಚೆಲೆಟ್ ಅವರು ಮುಂದಿನ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ತಾನು ಯಾಕೆ ಉತ್ತಮ ಆಯ್ಕೆ ಮತ್ತು ತಮ್ಮ ದೃಷ್ಟಿಕೋನ ಏನು ಎಂಬುದರ ಕುರಿತ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಮತ್ತು ನಾಗರಿಕ ಸಂಘಟನೆಗಳ ಪ್ರಶ್ನೆಗಳಿಗೆ ಉತ್ತರಿಸಿದರು.

‘ಎಲ್ಲರ ಧ್ವನಿ ಕೇಳುವಂತೆ ಮಾಡುತ್ತೇನೆ’

ಮಿಚೆಲ್ ಬ್ಯಾಚೆಲೆಟ್

ಪ್ರಧಾನ ಕಾರ್ಯದರ್ಶಿ ಹುದ್ದೆಗೆ ತಾನು ಆಯ್ಕೆಯಾಗದರೆ ಜಗತ್ತಿನ ದಕ್ಷಿಣ ಭಾಗದ ದೇಶಗಳ ಅಗತ್ಯಗಳಿಗೆ ಆದ್ಯತೆ ನೀಡುವುದು ಮತ್ತು ಸದಸ್ಯ ರಾಷ್ಟ್ರಗಳಿಗೆ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಬಲಪಡಿಸುವ ಸುಧಾರಣೆಗಳನ್ನು ಕೈಗೊಳ್ಳುವುದು ತನ್ನ ಅಧಿಕಾರಾವಧಿಯ ಪ್ರಮುಖ ಭಾಗವಾಗಿರುತ್ತದೆ ಎಂದು ಬ್ಯಾಚೆಲೆಟ್ ತಿಳಿಸಿದ್ದಾರೆ.

ವಿಶ್ವಸಂಸ್ಥೆ ಮತ್ತು ಸಚಿವಾಲಯದಲ್ಲಿ ವಿವಿಧ ನಿರ್ಧಾರ ತೆಗೆದುಕೊಳ್ಳುವ ಸ್ಥಾನಗಳಲ್ಲಿ ಅಭಿವೃದ್ಧಿಶೀಲ ಸಣ್ಣ ದ್ವೀಪ ರಾಷ್ಟ್ರಗಳು (ಎಸ್‌ಐಡಿಎಸ್), ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು (ಎಲ್‌ಡಿಸಿಸ್) ಮತ್ತು ಸುತ್ತಲೂ ಭೂಮಿಯಿಂದ ಆವೃತ್ತವಾಗಿರುವ ಸಮುದ್ರ ಮಾರ್ಗವಿಲ್ಲದ ಅಭಿವೃದ್ಧಿಶೀಲ ರಾಷ್ಟ್ರಗಳು (ಎಲ್‌ಎಲ್‌ಡಿಸಿಸ್) ಉತ್ತಮ ಪ್ರಾತಿನಿಧ್ಯ ಹೊಂದುವುದನ್ನು ನಾನು ಖಚಿತಪಡಿಸಿಕೊಳ್ಳುತ್ತೇನೆ. ಇದರಿಂದ ಎಲ್ಲರ ಧ್ವನಿಗಳೂ ಕೇಳುವಂತೆ ಆಗುತ್ತದೆ ಎಂದು ಬ್ಯಾಚೆಲೆಟ್ ಹೇಳಿದ್ದಾರೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಾಜಿ ಹೈ ಕಮಿಷನರ್ ಆಗಿರುವ ಬ್ಯಾಚೆಲೆಟ್ ಅವರು, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ ಸ್ಪರ್ಧೆಯಲ್ಲಿರುವ ನಾಲ್ವರಲ್ಲಿ ಒಬ್ಬರು.

ಪ್ರಸ್ತುತ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಗಿರುವ ಆಂಟೋನಿಯೊ ಗುಟೆರಸ್ ಅಧಿಕಾರಾವಧಿ ಡಿಸೆಂಬರ್ 31ರಂದು ಪೂರ್ಣಗೊಳ್ಳಲಿದೆ. ಅವರು ಸತತ ಎರಡು ಬಾರಿ ಐದು ವರ್ಷಗಳ ಕಾಲ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Metro ರೈಲ್ವೆಗೆ ಟಾಮ್ ಆಪರೇಟರ್ಸ್ ಗುತ್ತಿಗೆ ಆಧಾರದ ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ. ಕರ್ನಾಟಕ ಉದ್ಯೋಗ (ಸರ್ಕಾರಿ ನೋಂದಾಯಿತ) ಸಂಪರ್ಕಿಸಿ: 080-29909699, 9606155699

ವ್ಯಾಪಾರ

Business to Business

Finance

ಶ್ರೀ ಚಕ್ರ ಫೈನಾನ್ಸ್ 10, 20, 30, 40, 50 ಸಾವಿರದಿಂದ 1 ಲಕ್ಷದವರೆಗೆ ಸಾಲ ಕೊಡಲಾಗುವುದು ಬೆಂಗಳೂರು ಸಂಪರ್ಕಿಸಿ: 9036316959.

ಭವಿಷ್ಯ

Astrology

ನಿಮ್ಮ ಜೀವನ ಸುಧಾರಣೆ ನಿಮ್ಮ ಫೋಟೋದಿಂದ ಸೂರ್ಯರಶ್ಮಿ ಚಿಕಿತ್ಸೆ ಯಶಸ್ವಿವ್ಯಕ್ತಿತ್ವ ಉದ್ಯೋಗ ವ್ಯಾಪಾರ ವ್ಯವಹಾರ ಮಕ್ಕಳ ವಿದ್ಯಾಶಕ್ತಿ ಎಲ್ಲಾ ಸಾಧ್ಯ ಸಂಪರ್ಕಿಸಿ 9591773396 ವರಧರಾಜ್_ಪೈ

ವೈಯಕ್ತಿಕ

Change of Name

ನಾನು, ಲಭ್ಯ ವಿಶಾಲ್ ಜೈನ್, ತಂದೆ: ವಿಶಾಲ್ ಎ ಜೈನ್, ವಾಸ: ನಂ. 1214/ಸಿ, ಮಾನಸರ ರಸ್ತೆ, ಇಟ್ಟಿಗೆಗೂಡು, ಮೈಸೂರು, ಕರ್ನಾಟಕ - 570010. ಇನ್ನು ಮುಂದೆ ನನ್ನನ್ನು ಮಾಹಿರ್ ಜೈನ್ ಎಂದು ಕರೆಯಲಾಗುವುದು. - ಲಭ್ಯ ವಿಶಾಲ್ ಜೈನ್.

ಪ್ರವಾಸ

Travel

ಭಾರತಪರಂಪರ`ದರ್ಶನ: 23.4.2026 5ದಿನ ಮಂತ್ರಾಲಯ,ಶ್ರೀಶೈಲಂ ನವನಾರಸಿಂಹ ಅಹೋಬಿಲಂ. 18.5.2026 13ದಿನ ಚಾರ್`ಧಾಮ್. 20.6.2026 ಮುಕ್ತಿನಾಥ್,ಕಾಶಿ,ದೇವಘರ್ ಸಹಿತ`ನೇಪಾಳಯಾತ್ರೆ. 2.7.2026`ಅಮರನಾಥ್ ವೈಷ್ಣೋದೇವಿ.`ಪ್ರಕಾಶ್`ಹೆಬ್ಬಾರ್ : 9448792891.

★ಶ್ರೇಯಸ್ ಟೂರ್ಸ್★ 01.05.2026 06ದಿನಗಳು ಸಂಪೂರ್ಣ ಅಹೋಬಲಂ ನವನಾರಸಿಂಹ,ಶ್ರೀಶೈಲಂ ಮಹಾನಂದಿ,ಯಾಗಂಟಿ ಬೇಲಂಗುಹೆ,ಗಂಡಿಕೋಟ ಮಂತ್ರಾಲಯ.06.05.2026 12ದಿನಗಳು ಅಖಂಡ ಕೇರಳ ರಾಜ್ಯ ಕನ್ಯಾಕುಮಾರಿ,ರಾಮೇಶ್ವರಂ ಮಧುರೈ.23.05.2026 10ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯ ಪ್ರವಾಸ. 16.05.2026 07ದಿನಗಳು ಕಾಶಿ,ಅಯೋಧ್ಯೆ,ಪ್ರಯಾಗ್ ಗಯಾ.20.05.2026 12ದಿನಗಳು ಆದಿಕೈಲಾಸ.ಓಂಪರ್ವತ ನೈನಿತಾಲ್,ಇತರೆ. 8073824856 9206979202 9606032154

11.06.2026 13/17ದಿನಗಳು ಕೇದಾರನಾಥ,ಬದರಿನಾಥ್, ಯಮುನೋತ್ರಿ,ಗಂಗೋತ್ರಿ (Subsidy_20000) 38000/, 12.07.2026 13/17ದಿನಗಳು ಅಮರನಾಥ` ವೈಷ್ಣೋದೇವಿ`ಕಾಶ್ಮೀರ` ಅಮೃತಸರ`ಅಗ್ರ`ದೆಹಲಿ 38000/ 11.05.2026`6ದಿನ ಕಾಶಿ,ಅಯೋಧ್ಯ ಪ್ರಯಾಗರಾಜ್ ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕದನ ವಿರಾಮ ವಿಸ್ತರಿಸಿದ ಟ್ರಂಪ್

ಒಂದನೇ ಪುಟದಿಂದ...

ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನೇತೃತ್ವದ ನಿಯೋಗ ಇರಾನಿನ ಪ್ರತಿನಿಧಿಗಳ ಜತೆ ಶಾಂತಿ ಮಾತುಕತೆಗಾಗಿ ಮಂಗಳವಾರ ಇಸ್ಲಾಮಾಬಾದ್‌ಗೆ ತೆರಳಬೇಕಿತ್ತು. ಆದರೆ ಸಂವಾದ ಪುನರಾರಂಭಿಸುವ ಪ್ರಯತ್ನಗಳನ್ನು ಇರಾನ್ ನಿರಾಕರಿಸಿದ ಕಾರಣ ಶ್ವೇತಭವನವು ವ್ಯಾನ್ಸ್ ಅವರ ಪ್ರವಾಸವನ್ನು ಕೊನೆ ಕ್ಷಣದಲ್ಲಿ ರದ್ದುಗೊಳಿಸಿತು.

ಇನ್ನೂ ನಿರ್ಧರಿಸಿಲ್ಲ– ಇರಾನ್: ಅಮೆರಿಕದ ಜತೆಗಿನ ಹೊಸ ಸುತ್ತಿನ ಮಾತುಕತೆಯಲ್ಲಿ ಭಾಗಿಯಾಗಬೇಕೇ ಬೇಡವೇ ಎಂಬುದನ್ನು ಇನ್ನೂ ನಿರ್ಧರಿಸಿಲ್ಲ ಎಂದು ಇರಾನ್ ಹೇಳಿದೆ.

‘ನಾವು ಉತ್ತಮ ನಂಬಿಕೆ ಮತ್ತು ಘನತೆಯಿಂದ ಮಾತುಕತೆಗೆ ಮುಂದಾಗಿದ್ದೆವು. ಆದರೆ ಅಮೆರಿಕವು ನಿರ್ಲಕ್ಷ್ಯ ಧೋರಣೆ ತೋರಿದ್ದೇ ಅಲ್ಲದೆ ನಂಬಿಕೆಯನ್ನು ಹುಸಿಯಾಗಿಸಿತು’ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯಿ ತಿಳಿಸಿದ್ದಾರೆ.

ನಿಲುವು ಬದಲಿಸಿದ ಟ್ರಂಪ್: ಕದನ ವಿರಾಮ ವಿಸ್ತರಿಸುವುದಿಲ್ಲ, ಇರಾನ್ ಒಪ್ಪಂದಕ್ಕೆ ಬರದಿದ್ದರೆ ಬಾಂಬ್‌ಗಳ ಸುರಿಮಳೆಯಾಗಲಿದೆ, ಅದಕ್ಕಾಗಿ ಸೇನೆ ಉತ್ಸುಕವಾಗಿದೆ ಎಂದು ಮಂಗಳವಾರವಷ್ಟೇ ಹೇಳಿದ್ದ ಟ್ರಂಪ್, ಬುಧವಾರ ದಿಢೀರ್ ನಿಲುವು ಬದಲಿಸಿದರು.

‘ಇರಾನ್ ಈಗಾಗಲೇ ಛಿದ್ರವಾಗಿದೆ, ಅದು ಅನಿರೀಕ್ಷಿತವಲ್ಲ. ಇರಾನ್ ನಾಯಕತ್ವವು ಒಮ್ಮತದ ಪ್ರಸ್ತಾವದೊಂದಿಗೆ ಬರುವುದಕ್ಕಾಗಿ ದಾಳಿಯನ್ನು ತಡೆಹಿಡಿಯುವಂತೆ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ವಿನಂತಿಸಿದ್ದರು’ ಎಂದು ಟ್ರಂಪ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಈ ಕಾರಣಕ್ಕಾಗಿ ಮಾತ್ರ ಅಮೆರಿಕವು ಇರಾನ್ ಮೇಲೆ ದಾಳಿ ನಡೆಸುವುದನ್ನು ತಡೆಯುತ್ತದೆ. ಆದರೆ ಇರಾನ್ ಬಂದರುಗಳ ಮೇಲಿನ ದಿಗ್ಬಂಧನ ಜಾರಿಯಲ್ಲಿರುತ್ತದೆ’ ಎಂದು ಅವರು ಹೇಳಿದ್ದಾರೆ. ದಿಗ್ಬಂಧನ ಮುಂದುವರಿಸುವಂತೆ ಸೇನೆಗೆ ನಿರ್ದೇಶಿಸಿದ್ದೇನೆ ಎಂದೂ ಅವರು ಹೇಳಿದ್ದಾರೆ.

ದಿಗ್ಬಂಧನದ ವಿರುದ್ಧ ಇರಾನ್ ಕಿಡಿ: ಇರಾನ್ ಬಂದರುಗಳ ಮೇಲಿನ ದಿಗ್ಬಂಧನ ಮುಂದುವರಿಸುವ ಅಮೆರಿಕದ ಕ್ರಮವನ್ನು ತೀವ್ರವಾಗಿ ಟೀಕಿಸಿರುವ ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ, ‘ಇದು ಯುದ್ಧದ ಕ್ರಿಯೆಯಾಗಿದ್ದು, ಕದನ ವಿರಾಮದ ಉಲ್ಲಂಘನೆಯಾಗಿದೆ’ ಎಂದು ಆರೋಪಿಸಿದ್ದಾರೆ.

‘ವಾಣಿಜ್ಯ ಹಡಗುಗಳನ್ನು ಹೊಡೆದು ಅದರ ಸಿಬ್ಬಂದಿಯನ್ನು ಒತ್ತೆಯಾಳಾಗಿ ಇಟ್ಟುಕೊಳ್ಳುವುದು ಇನ್ನೂ ದೊಡ್ಡ ಉಲ್ಲಂಘನೆ. ನಿರ್ಬಂಧಗಳನ್ನು ತೆರವುಗೊಳಿಸುವುದು, ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದು, ಬೆದರಿಸುವಿಕೆಯನ್ನು ಎದುರಿಸುವುದು ಹೇಗೆ ಎಂಬುದು ಇರಾನ್‌ಗೆ ಚೆನ್ನಾಗಿ ಗೊತ್ತಿದೆ’ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಟ್ರಂಪ್‌ಗೆ ಧನ್ಯವಾದ ಹೇಳಿದ ಪಾಕ್ ಪ್ರಧಾನಿ: ಕದನ ವಿರಾಮ ವಿಸ್ತರಿಸಿದ್ದಕ್ಕಾಗಿ ಶೆಹಬಾಜ್ ಷರೀಫ್ ಅವರು ಡೊನಾಲ್ಡ್ ಟ್ರಂಪ್‌ಗೆ ಧನ್ಯವಾದ ಹೇಳಿದ್ದಾರೆ. ಸಂಘರ್ಷ ಅಂತ್ಯಗೊಳಿಸುವುದಕ್ಕೆ ಪೂರಕವಾಗಿ ಎರಡೂ ಕಡೆಯವರು ಸಮಗ್ರ ಶಾಂತಿ ಒಪ್ಪಂದಕ್ಕೆ ಬರಲು ಇದರಿಂದ ಸಾಧ್ಯವಾಗುತ್ತದೆ ಎಂದು ಅವರು ಭರವಸೆ ವ್ಯಕ್ತಪಡಿಸಿದ್ದಾರೆ.

‘ರಾಜತಾಂತ್ರಿಕ ಪ್ರಯತ್ನಗಳು ಸರಿಯಾದ ಹಾದಿಯಲ್ಲಿ ಸಾಗಲು ಕದನ ವಿರಾಮ ವಿಸ್ತರಿಸುವಂತೆ ನಾನು ಮತ್ತು ಆಸಿಮ್ ಮುನೀರ್ ವಿನಂತಿಸಿದ್ದೆವು. ಅದಕ್ಕೆ ಸಮ್ಮತಿಸಿದ್ದಕ್ಕಾಗಿ ಅಧ್ಯಕ್ಷ ಟ್ರಂಪ್ ಅವರಿಗೆ ಪ್ರಾಮಾಣಿಕವಾಗಿ ಧನ್ಯವಾದ ಅರ್ಪಿಸುತ್ತೇನೆ’ ಎಂದು ಷರೀಫ್ ಹೇಳಿದ್ದಾರೆ.

‘ನಂಬಿಕೆ ಮತ್ತು ವಿಶ್ವಾಸದೊಂದಿಗೆ ಪಾಕಿಸ್ತಾನವು ಸಂಘರ್ಷ ಶಮನಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮುಂದುವರಿಸುತ್ತದೆ’ ಎಂದೂ ಅವರು ತಿಳಿಸಿದ್ದಾರೆ.

ಇದರ ನಡುವೆಯೇ ಇರಾನ್, ಟರ್ಕಿ, ಯುಎಇಯಲ್ಲಿ ನೆಲಸಿರುವ 14 ವ್ಯಕ್ತಿಗಳು, ಸಂಸ್ಥೆಗಳು ಮತ್ತು ವಿಮಾನಗಳ ಮೇಲೆ ಅಮೆರಿಕದ ಆರ್ಥಿಕ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಅವರು ನಿರ್ಬಂಧಗಳನ್ನು ಘೋಷಿಸಿದ್ದಾರೆ. ಇರಾನ್ ಆಡಳಿತದ ಪರವಾಗಿ ಶಸ್ತ್ರಾಸ್ತ್ರ ಸಂಗ್ರಹಿಸುವ ಮತ್ತು ಸಾಗಿಸುವ ಕಾರ್ಯದಲ್ಲಿ ಭಾಗಿಯಾಗಿದೆ ಎಂಬ ಆರೋಪಗಳ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಗೊತ್ತಾಗಿದೆ.

ಅಮೆರಿಕ ತಲುಪಿದ ಸೇನಾ ಮುಖ್ಯಸ್ಥ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಪ್ರವಾಸ ಕೈಗೊಂಡಿರುವ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರನ್ನು ಅಮೆರಿಕಕ್ಕೆ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಅವರು ಸ್ವಾಗತಿಸಿದರು.

ಅಮೆರಿಕದ ಉನ್ನತ ರಕ್ಷಣಾ ಸೇವೆಗಳ ಅಧಿಕಾರಿಗಳನ್ನು ಉಪೇಂದ್ರ ಅವರು ಭೇಟಿಯಾಗಲಿದ್ದಾರೆ. ಉಭಯ ರಾಷ್ಟ್ರಗಳ ರಕ್ಷಣಾ ವ್ಯವಸ್ಥೆ ಕುರಿತು ಮಾತುಕತೆ ನಡೆಸಲಿದ್ದಾರೆ.

‘ಮಹಿಳೆಯರ ಗಲ್ಲು ಶಿಕ್ಷೆ ಕೈಬಿಟ್ಟ ಇರಾನ್’

ವಾಷಿಂಗ್ಟನ್(ಎಎಫ್‌ಪಿ): ‘ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆಗಳಲ್ಲಿ ಪಾಲ್ಗೊಂಡಿದ್ದಕ್ಕಾಗಿ ಬಂಧನಕ್ಕೆ ಒಳಗಾಗಿರುವ ಎಂಟು ಮಹಿಳೆಯರನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಲು ಇರಾನ್ ಮುಂದಾಗಿತ್ತು. ನನ್ನ ಮನವಿ ಮೇರೆಗೆ ಈ ಯೋಜನೆಯನ್ನು ಅದು ಕೈಬಿಟ್ಟಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ.

‘ಶಾಂತಿ ಮಾತುಕತೆಗೆ ನೆರವಾಗುವ ದೃಷ್ಟಿಯಿಂದ ಈ ಗಲ್ಲು ಶಿಕ್ಷೆ ಜಾರಿ ಮಾಡಬಾರದು ಎಂಬ ನನ್ನ ಮನವಿಗೆ ಸ್ಪಂದಿಸಿರುವ ಇರಾನ್ ಆಡಳಿತ ಹಾಗೂ ಅದರ ನಾಯಕರ ನಡೆ ಶ್ಲಾಘನೀಯ’ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಈ ಮಹಿಳೆಯರನ್ನು ಗಲ್ಲಿಗೇರಿಸಲು ಯೋಜಿಸಲಾಗಿತ್ತು ಎಂಬ ವರದಿಗಳನ್ನು ಇರಾನ್ ಅಲ್ಲಗಳೆದಿದೆ.

‘ಬೂಟಾಟಿಕೆಯನ್ನು ಜಗತ್ತು ಗಮನಿಸುತ್ತಿದೆ’

ದುಬೈ(ರಾಯಿಟರ್ಸ್): ಮಾತಿಗೆ ತಕ್ಕಂತೆ ನಡೆದುಕೊಳ್ಳದಿರುವುದು, ಇರಾನ್ ಬಂದರುಗಳಿಗೆ ದಿಗ್ಬಂಧನ ಹಾಕಿರುವುದು ಹಾಗೂ ಬೆದರಿಕೆ ಒಡ್ಡುವಂತಹ ಅಮೆರಿಕದ ಕ್ರಮಗಳೇ ಶಾಂತಿ ಮಾತುಕತೆಗೆ ಎದುರಾಗಿರುವ ಪ್ರಮುಖ ಅಡ್ಡಿಗಳು ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಬುಧವಾರ ಹೇಳಿದ್ದಾರೆ.

‘ಕೊನೆಯಿಲ್ಲದ ನಿಮ್ಮ ಬೂಟಾಟಿಕೆ ಮಾತುಗಳು, ಮಾತಿಗೂ ಮತ್ತು ಕೃತಿಗೂ ಸಂಬಂಧವೇ ಇಲ್ಲದಿರುವುದನ್ನು ಜಗತ್ತು ಗಮನಿಸುತ್ತಿದೆ’ ಎಂದು ಅವರು ಡೊನಾಲ್ಡ್ ಟ್ರಂಪ್ ಅವರನ್ನು ಕುಟುಕಿದ್ದಾರೆ. ಕದನ ವಿರಾಮ ವಿಸ್ತರಿಸಿದ್ದಾಗಿ ಟ್ರಂಪ್ ಅವರು ಘೋಷಿಸಿದ ಮಾರನೇ ದಿನ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಜೈಲರ್-2 ಚಿತ್ರದ ಶೂಟಿಂಗ್ ಪೂರ್ಣ

ರಜನಿಕಾಂತ್ ನಟನೆಯ, ನೆಲ್ಸನ್ ನಿರ್ದೇಶನದ 'ಜೈಲರ್' ಚಿತ್ರದ ಸೀಕ್ವೆಲ್ 'ಜೈಲರ್-2'ನ ಚಿತ್ರೀಕರಣ ಪೂರ್ಣಗೊಂಡಿದೆ.

ಈ ಕುರಿತು ಸಿನಿಮಾ ನಿರ್ಮಾಣ ಸಂಸ್ಥೆಯಾದ ಸನ್ ಪಿಕ್ಚರ್ಸ್ ತನ್ನ ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿ ಹಂಚಿಕೊಂಡಿದೆ. ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಶೀಘ್ರದಲ್ಲೇ ರಿಲೀಸ್ ದಿನಾಂಕ ಘೋಷಣೆಯಾಗಲಿದೆ ಎನ್ನಲಾಗಿದೆ. ಜೂನ್‌ನಲ್ಲಿ ಸಿನಿಮಾ ತೆರೆಗೆ ಬರುವ ಸಾಧ್ಯತೆ ಇದೆ. 2023ರ ಆಗಸ್ಟ್‌ನಲ್ಲಿ ತೆರೆಕಂಡಿದ್ದ 'ಜೈಲರ್' ಸಿನಿಮಾ ಬಾಕ್ಸ್‌ಆಫೀಸ್‌ನಲ್ಲಿ ದೊಡ್ಡ ಸದ್ದು ಮಾಡಿತ್ತು. ರಜನಿಕಾಂತ್ ಅವರ 169ನೇ ಸಿನಿಮಾವಾಗಿದ್ದ ಇದು ಆ ವರ್ಷ ತಮಿಳಿನಲ್ಲಿ ಅತ್ಯಧಿಕ ಗಳಿಕೆ ಮಾಡಿದ ಸಿನಿಮಾಗಳ ಪೈಕಿ ಮೊದಲ ಸ್ಥಾನದಲ್ಲಿತ್ತು. ರಜನಿಕಾಂತ್ ಜೊತೆ ಶಿವರಾಜ್‌ಕುಮಾರ್, ಬಾಲಿವುಡ್ ನಟ ಜಾಕಿ ಶ್ರಾಫ್, ಮಲಯಾಳದ ಮೋಹನ್‌ಲಾಲ್, ಟಾಲಿವುಡ್ ನಟ ಸುನಿಲ್, ನಾಗಬಾಬು, ನಟಿ ರಮ್ಯಾಕೃಷ್ಣ, ತಮನ್ನಾ ಭಾಟಿಯಾ ತೆರೆಹಂಚಿಕೊಂಡಿದ್ದರು. ಮಂಗಳೂರಿನಲ್ಲಿ ಸಿನಿಮಾದ ಶೂಟಿಂಗ್ ನಡೆದಿತ್ತು.

2025ರ ಆರಂಭದಲ್ಲಿ ಸಿನಿಮಾದ ಸೀಕ್ವೆಲ್ ಘೋಷಣೆಯಾಗಿತ್ತು. ಸೀಕ್ವೆಲ್‌ನಲ್ಲೂ ಶಿವರಾಜ್‌ಕುಮಾರ್ 'ನರಸಿಂಹ'ನಾಗಿ ಕಾಣಿಸಿಕೊಳ್ಳಲಿದ್ದಾರೆ. ಮೂಲಗಳ ಪ್ರಕಾರ ಸಿನಿಮಾದ ಒಟಿಟಿ ಹಕ್ಕು ದೊಡ್ಡ ಮೊತ್ತಕ್ಕೆ ಈಗಾಗಲೇ ಬಿಕರಿಯಾಗಿದೆ. 'ಜೈಲರ್-2' ಬಳಿಕ ರಜನಿಕಾಂತ್, ಕಮಲ್‌ಹಾಸನ್ ಜೊತೆಗಿನ ಸಿನಿಮಾಗೆ ಹೆಜ್ಜೆ ಇಡಲಿದ್ದಾರೆ. ಆಗಸ್ಟ್‌ನಲ್ಲಿ ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ.

ರಜನಿಕಾಂತ್, ನೆಲ್ಸನ್

ಮಹಾಲಕ್ಷ್ಮಿ, ಅಗಸ್ತ್ಯ

'ಮಾರಿಗೆ ದಾರಿ' ಟೀಸರ್ ರಿಲೀಸ್

ಅಗಸ್ತ್ಯ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ 'ಮಾರಿಗೆ ದಾರಿ' ಸಿನಿಮಾದ ಟೀಸರ್ ಬಿಡುಗಡೆಗೊಂಡಿದೆ.

ಸಿನಿಮಾದಲ್ಲಿ ನಾಯಕರಾಗಿಯೂ ಅಗಸ್ತ್ಯ ನಟಿಸಿದ್ದು, ರಾಧ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ರಾಧ ಬಂಡವಾಳ ಹೂಡಿದ್ದಾರೆ. ಚೇತನ್‌ಚಂದ್ರ ಮತ್ತು ಸತೀಶ್ ಕೃಷ್ಣ ಶೆಟ್ಟಿ ನಿರ್ಮಾಣದಲ್ಲಿ ಜೊತೆಯಾಗಿದ್ದಾರೆ.

'ಲಕ್ಷ್ಮೀ ನಿವಾಸ' ಧಾರಾವಾಹಿಯಲ್ಲಿ ನಟಿಸುತ್ತಿರುವ ಮಹಾಲಕ್ಷ್ಮಿ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಕಾಕ್ರೋಚ್ ಸುಧಿ, ಬಲ ರಾಜವಾಡಿ, ಬೆನಕ ನಂಜಪ್ಪ, ವರ್ಧನ್, ಪ್ರದೀಪ್ ಪೂಜಾರಿ, ಅನಂತಕುಮಾರ್, ತಾರಕ ರಾಮ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಕಿನ್ನಾಳ ರಾಜ್, ಪ್ರಮೋದ್ ಮರವಂತೆ, ತ್ರಿಲೋಕ ತ್ರಿವಿಕ್ರಮ ಸಾಹಿತ್ಯದ ನಾಲ್ಕು ಗೀತೆಗಳು ಸಿನಿಮಾದಲ್ಲಿವೆ. ರಿಯೋ ಆಂಟೋನಿ ಸಂಗೀತ ಸಂಯೋಜನೆ, ಜಗದೀಶ್ ಗೌಡ ಛಾಯಾಚಿತ್ರಗ್ರಹಣ ಮತ್ತು ಸಂಕಲನ, ಸೈಕ್ ಸೂರಿ ಸಾಹಸ ನಿರ್ದೇಶನ ಚಿತ್ರಕ್ಕಿದೆ. ವಾರಾಣಸಿ, ಬೆಂಗಳೂರು ಮುಂತಾದೆಡೆ ಚಿತ್ರೀಕರಣ ನಡೆದಿದ್ದು, ಸದ್ಯದಲ್ಲೇ ಸಿನಿಮಾ ಸೆನ್ಸಾರ್ ಅಂಗಳಕ್ಕೆ ಕಾಲಿಡಲಿದೆ.

ಸಲ್ಮಾನ್‌ಗೆ ಜೋಡಿಯಾದ ನಯನತಾರಾ

'ಊಪಿರಿ', 'ಮಹರ್ಷಿ', 'ವಾರಿಸು' ಸಿನಿಮಾ ಖ್ಯಾತಿಯ ನಿರ್ದೇಶಕ ವಂಶಿ ಪೈಡಿಪಲ್ಲಿ ನಿರ್ದೇಶನದ ಹೊಸ ಸಿನಿಮಾದ ಶೂಟಿಂಗ್ ಮುಂಬೈನಲ್ಲಿ ಆರಂಭವಾಗಿದೆ. ಸಿನಿಮಾದಲ್ಲಿ ಸಲ್ಮಾನ್ ಖಾನ್ ಹಾಗೂ ನಯನತಾರಾ ಜೊತೆಯಾಗಿ ನಟಿಸುತ್ತಿದ್ದಾರೆ.

ಶ್ರೀ ವೆಂಕಟೇಶ್ವರ ಕ್ರಿಯೇಷನ್ಸ್ ಬ್ಯಾನರ್‌ನಡಿ ದಿಲ್ ರಾಜು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. 2023ರಲ್ಲಿ ಶಾರುಖ್ ಖಾನ್ ನಟನೆಯ, ಅಟ್ಲಿ ನಿರ್ದೇಶನದ 'ಜವಾನ್' ಸಿನಿಮಾ ಮೂಲಕ ಬಾಲಿವುಡ್‌ಗೆ ಹೆಜ್ಜೆ ಇಟ್ಟ ನಯನತಾರಾ ಇದೀಗ ಮತ್ತೊಂದು ಹಿಂದಿ ಪ್ರಾಜೆಕ್ಟ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಲ್ಮಾನ್ ಖಾನ್ ನಟನೆಯ ಈ ಸಿನಿಮಾವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಲಾಗುತ್ತಿದೆ.

ನಯನತಾರಾ

'ಡಿ ಡಿ ಢಿಕ್ಕಿ' ಶೀಘ್ರದಲ್ಲೇ ತೆರೆಗೆ

ರಂಜನಿ ರಾಘವನ್ ನಿರ್ದೇಶನದ 'ಡಿ ಡಿ ಢಿಕ್ಕಿ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ.

'ಪ್ರತಿ ಮನೆಯಲ್ಲಿ ನಡೆಯುವ ಘಟನೆಗಳೇ ಚಿತ್ರವಾಗಿದೆ. ಹಾಸ್ಯಮಯ ಕಥಾಹಂದರವಿದೆ. ಹೊರ ಊರಿನಿಂದ ಬೆಂಗಳೂರಿಗೆ ಬಂದು ಊರಿನ ಬಗ್ಗೆ ಹಪಹಪಿಸುವ ಪಾತ್ರ ಪ್ರೇಮ್ ಅವರದ್ದು. ಬಹುಭಾಗ ಬೆಂಗಳೂರು, ಮಂಡ್ಯ ಸುತ್ತಮುತ್ತ ಚಿತ್ರೀಕರಿಸಿದ್ದೇವೆ. ಒಂದು ಕಥೆ, ಒಂದು ಕನಸು, ಒಂದೂವರೆ ವರ್ಷದ ಪಯಣ. ಸಿನಿಮಾ ಪೂರ್ತಿಗೊಳಿಸುವುದೇ ದೊಡ್ಡ ಅನುಭವ. ಬಿಡುಗಡೆ ಇನ್ನೊಂದು ಪಾಠ' ಎಂದರು ರಂಜನಿ.

ರಂಜನಿ ರಾಘವನ್

ಈ ಚಿತ್ರದಲ್ಲಿ 'ನೆನಪಿರಲಿ' ಪ್ರೇಮ್ ಮುಖ್ಯಪಾತ್ರಧಾರಿ. ಅವರ ಮಗನಾಗಿ ನಟ ಗಣೇಶ್ ಪುತ್ರ ವಿಹಾನ್ ಬಣ್ಣ ಹಚ್ಚಿದ್ದಾರೆ. ಇಳಯರಾಜ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ. ಆರೂರು ಸುಧಾಕರ್ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಚಿತ್ರಕ್ಕಿದೆ. ಜಡೇಶ್ ಕೆ. ಹಂಪಿ ಬಂಡವಾಳ ಹೂಡಿದ್ದಾರೆ.

'ಸದ್ಯ ಚಿತ್ರದ ಸಂಗೀತದ ಕೆಲಸ ನಡೆಯುತ್ತಿದೆ. ಜತೆಗೆ ಪ್ರಚಾರ ಕಾರ್ಯ ಪ್ರಾರಂಭಿಸಿದ್ದೇವೆ. ಜೂನ್ ವೇಳೆಗೆ ಚಿತ್ರ ಬಿಡುಗಡೆ ಆಲೋಚನೆಯಿದೆ. ತರುಣ್ ಸುಧೀರ್ ಕಥೆಯನ್ನು ಪೂರ್ತಿ ಕೇಳಿದ್ದರು. ಚಿತ್ರೀಕರಣ ಮುಗಿದ ಬಳಿಕ ಅವರು ಸಿನಿಮಾ ನೋಡಿ ಇಷ್ಟಪಟ್ಟಿದ್ದಾರೆ. ಇದು ನಮ್ಮ ತಂಡಕ್ಕೆ ಮತ್ತಷ್ಟು ಧೈರ್ಯ ನೀಡಿದೆ. ಸುಂದರ ರಾಜ್, ಗೋಪಾಲಕೃಷ್ಣ ದೇಶಪಾಂಡೆ, ಮಹಾಂತೇಶ್ ಸೇರಿದಂತೆ ಇನ್ನೂ ಕೆಲ ಜನಪ್ರಿಯ ಕಲಾವಿದರು ಚಿತ್ರದಲ್ಲಿದ್ದಾರೆ. ಕೌಟುಂಬಿಕ ಮನರಂಜನೆ ಕಥಾಹಂದರ ಹೊಂದಿರುವ ಚಿತ್ರವಿದು' ಎಂದರು ರಂಜನಿ.

ಪ್ರೇಮ್

'ದೊಡ್ಮನ್ಸ' ಟೀಸರ್ ಬಿಡುಗಡೆ

ಬೆಂಗಳೂರಿನ ಆಟೊ ಚಾಲಕರ ಕುರಿತಾದ ಕಥೆಯನ್ನು ಹೊಂದಿರುವ 'ದೊಡ್ಮನ್ಸ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರಕ್ಕೆ ಶರತ್ ಕೃಷ್ಣ ಆ್ಯಕ್ಷನ್ ಕಟ್ ಹೇಳಿದ್ದಾರೆ. ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ಸಾಮಾನ್ಯ ಆಟೊ ಚಾಲಕನೊಬ್ಬ ಜೀವನದಲ್ಲಿ ಹೇಗೆ ದೊಡ್ಡ ಮನುಷ್ಯನಾಗುತ್ತಾನೆ? ಅದಕ್ಕೆ ಕಾರಣವೇನು? ಎಂಬುದೇ ಚಿತ್ರದ ಕಥೆ. ಮಾಸ್, ಆ್ಯಕ್ಷನ್‌ನೊಂದಿಗೆ ಮನರಂಜಿಸುವ ಚಿತ್ರ. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಶೀಘ್ರದಲ್ಲಿಯೇ ಬಿಡುಗಡೆ ದಿನಾಂಕ ಘೋಷಿಸುತ್ತೇವೆ' ಎಂದರು ನಿರ್ದೇಶಕ.

ರೇಷ್ಮಾ ಲಿಂಗರಾಜಪ್ಪ ನಾಯಕಿ. ಹುಲಿ ಕಾರ್ತಿಕ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. 'ಶರತ್ ಕೃಷ್ಣ ಇಡೀ ಸಿನಿಮಾವನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಹೋಗಿದ್ದಾರೆ. ಸಿನಿಮಾದ ಆರಂಭದಿಂದ ಅಂತ್ಯದವರೆಗೂ ಈ ಚಿತ್ರತಂಡದ ಪ್ರಯಾಣದಲ್ಲಿ ಜತೆಯಾಗಿದ್ದು, ಏಳು-ಬೀಳುಗಳನ್ನು ಹತ್ತಿರದಿಂದ ಕಂಡಿದ್ದೇನೆ. ಈ ಸಿನಿಮಾ ಖಂಡಿತವಾಗಿಯೂ ಪ್ರೇಕ್ಷಕರಿಗೆ ಇಷ್ಟವಾಗಲಿದೆ' ಎಂದರು ಕಾರ್ತಿಕ್.

ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಶ್ರೀಧರ ಕಶ್ಯಪ್ ಮತ್ತು ಅಲೆಕ್ಸ್ ಸಂಗೀತ ಸಂಯೋಜಿಸಿದ್ದಾರೆ. ಆನಂದ ಇಳಯರಾಜ ಛಾಯಾಚಿತ್ರಗ್ರಹಣ, ವೇದಿಕ್ ಸಂಕಲನ ಚಿತ್ರಕ್ಕಿದೆ. 'ವೇದಿಕ್ ಕಾಸ್ಮೋಸ್' ಬ್ಯಾನರಿನಲ್ಲಿ ವೇದಿಕ್ ವೀರ್ ಬಂಡವಾಳ ಹೂಡಿದ್ದು, ಬೆಂಗಳೂರು, ಅಹಮದಾಬಾದ್ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ಶಿಲ್ಪಾ, ಶರತ್ ಕೃಷ್ಣ, ರೇಷ್ಮಾ

'ಬಂಗಾಳದಲ್ಲಿ ಅಸಾಧಾರಣ ಸನ್ನಿವೇಶ'

ಮಮತಾ ಬ್ಯಾನರ್ಜಿ ವಿರುದ್ಧ ಎಫ್‌ಐಆರ್ ಕೋರಿದ್ದ ಇ.ಡಿ ಅರ್ಜಿ ಪ್ರಶ್ನಿಸಿ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಯಾವುದೇ ರಾಜ್ಯದ ಮುಖ್ಯಮಂತ್ರಿಯೊಬ್ಬರು ತನಿಖೆಯೊಂದರಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಹಾಗೂ ಇಂತಹ ನಡೆಗಳಿಂದ ಪ್ರಜಾತಂತ್ರ ವ್ಯವಸ್ಥೆಯನ್ನು ಗಂಡಾಂತರಕ್ಕೆ ನೂಕಬಾರದು' ಎಂದು ಹೇಳುವ ಮೂಲಕ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಸುಪ್ರೀಂ ಕೋರ್ಟ್ ಬುಧವಾರ ಚಾಟಿ ಬೀಸಿದೆ.

ಚುನಾವಣಾ ಸಲಹಾಸಂಸ್ಥೆ ಐ-ಪ್ಯಾಕ್‌ನ ಕೋಲ್ಕತ್ತ ಕಚೇರಿಯಲ್ಲಿ ಶೋಧ ಕೈಗೊಂಡಿದ್ದ ವೇಳೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತನಿಖೆಯಲ್ಲಿ ಹಸ್ತಕ್ಷೇಪ ಮಾಡಿದ್ದಾಗಿ ಆರೋಪಿಸಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶಿಸುವಂತೆ ಕೋರಿ ಜಾರಿ ನಿರ್ದೇಶನಾಲಯವು(ಇ.ಡಿ) ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಎನ್.ವಿ.ಅಂಜಾರಿಯಾ ಅವರು ಇದ್ದ ನ್ಯಾಯಪೀಠ, 'ಕೇಂದ್ರೀಯ ತನಿಖಾ ಸಂಸ್ಥೆಯೊಂದು ಕೈಗೊಂಡಿರುವ ತನಿಖೆಯಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪ ಮಾಡಕೂಡದು ಹಾಗೂ ಇದು ಕೇಂದ್ರ ಮತ್ತು ರಾಜ್ಯದ ನಡುವಿನ ವಿವಾದವೆಂದು ಹೇಳಿಕೊಳ್ಳಬಾರದು' ಎಂದು ಕಟುವಾಗಿ ಹೇಳಿದೆ.

'ನ್ಯಾಯಪೀಠದ ಮುಂದಿರುವ ಪ್ರಕರಣವು 'ರಾಮ ಮತ್ತು ಶ್ಯಾಮ' ಎಂಬುವವರ ನಡುವಿನ ಸಾಮಾನ್ಯ ವಿವಾದವೇನಲ್ಲ. ಪಶ್ಚಿಮ ಬಂಗಾಳದಲ್ಲಿ ಭಿನ್ನ ಸ್ವರೂಪದ ಅಸಾಧಾರಣ ಸನ್ನಿವೇಶ ಇರುವುದನ್ನು ಇದು ತೋರಿಸುತ್ತದೆ' ಎಂದಿದೆ.

ಮುಖ್ಯಾಂಶಗಳು

- ಇ.ಡಿ ತನಿಖೆ ವೇಳೆ ಮಮತಾ ಮಧ್ಯಪ್ರವೇಶಕ್ಕೆ ಆಕ್ಷೇಪ
- 'ಕೇಂದ್ರ ಮತ್ತು ರಾಜ್ಯದ ನಡುವಿನ ಸಂಘರ್ಷವಲ್ಲ'
- ರಾಜ್ಯ ಸರ್ಕಾರದ ವಾದ ಒಪ್ಪದ ಸುಪ್ರೀಂ ಕೋರ್ಟ್

ಪಶ್ಚಿಮ ಬಂಗಾಳದಲ್ಲಿನ ಪ್ರಸ್ತುತ ಸನ್ನಿವೇಶ ಕುರಿತಂತೆ ನ್ಯಾಯಾಲಯ ಕಣ್ಮುಚ್ಚಿ ಕುಳಿತುಕೊಳ್ಳಲು ಸಾಧ್ಯ ಇಲ್ಲ. ಸಾಮಾಜಿಕ-ರಾಜಕೀಯ ವಸ್ತುಸ್ಥಿತಿ ಗಮನದಲ್ಲಿಟ್ಟುಕೊಂಡು ನ್ಯಾಯಾಲಯ ನಿರ್ಧಾರ ಕೈಗೊಳ್ಳಬೇಕು

ಸುಪ್ರೀಂ ಕೋರ್ಟ್



ಮುಖ್ಯಮಂತ್ರಿ ಸ್ಥಾನದಲ್ಲಿರುವ ವ್ಯಕ್ತಿ ಮಾಡಿರುವ ಕೃತ್ಯವಿದು

'ಮುಖ್ಯಮಂತ್ರಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಬದಲಾಗಿ ಜಾರಿ ನಿರ್ದೇಶನಾಲಯವು ವಿಚಾರಣಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬೇಕಿತ್ತು' ಎಂಬ ವಾದವನ್ನು ಕೂಡ ನ್ಯಾಯಪೀಠ ಒಪ್ಪಲಿಲ್ಲ.

'ಈ ವಿಚಾರವನ್ನು ರಾಜ್ಯ ಮತ್ತು ಕೇಂದ್ರದ ನಡುವಿನ ವಿವಾದವನ್ನಾಗಿ ಪರಿವರ್ತಿಸಬೇಡಿ. ಒಬ್ಬ ಮುಖ್ಯಮಂತ್ರಿ ಸ್ಥಾನದಲ್ಲಿರುವ ವ್ಯಕ್ತಿ ಮಾಡಿರುವ ಕೃತ್ಯವಿದು' ಎಂದು ಇ.ಡಿ ಮೇಲ್ಮನವಿ ಪ್ರಶ್ನಿಸಿದ್ದ ಹಿರಿಯ ವಕೀಲೆ ಮೇನಕಾ ಗುರುಸ್ವಾಮಿ ಅವರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

'ಜಾರಿ ನಿರ್ದೇಶನಾಲಯ ಶೋಧ ನಡೆಸಿದ್ದ ವೇಳೆ, ಅಪರಾಧಿಕ ವರ್ತನೆಯಾಗಲಿ, ಬೆದರಿಕೆಯಾಗಲಿ ಇರಲಿಲ್ಲ ಅಥವಾ ಯಾವುದೇ ಉಲ್ಲಂಘನೆಯೂ ಆಗಿಲ್ಲ. ಅಲ್ಲದೇ, ಜಾರಿ ನಿರ್ದೇಶನಾಲಯವು ತನ್ನ ದೂರನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಬೇಕಿತ್ತು' ಎಂದು ವಕೀಲೆ ಮೇನಕಾ ಅವರು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಪಶ್ಚಿಮ ಬಂಗಾಳದಲ್ಲಿನ ವಾಸ್ತವಸ್ಥಿತಿಯನ್ನು ನ್ಯಾಯಾಲಯ ನಿರ್ಲಕ್ಷ್ಯ ಮಾಡುವುದಿಲ್ಲ' ಎಂದು ಹೇಳಿತು.

ನ್ಯಾಯಾಂಗ ಅಧಿಕಾರಿಗಳನ್ನು ಇತ್ತೀಚೆಗೆ ಒತ್ತೆಯಾಗಿ ಇಟ್ಟುಕೊಂಡಿದ್ದ ಘಟನೆಯನ್ನು ಉಲ್ಲೇಖಿಸಿದ ನ್ಯಾಯಪೀಠ, 'ಪರಿಸ್ಥಿತಿ ಹೀಗಿರುವಾಗ ಅರ್ಜಿದಾರರು(ಇ.ಡಿ) ಸೆಕ್ಷನ್ 200ರಡಿ ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕಿತ್ತು ಎಂಬುದಾಗಿ ನೀವು ಬಯಸುತ್ತೀರಿ' ಎಂದು ಮತ್ತೊಮ್ಮೆ ಚಾಟಿ ಬೀಸಿತು.

ಪಟಾಕಿ ದುರಂತ: ಎಸ್‌ಐಟಿ ತನಿಖೆ

ತಿರುವನಂತಪುರ (ಪಿಟಿಐ): 'ಮುಂಡತ್ತಿಕೋಡ್ ಪಟಾಕಿ ದುರಂತದ ತನಿಖೆಗೆ ತ್ರಿಶ್ಶೂರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ. ಸ್ಫೋಟಕ್ಕೆ ನಿಖರ ಕಾರಣ ಶೀಘ್ರದಲ್ಲೇ ತಿಳಿಯಲಿದೆ' ಎಂದು ಕೇರಳ ಡಿಜಿಪಿ ರಾವಡ ಎ. ಚಂದ್ರಶೇಖರ್ ಹೇಳಿದ್ದಾರೆ.

ಕೇರಳ ಸರ್ಕಾರ ಈ ದುರಂತವನ್ನು 'ರಾಜ್ಯ ವಿಪತ್ತು' ಎಂದು ಘೋಷಿಸಿದ್ದು, ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹14 ಲಕ್ಷ ಪರಿಹಾರ ಘೋಷಿಸಿದೆ.

'ಎಸ್‌ಐಟಿ ತನಿಖೆಯ ಜತೆಯಲ್ಲೇ, ಕೇರಳ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದು, ನ್ಯಾಯಮೂರ್ತಿ ಸಿ.ಎನ್. ರಾಮಚಂದ್ರನ್ ನಾಯರ್ ನೇತೃತ್ವದ ಏಕಸದಸ್ಯ ಆಯೋಗವು ಪ್ರಕರಣದ ಕುರಿತು ತನಿಖೆ ನಡೆಸಿ ವರದಿ ನೀಡಲಿದೆ' ಎಂದು ಕಂದಾಯ ಸಚಿವ ಕೆ. ರಾಜನ್ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಮೃತದೇಹಗಳ ಅಂತ್ಯಸಂಸ್ಕಾರ, ಮಾದರಿ ಸಂಗ್ರಹ, ಡಿಎನ್‌ಎ ಪರೀಕ್ಷೆಗಾಗಿ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ರೂಪಿಸುವಂತೆ ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಸರ್ಕಾರ ಸೂಚನೆ ನೀಡಿದೆ.

ತ್ರಿಶ್ಶೂರ್ ಸಮೀಪದ ಮುಂಡತ್ತಿಕೋಡ್‌ನಲ್ಲಿ ಪಟಾಕಿ ದುರಂತ ಸಂಭವಿಸಿದ ಸ್ಥಳದಲ್ಲಿ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದರು — ಪಿಟಿಐ ಚಿತ್ರ

ಮೃತರ ಸಂಖ್ಯೆ 14ಕ್ಕೆ ಏರಿಕೆ

ಸ್ಫೋಟದಲ್ಲಿ ಮಂಗಳವಾರ 13 ಕಾರ್ಮಿಕರು ಮೃತಪಟ್ಟಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಒಬ್ಬ ಗಾಯಾಳು ಬುಧವಾರ ಮೃತಪಟ್ಟಿದ್ದು, ಸಾವಿನ ಸಂಖ್ಯೆ 14ಕ್ಕೆ ಏರಿದೆ. ದುರಂತದಿಂದ ಪಾರಾಗಿ 10 ಕಾರ್ಮಿಕರು ಸುರಕ್ಷಿತವಾಗಿ ಮನೆ ತಲುಪಿದ್ದಾರೆ ಎಂದು ತ್ರಿಶ್ಶೂರ್ ಜಿಲ್ಲಾಧಿಕಾರಿ ಶಿಖಾ ಸುರೇಂದ್ರನ್ ತಿಳಿಸಿದ್ದಾರೆ.

'ಗಾಯಾಳುಗಳಿಗೆ ತಕ್ಷಣದ ಪರಿಹಾರವಾಗಿ ₹2 ಲಕ್ಷ ಪಾವತಿಸಲಾಗುವುದು. ಅವರ ಚಿಕಿತ್ಸಾ ವೆಚ್ಚವನ್ನು ಪೂರ್ಣವಾಗಿ ಸರ್ಕಾರವೇ ಭರಿಸಲಿದೆ, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡವರ ವೆಚ್ಚವನ್ನೂ ಪಾವತಿಸಲಾಗುವುದು' ಎಂದು ಸಚಿವ ರಾಜನ್ ಹೇಳಿದರು.

'ಭಯೋತ್ಪಾದಕ' ಹೇಳಿಕೆ: ಬಿಜೆಪಿ ಆಕ್ರೋಶ

ಖರ್ಗೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಬಿಜೆಪಿ ನಿಯೋಗದಿಂದ ಚುನಾವಣಾ ಆಯೋಗಕ್ಕೆ ಬುಧವಾರ ದೂರು ಸಲ್ಲಿಕೆ

ಖರ್ಗೆಗೆ ಇ.ಸಿ ನೋಟಿಸ್

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಭಯೋತ್ಪಾದಕ' ಎಂದು ಕರೆದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಭಾರತೀಯ ಚುನಾವಣಾ ಆಯೋಗ ಬುಧವಾರ ತಿಳಿಸಿದೆ.

ಚೆನ್ನೈನಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ್ದ ಖರ್ಗೆ, ಬಿಜೆಪಿಯು ತಮಿಳುನಾಡಿನಲ್ಲಿ ಎಐಎಡಿಎಂಕೆ ಜತೆಗೆ ಕೈಜೋಡಿಸಿರುವುದನ್ನು ವಿವರಿಸುವಾಗ ಪ್ರಧಾನಿ ಅವರನ್ನು 'ಭಯೋತ್ಪಾದಕ' ಎಂದು ಹೇಳಿದ್ದರು.

ಈ ಹೇಳಿಕೆ ಬಗ್ಗೆ ಪತ್ರಕರ್ತರು ಪ್ರಶ್ನಿಸಿದ್ದಾಗ ಖರ್ಗೆ, 'ಆಡಳಿತ ದುರುಪಯೋಗದ ಮೂಲಕ ಮೋದಿ ಅವರು, ದೇಶದ ಪ್ರಜಾಪ್ರಭುತ್ವ ಮತ್ತು ಜನರನ್ನು ಭಯದಲ್ಲಿಟ್ಟಿದ್ದಾರೆ. ಈ ಅರ್ಥದಲ್ಲಿ 'ಭಯೋತ್ಪಾದನೆ' ಎಂದು ಹೇಳಿದ್ದೇನೆ' ಎಂದು ಸ್ಪಷ್ಟಪಡಿಸಿದ್ದರು.

ಖರ್ಗೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಕಿರಣ್ ರಿಜಿಜು ಅವರನ್ನೊಳಗೊಂಡ ಬಿಜೆಪಿ ನಿಯೋಗವು ಚುನಾವಣಾ ಆಯೋಗಕ್ಕೆ ಬುಧವಾರ ದೂರು ಸಲ್ಲಿಸಿತು. ಆ ಬಳಿಕ ಆಯೋಗವು ಖರ್ಗೆ ಅವರಿಗೆ ನೋಟಿಸ್ ನೀಡಿದೆ. 24 ಗಂಟೆಗಳಲ್ಲಿ ಉತ್ತರ ನೀಡುವಂತೆ ಆಯೋಗ ನಿರ್ದೇಶನ ನೀಡಿದೆ.

ಚುನಾವಣಾ ಆಯೋಗವು ಮಾಧ್ಯಮಗಳೊಂದಿಗೆ ಹೆಚ್ಚಿನ ವಿವರಗಳನ್ನು ಹಂಚಿಕೊಳ್ಳದಿದ್ದರೂ ಆಯೋಗವು ಈ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಿದೆ ಮತ್ತು ಖರ್ಗೆ ಅವರಿಗೆ ಕಠಿಣ ನೋಟಿಸ್ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಏತನ್ಮಧ್ಯೆ, ಸಂವಿಧಾನ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಸೋಲಾದ ಬಳಿಕ ಪ್ರಧಾನಿ ಅವರು ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕಾಗಿ ದಾಖಲಾಗಿರುವ ದೂರುಗಳ ವಿರುದ್ಧ ತೆಗೆದುಕೊಂಡ ಕ್ರಮದ ಬಗ್ಗೆ ಚುನಾವಣಾ ಆಯೋಗವು ಯಾವುದೇ ವಿವರಗಳನ್ನು ನೀಡಿಲ್ಲ. ಅವರ ಭಾಷಣ ನೀತಿಸಂಹಿತೆಯ ಉಲ್ಲಂಘನೆ ಎಂದು ಆರೋಪಿಸಿ ವಿರೋಧ ಪಕ್ಷಗಳು ಮತ್ತು 700 ನಾಯಕರು, ಚಿಂತಕರು ಮತ್ತು ಕಾರ್ಯಕರ್ತರ ಗುಂಪು ಪ್ರತ್ಯೇಕವಾಗಿ ಆಯೋಗಕ್ಕೆ ದೂರು ಸಲ್ಲಿಸಿತ್ತು.

ತಮಿಳುನಾಡು, ಪ.ಬಂಗಾಳ: ಇಂದು ಮತದಾನ

ನವದೆಹಲಿ (ಪಿಟಿಐ): ತಮಿಳುನಾಡು ವಿಧಾನಸಭೆಯ ಎಲ್ಲ ಕ್ಷೇತ್ರಗಳು ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಯ 152 ಕ್ಷೇತ್ರಗಳ ಚುನಾವಣೆಯ ಮತದಾನ ಗುರುವಾರ ನಡೆಯಲಿದೆ. ತಮಿಳುನಾಡಿನ 234 ವಿಧಾನಸಭಾ ಕ್ಷೇತ್ರಗಳಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. 5.73 ಕೋಟಿ ಮತದಾರರು 4,023 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಎರಡು ಹಂತದಲ್ಲಿ ಚುನಾವಣೆ ನಡೆಯಲಿದ್ದು, ಎರಡನೆಯ ಹಂತದ ಮತದಾನ ಏಪ್ರಿಲ್ 29ರಂದು ನಡೆಯಲಿದೆ. ಮೊದಲ ಹಂತದ ಚುನಾವಣೆಯಲ್ಲಿ 152 ಕ್ಷೇತ್ರಗಳಲ್ಲಿ 1478 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಮೇ 4ರಂದು ಚುನಾವಣಾ ಫಲಿತಾಂಶ ಪ್ರಕಟಗೊಳ್ಳಲಿದೆ.

ವಿಧಾನಸಭಾ ಚುನಾವಣೆ ಪ್ರಯುಕ್ತ ರಾಜ್ಯದಲ್ಲಿ ಭಾರಿ ಸಂಖ್ಯೆಯ ಸಿಆರ್‌ಪಿಎಫ್ ವಾಹನಗಳು, ಶಸ್ತ್ರಸಜ್ಜಿತ ಸಿಬ್ಬಂದಿ ನಿಯೋಜಿಸಲಾಗಿದೆ. ಬಿಜೆಪಿ ನಮ್ಮನ್ನು ಬೆದರಿಸಲು ಯತ್ನಿಸುತ್ತಿದೆಯೇ

ಮಮತಾ ಬ್ಯಾನರ್ಜಿ, ಪ.ಬಂಗಾಳದ ಮುಖ್ಯಮಂತ್ರಿ

'ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನವನ್ನೂ ಗೆಲ್ಲುವುದಿಲ್ಲ, ಅಸ್ಸಾಂನಲ್ಲಿ ಇದುವರೆಗಿನ ಅತಿದೊಡ್ಡ ಸೋಲನ್ನು ಕಾಣಲಿದೆ

ಅಮಿತ್ ಶಾ ಕೇಂದ್ರ ಗೃಹ ಸಚಿವ

ಸೂಕ್ತ ಸಾಕ್ಷ್ಯ ನೀಡದ ಭಾರತ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪಾಕಿಸ್ತಾನದ ನಂಟಿದೆ ಎನ್ನುವುದಕ್ಕೆ ಭಾರತ ಯಾವುದೇ ಸಾಕ್ಷ್ಯಗಳನ್ನು ಒದಗಿಸಿಲ್ಲ ಎಂದು ಪಾಕಿಸ್ತಾನ ಬುಧವಾರ ಹೇಳಿದೆ.

ಪಹಲ್ಗಾಮ್ ದಾಳಿ ನಡೆದು ಒಂದು ವರ್ಷ ಪೂರ್ಣಗೊಂಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ಪಾಕಿಸ್ತಾನದ ಸಂವಹನ ಸಚಿವ ಅತ್ತಾವುಲ್ಲಾ ತರಾರ್, 'ಸೂಕ್ತ ಸಾಕ್ಷ್ಯವಿಲ್ಲದೆ, ತನಿಖೆಯಿಲ್ಲದೆ ತಕ್ಷಣವೇ ಪಾಕಿಸ್ತಾನದ ಮೇಲೆ ಆರೋಪ ಹೊರಿಸಲಾಯಿತು. ಆ ಆರೋಪ ಆಧಾರರಹಿತ ಮತ್ತು ಕಪೋಲಕಲ್ಪಿತವಾದದ್ದು' ಎಂದು ಹೇಳಿದ್ದಾರೆ.

'ಯಾವುದೇ ರೀತಿಯ ದುಸ್ಸಾಹಸಕ್ಕೆ ದೃಢ, ನಿರ್ಣಾಯಕ ಮತ್ತು ತ್ವರಿತ ಪ್ರತಿಕ್ರಿಯೆಯನ್ನು ನೀಡಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಆಂಧ್ರ ಮಾಜಿ ಸಿ.ಎಂ ನಾದೆಂಡ್ಲ ಭಾಸ್ಕರ ರಾವ್ ನಿಧನ

ಹೈದರಾಬಾದ್: ಅವಿಭಜಿತ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ನಾದೆಂಡ್ಲ ಭಾಸ್ಕರ ರಾವ್ (90) ಅವರು ಬುಧವಾರ ನಿಧನರಾಗಿದ್ದಾರೆ.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ರಾವ್ ಅವರು ಇಲ್ಲಿನ ಆಸ್ಪತ್ರೆಯೊಂದರಲ್ಲಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದರು.

1984ರಲ್ಲಿ ಆಂಧ್ರಪ್ರದೇಶದ ಅಂದಿನ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಅವರು ಹೃದಯ ಸಂಬಂಧಿ ಶಸ್ತ್ರಚಿಕಿತ್ಸೆಗೆ ಅಮೆರಿಕಕ್ಕೆ ತೆರಳಿದ ಬಳಿಕ ಭಾಸ್ಕರ್ ರಾವ್ ಅವರು ಆಂಧ್ರಪ್ರದೇಶದ ಮುಖ್ಯಮಂತ್ರಿ ಆಗಿ ಪ್ರಮಾಣವಚನ ಸ್ವೀಕರಿಸಿದ್ದರು.

ಆಗಸ್ಟ್ 16 ರಿಂದ ಸೆಪ್ಟೆಂಬರ್ 16ರವರೆಗೆ ಅವರ ನೇತೃತ್ವದ ಸರ್ಕಾರ ಅಧಿಕಾರದಲ್ಲಿತ್ತು. ಈ ಮೂಲಕ ಆಂಧ್ರದ ಅತ್ಯಂತ ಕಡಿಮೆ ಅವಧಿಯ ಮುಖ್ಯಮಂತ್ರಿ ಎಂದು ರಾಜ್ಯದ ರಾಜಕೀಯ ಇತಿಹಾಸದಲ್ಲಿ ಭಾಸ್ಕರ್ ರಾವ್ ಗುರುತಿಸಿಕೊಂಡಿದ್ದಾರೆ.

ಪಹಲ್ಗಾಮ್ ದಾಳಿ ನಡೆದು ಒಂದು ವರ್ಷ • ಪೋಸ್ಟ್ ಹಂಚಿಕೊಂಡ ಭಾರತದ ಸೇನೆ

'ಭಾರತದ ವಿರುದ್ಧ ಕ್ರಿಯೆಗೆ ಪ್ರತಿಕ್ರಿಯೆ ಶತಃಸಿದ್ಧ'

ನವದೆಹಲಿ/ಮುಂಬೈ (ಪಿಟಿಐ): ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ದಾಳಿ ನಡೆಸಿ ಬುಧವಾರಕ್ಕೆ ಒಂದು ವರ್ಷ ಕಳೆದಿದೆ. ಈ ಕರಾಳ ದಿನವನ್ನು ನೆನಪಿಸಿಕೊಂಡಿರುವ ಭಾರತದ ಸೇನೆಯು, 'ಭಯೋತ್ಪಾದಕರ ವಿರುದ್ಧದ ನಮ್ಮ ಹೋರಾಟವು ಅಚಲ. ಭಾರತದ ವಿರುದ್ಧದ ಯಾವುದೇ ಕ್ರಿಯೆಗೆ ಪ್ರತಿಕ್ರಿಯೆ ಶತಃಸಿದ್ಧ' ಎಂದು 'ಎಕ್ಸ್'ನಲ್ಲಿ ಬುಧವಾರ ಪೋಸ್ಟ್ ಹಂಚಿಕೊಂಡಿದೆ.

2025ರ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿ ನಡೆದಿತ್ತು. ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು. ಭಯೋತ್ಪಾದಕರ ಈ ದಾಳಿಗೆ ಪ್ರತಿಯಾಗಿ ಭಾರತವು ಮೇ 7ಕ್ಕೆ 'ಸಿಂಧೂರ' ಕಾರ್ಯಾಚರಣೆ ಆರಂಭಿಸಿತ್ತು. ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಭಯೋತ್ಪಾದಕ ನೆಲೆಗಳ ಮೇಲೆ ದಾಳಿ ನಡೆಸಲಾಗಿತ್ತು.

ಮಂಗಳವಾರ ಕೂಡ ಪೋಸ್ಟ್ ಹಂಚಿಕೊಂಡಿದ್ದ ಸೇನೆ, 'ಯಾವಾಗ ಮಾನವೀಯತೆಯ ಗಡಿ ದಾಟಲಾಗುತ್ತದೆಯೊ ಆಗ ಪ್ರತಿಕ್ರಿಯೆ ನೀಡಲಾಗುತ್ತದೆ' ಎಂದಿತ್ತು. ದಾಳಿ ನಡೆಸಿದ ಉಗ್ರರನ್ನು ಪತ್ತೆ ಮಾಡಲು ಭಾರತದ ಸೇನೆಯು ಆರಂಭಿಸಿದ್ದ 'ಮಹಾದೇವ್' ಕಾರ್ಯಾಚರಣೆಯನ್ನೂ ಪೋಸ್ಟ್‌ನಲ್ಲಿ ಸೇನೆ ನೆನಪಿಸಿಕೊಂಡಿದೆ.

'ತಡೆಯಬೇಕು'

ಪಹಲ್ಗಾಮ್‌ನಲ್ಲಿ ನಡೆದಂಥ ದಾಳಿಗಳು ಮತ್ತೊಮ್ಮೆ ನಡೆಯದಂತೆ ಎಲ್ಲ ಪ್ರಯತ್ನವನ್ನು ಮಾಡಬೇಕು. ಅದು ಜನರಿಂದ ಆಯ್ಕೆಯಾದ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಅಥವಾ ಪೊಲೀಸ್ ಆಗಲಿ. ನಾವು ಒಗ್ಗಟ್ಟಾಗಿ ಪ್ರಯತ್ನ ನಡೆಸಬೇಕು

ಒಮರ್ ಅಬ್ದುಲ್ಲಾ, ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ

ಶಾಗೆ ಮನೆ ನಿರ್ಮಿಸಿ ಕೊಟ್ಟ ಶಿಂದೆ

ಭಯೋತ್ಪಾದಕರ ಗುಂಡಿನ ದಾಳಿಯಿಂದ ಪ್ರವಾಸಿಗರನ್ನು ಉಳಿಸಲು ಯತ್ನಿಸಿ, ಬಳಿಕ ಅವರಿಂದಲೇ ಹತನಾದ ಪಹಲ್ಗಾಮ್‌ನಲ್ಲಿ ಕುದುರೆ ಸವಾರಿ ಸೇವೆ ಒದಗಿಸುತ್ತಿದ್ದ ಸೈಯದ್ ಆದಿಲ್ ಹುಸೇನ್ ಶಾ ಅವರಿಗೆ ಮನೆ ನಿರ್ಮಿಸಿಕೊಡುವುದಾಗಿ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಅಂದು ಭರವಸೆ ನೀಡಿದ್ದರು. ಅಂತೆಯೇ ಶಿಂದೆ ಅವರು ಮನೆ ನಿರ್ಮಿಸಿಕೊಟ್ಟಿದ್ದಾರೆ.

ವಿದೇಶಾಂಗ ನೀತಿಯ ವೈಫಲ್ಯ: ಪಾಕಿಸ್ತಾನದ ಸೇನಾ ಮುಖ್ಯಸ್ಥನಿಗೆ ಈಗ ಜಗತ್ತಿನಲ್ಲಿ ದೊಡ್ಡ ಮರ್ಯಾದೆ ಸಿಗುತ್ತಿದೆ. ಇದು ಪ್ರಧಾನಿ ಮೋದಿ ಅವರ ವಿದೇಶಾಂಗ ನೀತಿಯ ವೈಫಲ್ಯ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಪಹಲ್ಗಾಮ್ ದಾಳಿಯಲ್ಲಿ ಜೀವ ಕಳೆದುಕೊಂಡವರನ್ನು ಮರೆಯಲು ಸಾಧ್ಯವೇ ಇಲ್ಲ. ದುಃಖದ ಸಮಯದಲ್ಲಿ ಇಡೀ ದೇಶವೇ ಒಗ್ಗಟ್ಟಾಗಿದೆ. ಯಾವುದೇ ರೀತಿಯ ಭಯೋತ್ಪಾದನೆಗೆ ಭಾರತವು ತಲೆ ಬಾಗುವುದಿಲ್ಲ

ನರೇಂದ್ರ ಮೋದಿ, ಪ್ರಧಾನಿ

ಪಹಲ್ಗಾಮ್ ದಾಳಿಯ ಸಂಚುಕೋರ ಸಾಜಿದ್ ಜಟ್ಟನನ್ನು ಯಾವಾಗ ಬಂಧಿಸುತ್ತೀರಿ?

ಮಹೇಶ್ ತಾಪಸೆ, ಎನ್‌ಸಿಪಿ (ಶರದ್ ಪವಾರ್) ವಕ್ತಾರ

ದ್ವೇಷ ಮತ್ತು ಭಯವನ್ನು ಹುಟ್ಟಿಸುವ ಶಕ್ತಿಗೆ ಭಾರತವು ಎಂದಿಗೂ ತಲೆ ಬಾಗುವುದಿಲ್ಲ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಭಾರತವು 'ಆಪರೇಷನ್ ಸಿಂಧೂರ' ಮತ್ತು 'ಆಪರೇಷನ್ ಮಹಾದೇವ್' ಮೂಲಕ ನೀಡಿದ ಉತ್ತರದ ಕುರಿತು ಭಾರತೀಯಳಾಗಿ ನಾನು ಗರ್ವ ಪಡುತ್ತೇನೆ

ಆರತಿ ಆರ್. ಮೆನನ್, ದಾಳಿಯಲ್ಲಿ ಮೃತಪಟ್ಟ ಕೇರಳದ ಎನ್.ರಾಮಚಂದ್ರನ್ ಅವರ ಮಗಳು

ಹೇಗೋ ಜೀವನ ನಡೆಸುತ್ತಿದ್ದೇವೆ. ಸರ್ಕಾರವು ₹20 ಲಕ್ಷ ಹಣಕಾಸಿನ ನೆರವು ನೀಡಿತು. ಮಕ್ಕಳ ಶಿಕ್ಷಣಕ್ಕೆ ಸಹಕಾರ ನೀಡುವ ಭರವಸೆ ಇನ್ನೂ ಈಡೇರಿಲ್ಲ

ಪ್ರಿಯದರ್ಶಿನಿ ಸತ್‌ಪತಿ, ದಾಳಿಯಲ್ಲಿ ಮೃತಪಟ್ಟ ಒಡಿಶಾದ ಪ್ರಶಾಂತ್ ಕುಮಾರ್ ಸತ್‌ಪತಿ ಅವರ ಪತ್ನಿ

ಗೆಲುವಿನ ಹಳಿಗೆ ಮರಳಿದ ರಾಯಲ್ಸ್

ರವೀಂದ್ರ ಜಡೇಜ ಆಲ್‌ರೌಂಡ್ ಆಟ • ಲಖನೌಗೆ ಸತತ ನಾಲ್ಕನೇ ಸೋಲು

ಲಖನೌ(ಪಿಟಿಐ): ಅನುಭವಿ ರವೀಂದ್ರ ಜಡೇಜ ಅವರ ಆಲ್‌ರೌಂಡ್ ಆಟ ಹಾಗೂ ಬೌಲರ್‌ಗಳ ಸಾಂಘಿಕ ಪ್ರದರ್ಶನದ ನೆರವಿನಿಂದ ರಾಜಸ್ಥಾನ ರಾಯಲ್ಸ್ ತಂಡವು ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ 40 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಸೋಲಿಸಿತು. ಈ ಗೆಲುವಿನೊಂದಿಗೆ ರಿಯಾನ್ ಪರಾಗ್ ಪಡೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಲಖನೌ ತಂಡದ ವೇಗಿಗಳಾದ ಮೊಹಮ್ಮದ್ ಶಮಿ (30ಕ್ಕೆ2) ಹಾಗೂ ಮೊಹ್ಸಿನ್ ಖಾನ್ (17ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ದಾಳಿ ಎದುರು ರಾಯಲ್ಸ್ ತಂಡವು ಕಡಿಮೆ ಮೊತ್ತಕ್ಕೆ ಕುಸಿಯುವ ಅಪಾಯದಲ್ಲಿತ್ತು. ಜಡೇಜ (ಔಟಾಗದೇ 43; 29ಎ, 4x2, 6x1) ಹಾಗೂ ಶುಭಂ ದುಬೆ (ಔಟಾಗದೇ 19) ಜೋಡಿಯ ಸಾಹಸದ ಬಲದಿಂದ ಪರಾಗ್ ಪಡೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 159 ರನ್ ಪೇರಿಸಿತು.

ಸಾಧಾರಣ ಮೊತ್ತ ಬೆನ್ನಟ್ಟಿದ ಲಖನೌ ತಂಡವು ಬ್ಯಾಟಿಂಗ್‌ನಲ್ಲಿ ಮತ್ತೆ ವೈಫಲ್ಯ ಅನುಭವಿಸಿತು. ನಿರಂತರವಾಗಿ ವಿಕೆಟ್ ಕಳೆದುಕೊಂಡ ರಿಷಭ್ ಪಂತ್ ಪಡೆ 18 ಓವರ್‌ಗಳಲ್ಲಿ 119 ರನ್‌ಗಳಿಗೆ ಸರ್ವಪತನವಾಯಿತು. ಅದರೊಂದಿಗೆ, ಹಾಲಿ ಲೀಗ್‌ನಲ್ಲಿ ಸತತ ನಾಲ್ಕನೇ ಸೋಲು ಅನುಭವಿಸಿತು.

ಆರಂಭ ಆಟಗಾರ ಮಿಚೆಲ್ ಮಾರ್ಷ್ (55; 41ಎ) ಅರ್ಧಶತಕ ಗಳಿಸಿ ಹೋರಾಟ ತೋರಿದರು. ಆದರೆ, ಉಳಿದವರಿಂದ ಅಗತ್ಯ ಬೆಂಬಲ ಸಿಗಲಿಲ್ಲ. ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಆಯುಷ್ ಬಡೋನಿ (0; 1ಎ), ನಾಯಕ ಪಂತ್ (0; 3ಎ) ಹಾಗೂ ಏಡನ್ ಮರ್ಕರಂ (0; 6ಎ) ಶೂನ್ಯಕ್ಕೆ ಔಟಾಗಿ, ನಿರಾಶೆ ಅನುಭವಿಸಿದರು.

ವೆಸ್ಟ್ ಇಂಡೀಸ್‌ನ ನಿಕೊಲಸ್ ಪೂರನ್ (22; 25ಎ) ಆಟಕ್ಕೆ ಕುದುರಿಕೊಳ್ಳುವ ಹಂತದಲ್ಲಿ ಜಡೇಜ ಅವರ ಬೌಲಿಂಗ್‌ನಲ್ಲಿ ಡೊನೊವನ್ ಫೆರಿರಾ ಅವರಿಗೆ ಕ್ಯಾಚ್ ಆದರು.

ಪಿಚ್‌ನ ಲಾಭ ಪಡೆದ ರಾಜಸ್ಥಾನ ತಂಡದ ವೇಗಿಗಳಾದ ಜೋಫ್ರಾ ಆರ್ಚರ್ (20ಕ್ಕೆ3), ನಾಂಡ್ರೆ ಬರ್ಗರ್ (27ಕ್ಕೆ2) ಹಾಗೂ ಬ್ರಿಜೇಶ್ ಶರ್ಮಾ (18ಕ್ಕೆ2) ಲಖನೌ ತಂಡದ ಬ್ಯಾಟರ್‌ಗಳ ದೌರ್ಬಲ್ಯವನ್ನು ಮತ್ತೆ ಸಾಬೀತುಪಡಿಸಿದರು.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	6	5	0	1	11	1.420
ಆರ್ ಆರ್	7	5	2	0	10	0.790
ಆರ್‌ಸಿಬಿ	6	4	2	0	8	1.171
ಎಸ್‌ಆರ್‌ಎಚ್	7	4	3	0	8	0.820
ಡಿ ಸಿ	6	3	3	0	6	- 0.130
ಜಿ ಟಿ	6	3	3	0	6	- 0.821
ಎಂ ಐ	6	2	4	0	4	0.067
ಸಿಎಸ್‌ಕೆ	6	2	4	0	4	- 0.780
ಎಲ್‌ಎಸ್‌ಜಿ	7	2	5	0	4	- 1.277
ಕೆಕೆಆರ್	7	1	5	1	3	- 0.879

ಆರೆಂಜ್ ಕ್ಯಾಪ್–ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (323 ರನ್)
ಪರ್ಪಲ್ ಕ್ಯಾಪ್–ಪ್ರಿನ್ಸ್ ಯಾದವ್, ಎಲ್‌ಎಸ್‌ಜಿ (13 ವಿಕೆಟ್)

ವಿಕೆಟ್ ಗಳಿಸಿದ ರಾಜಸ್ಥಾನ ರಾಯಲ್ಸ್ ತಂಡದ ಜೋಫ್ರಾ ಆರ್ಚರ್ (ಮಧ್ಯ) ಅವರನ್ನು ರವೀಂದ್ರ ಜಡೇಜ (ಎಡ) ಹಾಗೂ ಶುಭಂ ದುಬೆ ಅಭಿನಂದಿಸಿದರು ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 6ಕ್ಕೆ159 (20 ಓವರ್‌ಗಳಲ್ಲಿ)
ಯಶಸ್ವಿ ಸಿ ರಿಷಭ್ ಬಿ ಶಮಿ 22 (12ಎ, 4X4)
ವೈಭವ್ ಸಿ ದಿಗ್ವೇಶ್ ಬಿ ಮೊಹ್ಸಿನ್ 8 (11ಎ, 4X2)
ಜುರೇಲ್ ಸಿ ರಿಷಭ್ ಬಿ ಶಮಿ 0 (1ಎ)
ಪರಾಗ್ ಸಿ ಪೂರನ್ ಬಿ ಪ್ರಿನ್ಸ್ 20 (19ಎ, 4X2, 6X1)
ಹೆಟ್ಮೆಯರ್ ಸಿ ಪ್ರಿನ್ಸ್ ಬಿ ಮೊಹ್ಸಿನ್ 22 (18ಎ, 4X2, 6X1)
ರವೀಂದ್ರ ಜಡೇಜ ಔಟಾಗದೇ 43 (29ಎ, 4X2, 6X1)
ಫೆರಿರಾ ಸಿ ಮೊಹ್ಸಿನ್ ಬಿ ಪ್ರಿನ್ಸ್ 20 (19ಎ, 4X2)
ಶುಭಂ ದುಬೆ ಔಟಾಗದೇ 19 (11ಎ, 4X3)
ಇತರೆ: 5 (ಲೆಗ್‌ಬೈ 1, ವೈಡ್ 4)
ವಿಕೆಟ್ ಪತನ: 1–32 (ಯಶಸ್ವಿ ಜೈಸ್ವಾಲ್;2.5), 2–32 (ಧ್ರುವ ಜುರೇಲ್; 2.6), 3–32 (ವೈಭವ್ ಸೂರ್ಯವಂಶಿ: 3.6), 4–62 (ರಿಯಾನ್ ಪರಾಗ್; 8.6), 5–77 (ಶಿಮ್ರಾನ್ ಹೆಟ್ಮೆಯರ್; 10.2), 6–110 (ಡೊನೊವನ್ ಫೆರೀರಾ; 15.5)
ಬೌಲಿಂಗ್: ಮೊಹಮ್ಮದ್ ಶಮಿ 4–0–30–2, ಪ್ರಿನ್ಸ್ ಯಾದವ್ 4–0–29–2, ಮೊಹ್ಸಿನ್ ಖಾನ್ 4–1–17–2, ಮಯಂಕ್ ಯಾದವ್ 4–0–56–0, ದಿಗ್ವೇಶ್ ಸಿಂಗ್ ರಾಠಿ 4–0–26–0.

ಲಖನೌ ಸೂಪರ್ ಜೈಂಟ್ಸ್: 119 (18 ಓವರ್‌ಗಳಲ್ಲಿ)
ಮಾರ್ಷ್ ಸಿ ಪರಾಗ್ ಬಿ ಬರ್ಗರ್ 55 (41ಎ, 4x6, 6x2)
ಬಡೋನಿ ರನೌಟ್ (ಸಬ್) ರವಿ ಸಿಂಗ್ 0 (1ಎ)
ಪಂತ್ ಸಿ ಜುರೇಲ್ ಬಿ ಬರ್ಗರ್ 0 (3ಎ)
ಮರ್ಕರಂ ಸಿ ಜುರೇಲ್ ಬಿ ಆರ್ಚರ್ 0 (6ಎ)
ಪೂರನ್ ಸಿ ಫೆರಿರಾ ಬಿ ಜಡೇಜ 22 (25ಎ, 4x3)
ಹಿಮ್ಮತ್ ಬಿ ಬಿಷ್ಣೋಯಿ 15 (15ಎ)
ಮುಕುಲ್ ಸಿ ಪರಾಗ್ ಬಿ ಬ್ರಿಜೇಶ್ 7 (3ಎ, 6x1)
ಶಮಿ ಬಿ ಬ್ರಿಜೇಶ್ 6 (4ಎ, 6x1)
ಮಯಂಕ್ ಸಿ ಜುರೇಲ್ ಬಿ ಆರ್ಚರ್ 5 (5ಎ, 4x1)
ದಿಗ್ವೇಶ್ ರಾಠಿ ಔಟಾಗದೇ 2 (2ಎ)
ಮೊಹ್ಸಿನ್ ಬಿ ಆರ್ಚರ್ 0 (3ಎ)
ಇತರೆ: 7 (ಲೆಗ್‌ಬೈ 2, ವೈಡ್ 5)
ವಿಕೆಟ್ ಪತನ: 1–9 (ಆಯುಷ್ ಬಡೋನಿ; 0.6), 2–10 (ರಿಷಭ್ ಪಂತ್; 1.4), 3–11 (ಏಡನ್ ಮರ್ಕರಂ; 2.5), 4–54 (ನಿಕೊಲಸ್ ಪೂರನ್; 9.4), 5–91 (ಹಿಮ್ಮತ್ ಸಿಂಗ್; 14.3), 6–105 (ಮಿಚೆಲ್ ಮಾರ್ಷ್; 15.3), 7–111 (ಮುಕುಲ್ ಚೌಧರಿ; 16.1), 8–113 (ಮೊಹಮ್ಮದ್ ಶಮಿ; 16.3), 9–119 (ಮಯಂಕ್ ಯಾದವ್; 17.3), 10–119 (ಮೊಹ್ಸಿನ್ ಖಾನ್; 17.6)
ಬೌಲಿಂಗ್: ಜೋಫ್ರಾ ಆರ್ಚರ್ 4–1–20–3, ನಾಂಡ್ರೆ ಬರ್ಗರ್ 4–0–27–2, ಬ್ರಿಜೇಶ್ ಶರ್ಮಾ 3–0–18–2, ರವೀಂದ್ರ ಜಡೇಜ 4–0–29–1, ರವಿ ಬಿಷ್ಣೋಯಿ 3–0–23–1.
ಪಂದ್ಯದ ಆಟಗಾರ: ರವೀಂದ್ರ ಜಡೇಜ.

ಧೋನಿ, ರೋಹಿತ್ ಶರ್ಮಾ ಪುನರಾಗಮನದ ಸಾಧ್ಯತೆ

ಸ್ಥಿರ ಪ್ರದರ್ಶನದತ್ತ ತಂಡಗಳ ಚಿತ್ತ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಐಪಿಎಲ್‌ನಲ್ಲಿ ತಲಾ ಐದು ಬಾರಿ ಚಾಂಪಿಯನ್ ಆಗಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಪರದಾಡುತ್ತಿರುವ ಈ ಎರಡು ತಂಡಗಳು ಗುರುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಭಾರತದ ಕ್ರಿಕೆಟ್ ದಿಗ್ಗಜರಾದ ರೋಹಿತ್ ಶರ್ಮಾ ಮತ್ತು ಎಂ.ಎಸ್.ಧೋನಿ ಅವರ ಮರಳುವಿಕೆಗೆ ಈ ಪಂದ್ಯ ವೇದಿಕೆಯಾಗುವ ಸಾಧ್ಯತೆಯಿದೆ. ಮಂಡಿಯ ಸ್ನಾಯುರಜ್ಜು ನೋವಿನಿಂದ ರೋಹಿತ್ ಮತ್ತು ಮೀನಖಂಡದ ನೋವಿನಿಂದ ಧೋನಿ ಚೇತರಿಸಿಕೊಂಡಿದ್ದಾರೆ. ಅವರ ಪುನರಾಗಮನಕ್ಕೆ ಕ್ರಿಕೆಟ್ ಪ್ರೇಮಿಗಳು ಕಾತರರಾಗಿದ್ದಾರೆ.

ಮಂಗಳವಾರ ಕೀಪಿಂಗ್ ಮತ್ತು ಬ್ಯಾಟಿಂಗ್ ಅಭ್ಯಾಸ ನಡೆಸಿದ್ದ ಧೋನಿ ಬುಧವಾರ ನೆಟ್ಸ್ ವೇಳೆ ಸುಮಾರು ಒಂದು ಗಂಟೆ ಥ್ರೊಡೌನ್ ಪರಿಣತರ ಜೊತೆಗೆ ವೇಗದ ಬೌಲರ್‌ಗಳನ್ನು ಎದುರಿಸಿದರು. ಅಷ್ಟೇ ಅಲ್ಲ, ಎಐ ಆಧಾರಿತ ರೊಬಾಟಿಕ್ ಶ್ವಾನದ (ಚಂಪಕ್) ಜೊತೆ ಕೆಲಹೊತ್ತು ಖುಷಿಯಿಂದ ಕಳೆದರು. ಧೋನಿ ಈ ಐಪಿಎಲ್ ಋತುವಿನಲ್ಲಿ ಒಂದೂ ಪಂದ್ಯ ಆಡಿಲ್ಲ.

ಇದಕ್ಕೆ ಮೊದಲು ಕುಟುಂಬ ಸಹಿತ ವಾಂಖೆಡೆಗೆ ಬಂದಿದ್ದ ರೋಹಿತ್ ಅವರು ಹೊನಲು ಬೆಳಕಿನಡಿ ಅಭ್ಯಾಸ ನಡೆಸಿದರು. ಆದರೆ ಪೂರ್ಣ ಫಿಟ್ ಆದಂತೆ ಕಾಣಲಿಲ್ಲ. ಅವರು ಆಡುವ ಬಗ್ಗೆ ಗುರುವಾರ ಟಾಸ್ ವೇಳೆಗೆ ನಿರ್ಧರಿಸುವರು ಎಂದು ತಂಡ ತಿಳಿಸಿದೆ.

ಸಿಎಸ್‌ಕೆ ತಂಡ ಸಂಯೋಜನೆ ಕಂಡುಕೊಳ್ಳುವ ಹಂತದಲ್ಲಿರುವಾಗ ಬ್ಯಾಟರ್ ಆಯುಷ್ ಮ್ಹಾತ್ರೆ ಗಾಯಾಳಾಗಿ ಹೊರಬಿದ್ದಿದ್ದಾರೆ. ಅವರ ಸ್ಥಾನಕ್ಕೆ ಗುಜರಾತ್‌ನ ಕೀಪರ್–ಬ್ಯಾಟರ್ ಉರ್ವಿಲ್ ಪಟೇಲ್‌ಗೆ ಅವಕಾಶ ಸಿಗಬಹುದು.

ಸನ್‌ರೈಸರ್ಸ್ ವಿರುದ್ಧ ಒಂದು ಹಂತದಲ್ಲಿ ಚೆನ್ನೈ ಮೇಲುಗೈ ಸಾಧಿಸಿತ್ತು. 90 ಎಸೆತಗಳಲ್ಲಿ 130 ರನ್ ಗಳಿಸಬೇಕಾಗಿತ್ತು. ಎಂಟು ವಿಕೆಟ್‌ಗಳೂ ಉಳಿದಿದ್ದವು. ಆದರೆ ಮಧ್ಯಮ ಕ್ರಮಾಂಕ ಕುಸಿದು ಪಂದ್ಯ ತಿರುವು ಪಡೆಯಿತು.

ಸರ್ಫರಾಜ್ ಖಾನ್ ಅವರು 147 ರನ್‌ಗಳೊಂದಿಗೆ ಚೆನ್ನೈ ಪರ ಸ್ಥಿರ ಆಟವಾಡಿದ್ದಾರೆ. ಆದರೆ ಅವರು ಉತ್ತಮ ಆರಂಭದ ಲಾಭ ಪಡೆಯುತ್ತಿಲ್ಲ. ನಾಯಕ ಋತುರಾಜ್ ಗಾಯಕವಾಡ್ ಸಹ ನಿರಾಸೆ ಮೂಡಿಸಿದ್ದಾರೆ. ಅವರು ಬರೇ 82 ರನ್ ಗಳಿಸಿದ್ದಾರೆ. ಸಂಜು ಸ್ಯಾಮ್ಸನ್ (192 ರನ್) ಎರಡು ಪಂದ್ಯಗಳಲ್ಲಷ್ಟೇ ಮಿಂಚಿದ್ದಾರೆ. ಕಳೆದ ತಿಂಗಳು ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಸ್ಮರಣೀಯ ಆಟವಾಡಿದ ತಾಣಕ್ಕೆ ಅವರು ಹಿಂತಿರುಗುತ್ತಿದ್ದಾರೆ.

ಮುಂಬೈ ಮತ್ತು ಚೆನ್ನೈ ತಂಡಗಳು ತಲಾ ನಾಲ್ಕು ಪಾಯಿಂಟ್ಸ್ ಗಳಿಸಿವೆ. ನೆಟ್ ರನ್ ರೇಟ್ ಆಧಾರದಲ್ಲಿ ಮುಂಬೈ (0.067) ಏಳನೇ ಮತ್ತು ಚೆನ್ನೈ ಎಂಟನೇ (–0.780) ಸ್ಥಾನದಲ್ಲಿವೆ.

ಅಹಮದಾಬಾದಿನಲ್ಲಿ ತಿಲಕ್ ವರ್ಮಾ ಅವರ ಅಮೋಘ ಆಟದಿಂದ ಹಾರ್ದಿಕ್ ಪಾಂಡ್ಯ ಬಳಗವು ಸತತ ನಾಲ್ಕು ಸೋಲಿನ ಸರಪಣಿ ಕಡಿದಿತ್ತು. ಅವರ ಅಜೇಯ ಶತಕ ತಂಡಕ್ಕೆ ಅಗತ್ಯವಿದ್ದ ಜೀವಂತಿಕೆ ತುಂಬಿತು. ಹೀಗಾಗಿ ತಂಡದಲ್ಲಿ ಆತ್ಮವಿಶ್ವಾಸ ಮೂಡಿದಂತೆ ಕಾಣುತ್ತಿದೆ.

ಆದರೆ ಈ ತಂಡಕ್ಕೆ ಕಳವಳದ ವಿಷಯವೆಂದರೆ ಭಾರತ ತಂಡದ ಟಿ20 ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ಅವರ ವೈಫಲ್ಯ. ಪಾಂಡ್ಯ ಆಟದಲ್ಲಿ ಮೊದಲಿನ ಆರ್ಭಟ ಕಾಣುತ್ತಿಲ್ಲ. ನಮನ್ ಧೀರ್ ಸ್ಥಿರತೆ ಒದಗಿಸುವ ಕೆಲಸ ಮಾಡಿದ್ದಾರೆ.

ಬೂಮ್ರಾ ಈ ಹಿಂದಿನ ಪಂದ್ಯದಲ್ಲಿ ವಿಕೆಟ್ ಪಡೆಯುವಲ್ಲಿ ಸಫಲರಾಗಿದ್ದಾರೆ. ಆದರೆ ಅಶ್ವಿನಿ ಕುಮಾರ್ ಅವರ ನಾಲ್ಕು ವಿಕೆಟ್‌ಗಳ ಸಾಧನೆ ಗಮನ ಸೆಳೆದಿತ್ತು. ಟ್ರೆಂಟ್ ಬೌಲ್ಟ್, ದೀಪಕ್ ಚಾಹರ್ ಅಥವಾ ಹಾರ್ದಿಕ್ ಪಾಂಡ್ಯ ನಿರೀಕ್ಷಿತ ಯಶಸ್ಸು ಕಾಣುತ್ತಿಲ್ಲ. ಗುರುವಾರದ ಪಂದ್ಯಕ್ಕೆ ಮುಂಚಿತವಾಗಿ, ಇಂಗ್ಲೆಂಡ್‌ನ ಆಲ್‌ರೌಂಡರ್ ವಿಲ್ ಜಾಕ್ಸ್ ಮುಂಬೈ ಪಾಳಯ ಸೇರಿಕೊಂಡಿದ್ದಾರೆ. ಅವರು ವಾಂಖೆಡೆಯಲ್ಲಿ ಅಭ್ಯಾಸದಲ್ಲೂ ಕಾಣಿಸಿಕೊಂಡರು.

ಧೋನಿ ಅಭ್ಯಾಸ

ಬಲಾಬಲ ಒಟ್ಟು ಪಂದ್ಯ 39
ಮುಂಬೈ ಜಯ 21
ಚೆನ್ನೈ ಗೆಲುವು 18

ಇಂದಿನ ಪಂದ್ಯ
ಮುಂಬೈ ಇಂಡಿಯನ್ಸ್ V/s ಚೆನ್ನೈ ಸೂಪರ್ ಕಿಂಗ್ಸ್
ತಾಣ: ಮುಂಬೈ, ಆರಂಭ: ರಾತ್ರಿ 7.30
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಮುಂಬೈ ಇಂಡಿಯನ್ಸ್ ತಂಡದ ಬ್ಯಾಟರ್ ರೋಹಿತ್ ಶರ್ಮಾ ಪಿಟಿಐ ಚಿತ್ರಗಳು

‘ಟಾಪ್ಸ್’ ಯೋಜನೆಗೆ ಪ್ರೀತಿ, ಅರುಂಧತಿ

ನವದೆಹಲಿ (ಪಿಟಿಐ): ಭಾರತದ ಬಾಕ್ಸಿಂಗ್‌ಪಟುಗಳಾದ ಪ್ರೀತಿ ಪವಾರ್, ಪ್ರಿಯಾ, ಅರುಂಧತಿ ಚೌಧರಿ ಮತ್ತು ಸಚಿನ್ ಅವರನ್ನು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಗೆ (ಟಾಪ್ಸ್) ಸೇರ್ಪಡೆಗೊಳಿಸಲಾಗಿದೆ. ಈ ನಾಲ್ಕು ಮಂದಿ ಇತ್ತೀಚೆಗೆ ಏಷ್ಯನ್ ಬಾಕ್ಸಿಂಗ್ ಎಲೀಟ್ ಚಾಂಪಿಯನ್‌ಷಿಪ್‌ನಲ್ಲಿ ಸ್ಫೂರ್ತಿಯುತ ಪ್ರದರ್ಶನ ನೀಡಿದ್ದರು.

ಮಿಷನ್ ಒಲಿಂಪಿಕ್ ಸೆಲ್‌ನ (ಎಂಒಸಿ) 172ನೇ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು. ಮೂವರು ಬಾಕ್ಸಿಂಗ್ ಪಟುಗಳನ್ನು ‘ಟಾಪ್ಸ್ ಡೆವಲಪ್‌ಮೆಂಟ್’ ಗುಂಪಿಗೆ ಸೇರ್ಪಡೆ ಮಾಡಲಾಗಿದೆ.

ಪ್ರೀತಿ (54 ಕೆ.ಜಿ ಕ್ಲಾಸ್), ಪ್ರಿಯಾ (60 ಕೆ.ಜಿ) ಮತ್ತು ಅರುಂಧತಿ (70 ಕೆ.ಜಿ.) ಅವರು ಮಂಗೋಲಿಯಾದ ಉಲಾನ್‌ಬತಾರ್‌ನಲ್ಲಿ ಈ ತಿಂಗಳ ಆರಂಭದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡಿದ್ದರು. ಸಚಿನ್ ಪುರುಷರ 60 ಕೆ.ಜಿ. ಕ್ಲಾಸ್‌ನಲ್ಲಿ ಬೆಳ್ಳಿ ಜಯಿಸಿದ್ದರು.

ಕ್ರೀಡಾಪಟುಗಳ ಇತ್ತೀಚಿನ ಫಲಿತಾಂಶಗಳ ಮೌಲ್ಯಮಾಪನ, ವಿಶ್ವ ರ‍್ಯಾಂಕಿಂಗ್ ಮತ್ತು ಅವರು ಸಾಧಿಸಿರುವ ಪ್ರಗತಿಯ ಆಧಾರದಲ್ಲಿ ಟಾಪ್ಸ್ ಯೋಜನೆಯಡಿ ಬರುವ ಕ್ರೀಡಾಪಟುಗಳ ಪರಾಮರ್ಶೆಯನ್ನು ಎಂಒಸಿ ಮಾಡುತ್ತದೆ.

ಹೊಸ ಕಲಿಕೆಯತ್ತ ಅಯ್ಯರ್ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತ ನೈಟ್ ರೈಡರ್ಸ್‌ನಲ್ಲಿದ್ದ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಈ ಸಲ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೇರ್ಪಡೆಗೊಂಡಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ‘ಹಾಲಿ ಚಾಂಪಿಯನ್’ ಆಗಿರುವ ಬೆಂಗಳೂರು ತಂಡವು ಲೀಗ್ ಹಂತದಲ್ಲಿ ಇದುವರೆಗೂ ಉತ್ತಮ ಸಾಧನೆ ಮಾಡುತ್ತ ಮುನ್ನುಗ್ಗುತ್ತಿದೆ.

ಆದರೆ ವೆಂಕಟೇಶ್ ಅವರಿಗೆ ಕೇವಲ ಒಂದು ಪಂದ್ಯದಲ್ಲಿ ಮಾತ್ರ ಆಡುವ ಅವಕಾಶ ಸಿಕ್ಕಿದೆ. ಉಳಿದಂತೆ ಅವರು ಡಗ್‌ಔಟ್‌ನಲ್ಲಿಯೇ ಹೆಚ್ಚು ಕಾಲ ಕಳೆದಿದ್ದಾರೆ. ಆದರೆ, ಈ ಅವಕಾಶವನ್ನು ಅವರು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ತಮ್ಮ ಕೌಶಲಗಳನ್ನು ಮತ್ತಷ್ಟು, ಮಗದಷ್ಟು ಉತ್ತಮಗೊಳಿಸಿಕೊಳ್ಳುತ್ತಿದ್ದಾರೆ. ಆರ್‌ಸಿಬಿಯ ನೆಟ್ಸ್ ಅಭ್ಯಾಸದ ಸಂದರ್ಭದಲ್ಲಿ ಅವರು ಎಲ್ಲರಿಗಿಂತ ಮೊದಲೇ ಹಾಜರಿರುತ್ತಾರೆ. ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಅಭ್ಯಾಸ ಮಾಡುತ್ತಾರೆ. ಜಿಮ್ನಾಷಿಯಂನಲ್ಲಿಯೂ ಬೆವರು ಹರಿಸುತ್ತಾರೆ.

‘ಡಗ್‌ಔಟ್‌ನಲ್ಲಿ ಹೆಚ್ಚು ಹೊತ್ತು ಸುಮ್ಮನೇ ಕಳೆಯುವುದು ಕಷ್ಟವೆನಿಸುತ್ತದೆ. ಆದರೆ ತಂಡದಲ್ಲಿ ಪ್ರಸಕ್ತ ಇರುವ ಸಂಯೋಜನೆಯು ಉತ್ತಮವಾಗಿದೆ. ಎಲ್ಲರೂ ಉತ್ತಮವಾಗಿ ಆಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವೈಯಕ್ತಿಕವಾಗಿ ಯೋಚನೆ ಮಾಡುವುದು ತರವಲ್ಲ. ತಂಡವು ಗೆಲ್ಲಬೇಕು. ಮುಂದೊಂದು ದಿನ ನಾನೆಷ್ಟು ರನ್ ಗಳಿಸಿದೆ, ವಿಕೆಟ್ ಪಡೆದೆ ಎಂಬುದನ್ನು ಹೇಳಿಕೊಳ್ಳುವುದಕ್ಕಿಂತ ನಾನಿದ್ದ ತಂಡವು ಎಷ್ಟು ಬಾರಿ ಟ್ರೋಫಿ ಜಯಿಸಿತು. ಏನೇನು ಸಾಧನೆ ಮಾಡಿತು ಎಂದು ಹೇಳಿಕೊಳ್ಳುವುದು ಹೆಚ್ಚು ಹೆಮ್ಮೆಯ ವಿಷಯ’ ಎಂದು 31 ವರ್ಷದ ವೆಂಕಟೇಶ್ ಅಯ್ಯರ್ ಹೇಳಿದರು.

ಬುಧವಾರ ಆರ್‌ಸಿಬಿಯು ಆಯೋಜಿಸಿದ್ದ ‘ರೌಂಡ್ ಟೇಬಲ್’ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.

‘ನನ್ನ ತವರು ಮಧ್ಯಪ್ರದೇಶ ರಾಜ್ಯ ತಂಡಕ್ಕೆ ರಣಜಿ ಟ್ರೋಫಿ ಜಯಿಸಿಕೊಡಬೇಕು ಎಂಬ ಗುರಿ ಇದೆ. ಅದಕ್ಕಾಗಿ ಕೆಂಪು ಚೆಂಡಿನ ಬೌಲಿಂಗ್‌ನಲ್ಲಿ ಹೆಚ್ಚು ಪರಿಣತಿ ಸಾಧಿಸುವತ್ತ ನಾನು ಚಿತ್ತ ನೆಟ್ಟಿರುವೆ. ಟೆಸ್ಟ್ ಕ್ರಿಕೆಟ್ ದಿಗ್ಗಜ ಜೋಷ್ ಹ್ಯಾಜಲ್‌ವುಡ್ ಅವರು ನಮ್ಮ ತಂಡದಲ್ಲಿದ್ದಾರೆ. ಅವರೊಂದಿಗೆ ಬೌಲಿಂಗ್ ಕುರಿತು ಹೆಚ್ಚು ಮಾತನಾಡುತ್ತೇನೆ. ಮುಂದಿನ ಋತುವಿನಲ್ಲಿ ನಾನು ದೇಶಿ ಕ್ರಿಕೆಟ್ ಆಡಲು ಹೋದಾಗ ಅವರ ಸಲಹೆಗಳು ಉಪಯುಕ್ತವಾಗುತ್ತವೆ’ ಎಂದು ಇಂದೋರಿನ ವೆಂಕಟೇಶ್ ಹೇಳಿದರು.

‘ವಿರಾಟ್ ಕೊಹ್ಲಿ ಅವರು ಬಹಳ ಸರಳ ಸ್ವಭಾವದ ವ್ಯಕ್ತಿ. ಕ್ರಿಕೆಟ್ ಮತ್ತು ವೈಯಕ್ತಿಕ ಜೀವನದಲ್ಲಿ ಅವರು ಎಲ್ಲವನ್ನೂ ಸಾಧಿಸಿರುವ ದಿಗ್ಗಜ. ಆದರೆ, ತಂಡದಲ್ಲಿ ಹಿರಿ–ಕಿರಿಯರೆಲ್ಲರೊಂದಿಗೂ ಸಮಭಾವದಿಂದ ಇರುತ್ತಾರೆ. ಅವರು ಯಾವತ್ತೂ ಕ್ರೀಡಾಂಗಣದಲ್ಲಿ ಜಾಗಿಂಗ್ ಮಾಡುವುದಿಲ್ಲ. ಸ್ಪ್ರಿಂಟಿಂಗ್ ಮಾಡುತ್ತಾರೆ. ಅವರನ್ನು ನೋಡಿ ಉಳಿದವರೂ ಫಿಟ್‌ನೆಸ್‌ನತ್ತ ಹೆಚ್ಚು ಗಮನ ಕೊಡುತ್ತಾರೆ. ತಂಡದಲ್ಲಿ ಯಾರೇ ವಿಕೆಟ್ ಪಡೆಯಲಿ ಅಥವಾ ಉತ್ತಮ ಸಾಧನೆ ಮಾಡಿದರೂ ಮೊದಲಿಗೆ ಸಂಭ್ರಮಿಸುವುದು ವಿರಾಟ್ ಅವರೇ. ಅದೊಂದು ಅಪರೂಪದ ಗುಣ. ಅವರೊಂದಿಗೆ ಡ್ರೆಸಿಂಗ್ ಕೋಣೆ ಹಂಚಿಕೊಂಡಿರುವುದು ನನ್ನ ಸೌಭಾಗ್ಯ’ ಎಂದು ವೆಂಕಟೇಶ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಇವತ್ತು ಟಿ20 ಕ್ರಿಕೆಟ್ ಮಾದರಿಯು ಅಗಾಧವಾಗಿ ಬೆಳೆದಿದೆ. ರೂಪಾಂತರಗೊಳ್ಳುತ್ತಲೂ ಇದೆ. ಆದರೆ ಈಗ ಕ್ರಿಕೆಟಿಗ ಬರೀ ಬ್ಯಾಟಿಂಗ್ ಮತ್ತು ಬೌಲಿಂಗ್ ಅಷ್ಟೇ ಕಲಿತರೆ ಸಾಲದು. ಒಬ್ಬ ಪರಿಪೂರ್ಣ ಅಥ್ಲೀಟ್ ಆಗಿರುವುದು ಮೊದಲ ಅರ್ಹತೆಯಾಗಿದೆ’ ಎಂದು ಅಭಿಪ್ರಾಯಪಟ್ಟರು.

‘ರಜತ್ (ಪಾಟೀದಾರ್) ಮತ್ತು ನಾನು ಹಳೆಯ ಸ್ನೇಹಿತರು. ದೇಶಿ ಕ್ರಿಕೆಟ್‌ನಲ್ಲಿ ಒಂದೇ ರಾಜ್ಯವನ್ನು ಪ್ರತಿನಿಧಿಸುತ್ತೇವೆ. ಸ್ವಭಾವದಲ್ಲಿ ಯಾವುದೆ ಬದಲಾವಣೆಯೂ ಇಲ್ಲ. ಅದೇ ಆಪ್ತತೆ, ಸ್ನೇಹ ಎಲ್ಲವೂ ಇದೆ. ನಾಯಕನಾಗಿ ಪಕ್ವಗೊಳ್ಳುತ್ತಿದ್ದಾರೆ. ಉತ್ತಮ ನಿರ್ಧಾರ ಕೈಗೊಳ್ಳುತ್ತಾರೆ. ದುಬಾರಿ ವಾಚು, ಸನ್‌ಗ್ಲಾಸ್ ಮತ್ತು ಬಟ್ಟೆಗಳನ್ನು ಧರಿಸುತ್ತಿದ್ದಾರೆ. ಜೀವನಶೈಲಿ ಉತ್ತಮವಾಗಿರುವುದು ಸಂತಸದ ವಿಷಯ’ ಎಂದು ವೆಂಕಟೇಶ್ ನಕ್ಕರು.

ಇದುವರೆಗೆ ಆರು ಪಂದ್ಯಗಳನ್ನು ಆಡಿರುವ ಆರ್‌ಸಿಬಿ ಒಟ್ಟು 8 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಗುಜರಾತ್ ಟೈಟನ್ಸ್ ಎದುರು ಪಂದ್ಯ ಆಡಲಿದೆ.

ವೆಂಕಟೇಶ್ ಅಯ್ಯರ್

ಟೆನ್ ಕೆ ಓಟ: ಮಾರ್ಗ ದಿಕ್ಸೂಚಿ ಬಿಡುಗಡೆ

ಬೆಂಗಳೂರು: ನಗರದಲ್ಲಿ ಇದೇ ಭಾನುವಾರ (ಏ.26) ನಡೆಯಲಿರುವ 18ನೇ ಆವೃತ್ತಿಯ ಟಿಸಿಎಸ್ ಟೆನ್ ಕೆ ಓಟದ ಮಾರ್ಗ ದಿಕ್ಸೂಚಿಯನ್ನು ಬುಧವಾರ ಬಿಡುಗಡೆ ಮಾಡಲಾಯಿತು.

36 ಸಾವಿರಕ್ಕೂ ಅಧಿಕ ಅಥ್ಲೀಟ್‌ಗಳು ಪಾಲ್ಗೊಳ್ಳುತ್ತಿರುವ ಈ ಬಾರಿಯ ಕೂಟದ ಮಾರ್ಗ ದಿಕ್ಸೂಚಿಯಲ್ಲಿ ಕೆಲ ಬದಲಾವಣೆಗಳನ್ನು ಮಾಡಲಾಗಿದೆ.

ಕಬ್ಬನ್ ರಸ್ತೆಯಲ್ಲಿ ಮುಂಜಾನೆ 5.30ಕ್ಕೆ ಎಲೀಟ್ ಮಹಿಳೆಯರ 10 ಕಿ.ಮೀ ಓಟದೊಂದಿಗೆ ಸ್ಪರ್ಧೆಗಳಿಗೆ ಚಾಲನೆ ಸಿಗಲಿದೆ. 10ಕೆ ಓಟವು ಕಬ್ಬನ್ ರಸ್ತೆಯಿಂದ ಆರಂಭವಾಗಿ ಹಲಸೂರು ಕೆರೆಯನ್ನು ಸುತ್ತು ಹಾಕಿ, ಅಲ್ಲಿಂದ ಡಿಕೆನ್‌ಸನ್ ರಸ್ತೆ, ಕಾಮರಾಜ ರಸ್ತೆಯ ಮೂಲಕ ಸಾಗಿ ಪುನಃ ಕಬ್ಬನ್ ರಸ್ತೆಗೆ ಸೇರಲಿದೆ. ಅಲ್ಲಿಂದ ವಿಧಾನಸೌಧದ ಮುಂಭಾಗದಲ್ಲಿ ‘ಯು ಟರ್ನ್’ ಪಡೆದು, ಕ್ವೀನ್ಸ್ ರಸ್ತೆಯನ್ನು ಸುತ್ತುಹಾಕಿ ಮಾಣೆಕ್‌ಶಾ ಪರೇಡ್ ಮೈದಾನದ ಮುಂಭಾಗದಲ್ಲಿ ಸಂಪನ್ನಗೊಳ್ಳಲಿದೆ.

‘ಕಳೆದ ವರ್ಷ ಹಲಸೂರು ಕೆರೆಯ ಬಳಿ ಹಾಗೂ ಕೆ.ಆರ್.ವೃತ್ತದಲ್ಲಿ ‘ಯು ಟರ್ನ್’ ಪಡೆಯಬೇಕಿತ್ತು. ಆದರೆ, ಇಕ್ಕಟ್ಟಾದ ಜಾಗದಲ್ಲಿ ‘ಯು ಟರ್ನ್’ ಪಡೆಯಲು ಅಥ್ಲೀಟ್‌ಗಳಿಗೆ ಹೆಚ್ಚಿನ ಸಮಯ ಬೇಕಾಗುತ್ತಿತ್ತು. ಹೀಗಾಗಿ, ಈ ಬಾರಿ ಮಾರ್ಗ ದಿಕ್ಸೂಚಿಯಲ್ಲಿ ಬದಲಾವಣೆ ಮಾಡಲಾಗಿದೆ’ ಎಂದು ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ತಿಳಿಸಿದರು.

‘10ಕೆ ಓಟಕ್ಕೆ 22,189 ಸ್ಪರ್ಧಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ಸಾಮಾಜಿಕ ಒಳಿತಿಗಾಗಿ ₹5 ಕೋಟಿ ದೇಣಿಗೆ ಸಂಗ್ರಹಿಸಲಾಗಿದೆ’ ಎಂದರು.

ಏ.26ರಂದು ಮುಂಜಾನೆ 3.20ರಿಂದಲೇ ಮೆಟ್ರೊ ರೈಲು ಸೇವೆಗಳು ಆರಂಭವಾಗಲಿವೆ ಎಂದೂ ಅವರು ಮಾಹಿತಿ ನೀಡಿದರು.

ವಿಎಫ್‌ಐ ಮಾನ್ಯತೆ ಹಿಂಪಡೆದ ಎಫ್‌ಐವಿಬಿ



ನವದೆಹಲಿ (ಪಿಟಿಐ): ‘ಕಾನೂನು ಮತ್ತು ಆಡಳಿತಾತ್ಮಕ ಅಗತ್ಯಗಳ’ ಉಲ್ಲಂಘನೆ ಮಾಡಲಾಗಿದೆ ಎಂಬ ಕಾರಣ ನೀಡಿ ಭಾರತ ವಾಲಿಬಾಲ್ ಫೆಡರೇಷನ್‌ಗೆ (ವಿಎಫ್‌ಐ) ನೀಡಿದ್ದ ತಾತ್ಕಾಲಿಕ ಮಾನ್ಯತೆಯನ್ನು ವಿಶ್ವ ವಾಲಿಬಾಲ್ ಫೆಡರೇಷನ್ (ಎಫ್‌ಐವಿಬಿ) ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿದೆ.

ಕಳಪೆ, ಅವೈಜ್ಞಾನಿಕ ಸೌಕರ್ಯಗಳು ಮತ್ತು ಆಯ್ಕೆಯಲ್ಲಿ ರಾಜಕೀಯ ನಡೆದಿದೆ ಎಂದು ಆರೋಪಿಸಿ ಭಾರತ ತಂಡದ ಇಬ್ಬರು ಸೀನಿಯರ್ ಆಟಗಾರರು ಅಹಮದಾಬಾದ್‌ನಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ವಾಲಿಬಾಲ್ ಶಿಬಿರ ತೊರೆದ ಕೆಲವೇ ದಿನಗಳಲ್ಲೇ ಈ ನಿರ್ಧಾರ ಹೊರಬಿದ್ದಿದೆ.

ಭಾರತ ಒಲಿಂಪಿಕ್ ಸಮಿತಿಯ (ಐಒಎ) ಆಡಳಿತ ಸಮಿತಿ ಸದಸ್ಯ ರೋಹಿತ್ ರಾಜಪಾಲ್ ಮತ್ತು ಸಿಇಒ ರಘುರಾಮ್ ಅಯ್ಯರ್ ಅವರನ್ನು ಒಳಗೊಂಡ ಚಾಲನಾ ಸಮಿತಿಗೆ ದೇಶದ ವಾಲಿಬಾಲ್ ಚಟುವಟಿಕೆಗಳನ್ನು, ಆಟಗಾರರ ಹಿತಾಸಕ್ತಿ ರಕ್ಷಿಸುವ ಹೊಣೆಯನ್ನು ಎಫ್‌ಐವಿಬಿ ವಹಿಸಿದೆ. ಎಫ್‌ಐವಿಬಿ ಕ್ರೀಡಾ ನಿರ್ದೇಶಕ ಸ್ಟೀವ್ ಟ್ಯುಟನ್, ಕಾನೂನು ವ್ಯವಹಾರಗಳ ವಿಭಾಗದ ಮುಖ್ಯಸ್ಥ ಸ್ಟೀಫನ್ ಬಾಕ್ ಮತ್ತು ಹಿತೇಶ್ ಮಲ್ಹೋತ್ರಾ ಅವರೂ ಚಾಲನಾ ಸಮಿತಿಯಲ್ಲಿ ಇದ್ದಾರೆ.

ಭಾರತ ವಾಲಿಬಾಲ್ ಫೆಡರೇಷನ್‌ನ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ವಹಿಸಿದ್ದ ಚಾಲನಾ ಸಮಿತಿಗೆ ದೈನಂದಿನ ಚಟುವಟಿಕೆಗಳನ್ನು ನಡೆಸುವ ಅಧಿಕಾರ ನೀಡಲಾಗಿದೆ ಎಂದು ಅಯ್ಯರ್ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಎಫ್‌ಐವಿಬಿ ನಿಗದಿಗೊಳಿಸಿರುವ ಕಾನೂನು ಮತ್ತು ಆಡಳಿತಾತ್ಮಕ ಅಗತ್ಯಗಳನ್ನು, ಈವರೆಗೆ ಅಧಿಕಾರದಲ್ಲಿದ್ದ ವಿಎಫ್‌ಐನ ಹಂಗಾಮಿ ಸಮಿತಿ ಪೂರೈಸಲು ವಿಫಲವಾಗಿದೆ. ಹೀಗಾಗಿ ಈ ಹಿಂದೆ ನೀಡಿದ ತಾತ್ಕಾಲಿಕ ಮಾನ್ಯತೆಯನ್ನು ಹಿಂಪಡೆಯಲಾಗಿದೆ ಎಂದು ಎಫ್‌ಐವಿಬಿ ಹೇಳಿಕೆಯಲ್ಲಿ ತಿಳಿಸಿದೆ.

ಆದರೆ ದೇಶದ ವಾಲಿಬಾಲ್ ಚಟುವಟಿಕೆಗಳು ನಿರಾತಂಕವಾಗಿ ನಡೆಯಲು, ಈ ಹಿಂದೆಯಿದ್ದ ಚಾಲನಾ ಸಮಿತಿಗೆ ತಾತ್ಕಾಲಿಕವಾಗಿ ಆಡಳಿತಾತ್ಮಕ ಅಧಿಕಾರಗಳನ್ನು ನೀಡಲಾಗಿದೆ. ಚಾಲನಾ ಸಮಿತಿಯು ಎಫ್‌ಐವಿಬಿ ಮತ್ತು ಭಾರತ ಒಲಿಂಪಿಕ್ ಸಂಸ್ಥೆ ಪ್ರತಿನಿಧಿಗಳನ್ನು ಒಳಗೊಂಡಿದೆ.

ಆಟಗಾರರ ಹಿತರಕ್ಷಣೆ ತನ್ನ ಆದ್ಯತೆಯಾಗಿದೆ. ಈ ಪರಿವರ್ತನೆಯ ಅವಧಿಯಲ್ಲಿ ಸ್ಥಿರತೆ, ಸಮರ್ಥ ಆಡಳಿತ ನೀಡುವಂತೆ ಚಾಲನಾ ಸಮಿತಿಗೆ ಹೊಣೆ ನಿಗದಿಪಡಿಸಲಾಗಿದೆ ಎಂದು ಎಫ್‌ಐಬಿವಿ ತಿಳಿಸಿದೆ.

ಸೋರಿಕೆಯಾದ ಪತ್ರ: ವಿದೇಶಿ ಕೋಚ್‌ಗಳನ್ನು ಕೈಬಿಟ್ಟು ಅಸಮರ್ಥ ಕೋಚ್‌ಗಳನ್ನು ಶಿಬಿರದಲ್ಲಿ ನಿಯೋಜಿಸಲಾಗಿದೆ, ಕಳಪೆ, ಅವೈಜ್ಞಾನಿಕ ಸೌಕರ್ಯಗಳನ್ನು ನೀಡಲಾಗಿದೆ ಮತ್ತು ಆಯ್ಕೆಯಲ್ಲಿ ರಾಜಕೀಯ ನಡೆದಿದೆ ಎಂದು ದೂರಿ ‘ಲಿಬೆರೊ’ (ರಕ್ಷಣೆ ವಿಭಾಗ) ಆಟಗಾರ ಆನಂದ್ ಕೆ. ಮತ್ತು ‘ಮಿಡ್ಲ್ ಬ್ಲಾಕರ್’ ಜಾನ್ ಜೋಸೆಫ್ ಅವರು ಅಹಮದಾಬಾದಿನಲ್ಲಿ ನಡೆಯುತ್ತಿದ್ದ ಶಿಬಿರ ತೊರೆದಿದ್ದರು. ಅಲ್ಲಿನ ಭಾರತ ಕ್ರೀಡಾ ಪ್ರಾಧಿಕಾರದಲ್ಲಿ (ಸಾಯ್) ಉತ್ತಮ ವ್ಯವಸ್ಥೆ ಒದಗಿಸುವಂತೆ ಅವರು ಐಒಎಗೆ ಬರೆದ ಇ–ಮೇಲ್ ವಿಎಫ್‌ಐಗೆ ಸೋರಿಕೆಯಾಗಿತ್ತು.

ಆದರೆ ಇದನ್ನು ತಳ್ಳಿಹಾಕಿದ್ದ ವಿಎಫ್‌ಐ, ಇದು ‘ಆಟದಲ್ಲಿ ನಡೆದ ರಾಜಕೀಯ’ ಎಂದು ಹೇಳಿತ್ತು.

ಸಂಕ್ಷಿಪ್ತ ಸುದ್ದಿ

ಕಾಂಡಂಡ ತಂಡಕ್ಕೆ ಜಯ

ನಾಪೋಕ್ಲು (ಕೊಡಗು ಜಿಲ್ಲೆ): ಇಲ್ಲಿನ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಬುಧವಾರ ಕಾಂಡಂಡ 4–3ರಿಂದ ಮೂಕಳಮಾಡ ವಿರುದ್ಧ ರೋಚಕ ಗೆಲುವು ದಾಖಲಿಸಿತು.

ಮತ್ತೊಂದು ಪಂದ್ಯದಲ್ಲಿ ಬಿದ್ದಾಟಂಡ 5–3ರಿಂದ ನೆರವಂಡ ವಿರುದ್ಧ ಟೈ ಬ್ರೇಕರ್‌ನಲ್ಲಿ ಗೆಲುವು ಸಾಧಿಸಿತು. ಪಳಂಗಡ ತಂಡವು 3–0 ರಿಂದ ಮಾತಂಡ ವಿರುದ್ಧ; ಚೇನಂಡ 1–0ರಿಂದ ಕರವಂಡ ವಿರುದ್ಧ; ಕುಲ್ಲೇಟಿರ 3–0ರಿಂದ ಕರ್ತಮಾಡ ವಿರುದ್ಧ; ಬೋವ್ವೇರಿಯಂಡ 4-2ರಿಂದ ಕುಂಡ್ಯೋಳಂಡ ವಿರುದ್ಧ; ಮುರುವಂಡ 2–1ರಿಂದ ಅಮ್ಮಣಿಚಂಡ ವಿರುದ್ಧ ಜಯ ಗಳಿಸಿದವು.

ಸಣ್ಣುವಂಡ 4–2ರಿಂದ ಕುಪ್ಪಂಡ (ನಾಂಗಾಲ) ವಿರುದ್ಧ; ಮೇಚಿಯಂಡ 1–0ರಿಂದ ಅಪ್ಪನೆರವಂಡ ವಿರುದ್ಧ; ಪುಲ್ಲಂಗಡ 1–0ರಿಂದ ಚೌರಿರ (ಹೊದ್ದೂರು) ವಿರುದ್ಧ; ಕೂತಂಡ 3–0ರಿಂದ ಬಲಚಂಡ ವಿರುದ್ಧ ಗೆದ್ದವು.

ಸ್ಯಾಫ್ ಮಹಿಳಾ ಫುಟ್‌ಬಾಲ್ ಬಿ ಗುಂಪಿನಲ್ಲಿ ಭಾರತ

ನವದೆಹಲಿ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡವು ಗೋವಾದ ಮಡಗಾಂವ್‌ನಲ್ಲಿ ನಡೆಯಲಿರುವ ಸ್ಯಾಫ್ ಮಹಿಳಾ ಚಾಂಪಿಯನ್‌ಷಿಪ್‌ನಲ್ಲಿ ‘ಬಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ. ಬಾಂಗ್ಲಾದೇಶ ಮತ್ತು ಮಾಲ್ಡೀವ್ಸ್ ಇದೇ ಗುಂಪಿನಲ್ಲಿವೆ. ಈ ಚಾಂಪಿಯನ್‌ಷಿಪ್ ಮೇ 25 ರಿಂದ ಜೂನ್ 6ರವರೆಗೆ ನಡೆಯಲಿದೆ. ನೇಪಾಳ, ಶ್ರೀಲಂಕಾ ಮತ್ತು ಭೂತಾನ್ ‘ಎ’ ಗುಂಪಿನಲ್ಲಿವೆ.

ಎರಡು ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ಢಾಕಾದ ಸ್ಯಾಫ್ ಸೆಕ್ರೆಟರಿಯೇಟ್‌ನಲ್ಲಿ ಬುಧವಾರ ಡ್ರಾ ಸಮಾರಂಭ ನಡೆಯಿತು. ಪಾಕಿಸ್ತಾನ ಈ ಕೂಟಕ್ಕೆ ತಂಡವನ್ನು ಕಳುಹಿಸದಿರಲು ನಿರ್ಧರಿಸಿದೆ. ಭಾರತ ಈ ಹಿಂದೆ 2016ರಲ್ಲಿ ಎರಡನೇ ಬಾರಿ ಈ ಚಾಂಪಿಯನ್‌ಷಿಪ್‌ನ ಆತಿಥ್ಯ ವಹಿಸಿತ್ತು.

ನಾಲ್ಕರ ಘಟ್ಟಕ್ಕೆ ಗಂಧರ್ವ

ಬೆಂಗಳೂರು: ಕರ್ನಾಟಕದ ಗಂಧರ್ವ ಜಿ. ಅವರು ಇಲ್ಲಿ ನಡೆಯುತ್ತಿರುವ ಟಿಎನ್‌ಆರ್ ಸ್ಮರಣಾರ್ಥ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಬುಧವಾರ ಸೆಮಿಫೈನಲ್ ಪ್ರವೇಶಿಸಿದರು. ವಿಶಾಲ್ ವಿ., ಎಸ್.ಎಂ.ಆದಿತ್ಯ ಹಾಗೂ ದೀಪಕ್ ಎ. ಅವರೂ ತಮ್ಮ ತಮ್ಮ ಪಂದ್ಯಗಳಲ್ಲಿ ಗೆದ್ದು ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಅರ್ಹತಾ ಸುತ್ತು ಆಡಿ ಮುಖ್ಯ ಸುತ್ತಿಗೆ ಪ್ರವೇಶ ಪಡೆದಿದ್ದ ಗಂಧರ್ವ, ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿಯಲ್ಲಿ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ 7–5, 6–1ರಿಂದ ನೇರ ಸೆಟ್‌ಗಳಲ್ಲಿ ಸೋಮ ಸುಹಾಸ್ ವಿರುದ್ಧ ಗೆಲುವು ಸಾಧಿಸಿದರು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಶ್ರೀನಿಧಿ ಸಿ. ಅವರು 2–6, 6–1, 6–1ರಿಂದ ಮೇಘನಾ ಜಿ.ಡಿ. ವಿರುದ್ಧ ಗೆದ್ದು, ಸೆಮಿಫೈನಲ್ ಪ್ರವೇಶಿಸಿದರು. ಹೃದಯೇಶಿ ಪಿ., ಸೈಯೆಟ್ಟ್ ವಿ. ಹಾಗೂ ಸೋನಿಕಾ ಜೆ. ಅವರೂ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಸೆಮಿಗೆ ಯುನೈಟೆಡ್ ತಂಡ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಬೆಂಗಳೂರು ಯುನೈಟೆಡ್ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಬುಧವಾರ 3–1 ಗೋಲುಗಳಿಂದ ಎಚ್‌ಎಂಟಿ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ಈ ಗೆಲುವಿನೊಂದಿಗೆ ಯುನೈಟೆಡ್ ತಂಡವು ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು.

ಗುರುವಾರ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಮೊದಲ ಸೆಮಿಫೈನಲ್‌ನಲ್ಲಿ ಗುರು ಹಾಕಿ ಕ್ಲಬ್ ಹಾಗೂ ಬೆಂಗಳೂರು ಯುನೈಟೆಡ್ ಹಾಕಿ ಕ್ಲಬ್ ತಂಡಗಳು ಮುಖಾಮುಖಿ ಆಗಲಿವೆ. ಇನ್ನೊಂದು ಪಂದ್ಯದಲ್ಲಿ ಬ್ಲ್ಯೂ ಸ್ಟಾರ್ ಹಾಕಿ ಕ್ಲಬ್ ಹಾಗೂ ಬಾಂಬರ್ಸ್ ಹಾಕಿ ಕ್ಲಬ್ ತಂಡಗಳು ಸೆಣಸಲಿವೆ.